*ಅಪೊಸ್ತಲನಾದ ಪೌಲನು*

# ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಕ್ರಿ.ಶ. 56

**ಧ್ಯೇಯಗಳು:**

ಕೊರಿಂಥದಲ್ಲಿ ಸಭೆಯನ್ನು ಸ್ಥಾಪಿಸಲು ದೇವರು ಪೌಲನನ್ನು ಉಪಯೋಗಿಸಿದನು (ಅಪೊ 18:1-18), ಆದರೆ ಅವನು ಅಲ್ಲಿಂದ ಹೊರಟ ನಂತರ, ಅಲ್ಲಿದ್ದ ಕ್ರೈಸ್ತರ ನಡುವೆ ಯೇಸು ಕ್ರಿಸ್ತನ ಸುವಾರ್ತೆಗೆ ವಿರುದ್ಧವಾದ ಬೋಧನೆಗಳು ಹಾಗೂ ಅಭ್ಯಾಸಗಳು ಕಾಣಿಸಿಕೊಂಡವು. ಕೆಲವರು ವ್ಯಕ್ತಿಗತವಾಗಿ ವಿವಿಧ ರೀತಿಯ ತಪ್ಪುಗಳು ಮತ್ತು ಪಾಪಗಳ ವಿಷಯದಲ್ಲಿ ಅಪರಾಧಿಗಳಾಗಿದ್ದರು ಹಾಗೂ ಸಭೆ ವಿವಿಧ ಬಣಗಳ ನಿಮಿತ್ತ ಹಾನಿಗೆ ಒಳಗಾಗಿತ್ತು. ಅಲ್ಲಿದ್ದ ತಪ್ಪುಗಳನ್ನು ಸರಿಪಡಿಸಲು ಪೌಲನು ಈ ಪತ್ರಿಕೆಯನ್ನು ಬರೆದಿದ್ದಾನೆ. ವಿಶ್ವಾಸಿಗಳು ದೇವರನ್ನು ಆರಾಧಿಸುವ ಮತ್ತು ಸೇವೆ ಮಾಡುವ ಹಾಗೂ ಜೀವಿಸಲು ಬೇಕಾದ ಪರಿಶುದ್ಧ ಮತ್ತು ದೀನತೆಯುಳ್ಳ ಮಾರ್ಗವನ್ನು ಅವರಿಗೆ ತೋರಿಸಿದನು. ಎಲ್ಲವುಗಳಿಗಿಂತ ಹೆಚ್ಚಾಗಿ ಅವನು ಪ್ರೀತಿಯ ಮಾರ್ಗಕ್ಕೆ ಆದ್ಯತೆಯನ್ನು ಕೊಟ್ಟನು (ಅಧ್ಯಾಯ 13).

# 1 1

- **1:1** ರೋಮಾ 1:1; ಗಲಾ 1:1

*"ದೇವರ ಚಿತ್ತ"*– ಒಬ್ಬ ವಿಶ್ವಾಸಿ ಏನೇ ಆಗಿದ್ದರೂ ಅವನು ದೇವರ ಚಿತ್ತದನುಸಾರವೇ ಆಗಿರಬೇಕು ಮತ್ತು ನಾನು ಹೀಗಿರುವದಕ್ಕೆ ಕಾರಣ ದೇವರ ಚಿತ್ತವೇ ಎಂಬ ಭರವಸೆ ಅವನಿಗಿರಬೇಕು. ಪೌಲನು ಹೇಳುತ್ತಾ ಹೋದಾಗ ಸೊಸ್ಥೆನನು ಈ ಪತ್ರಿಕೆಯನ್ನು ಬರೆದನು ಎಂಬದಾಗಿ ಅನ್ನಿಸುತ್ತದೆ. ರೋಮಾ 16:22 ರೊಂದಿಗೆ ಹೋಲಿಸಿ ನೋಡಿರಿ. **2**

**1:2** ವಿಶ್ವಾಸಿಗಳೆಲ್ಲರೂ ಕ್ರಿಸ್ತನಲ್ಲಿ ಏನಾಗಿದ್ದಾರೆ ಎಂಬದರ ಬಗ್ಗೆ ಪೌಲನು ಮಾತನಾಡುತ್ತಾ ಇದ್ದಾನೆ. ಅವರು ಕರೆಯಲ್ಪಟ್ಟ ಸಮುದಾಯವಾಗಿದ್ದಾರೆ (ಮತ್ತಾಯ 16:18 ರಲ್ಲಿ ಕೊಡಲಾಗಿರುವ ಸಭೆಯ ಕುರಿತಾದ ನೋಟ್ ನೋಡಿರಿ). ಅವರು ದೇವರಿಗೆ ಸೇರಿದವರು (16:19-20; ಯೋಹಾನ 17:9-10). ಅವರು ಬೇರ್ಪಡಿಸಲ್ಪಟ್ಟವರು

"ಶುದ್ಧೀಕರಿಸಲ್ಪಟ್ಟವರು" (ಯೋಹಾನ 17:17-19). ಅವರು ಕ್ರಿಸ್ತನಲ್ಲಿರುವವರು (ಎಫೆ 1:1,4). ದೇವರು ಅವರನ್ನು ಪರಿಶುದ್ಧರಾಗಿರಲು ಕರೆದಿದ್ದಾನೆ (ದೇವರಿಗೆ ಸೇರಿದ ವಿಶೇಷ ಜನರಾಗಿರಲು ಕರೆದಿದಾನೆ. ಯಾಜಕ 20:7 ರ ನೋಟ್ ನೋಡಿರಿ). ಅವರ ಕರ್ತನು ಒಬ್ಬನೇ (8:5-6; ರೋಮಾ 10:9). **3**

**- 1:3** ರೋಮಾ 1:7. **4**

**- 1:4** ರೋಮಾ 1:8; ಫಿಲಿಪ್ಪಿ 1:3; ಕೊಲೊ 1:3; 1 ಥೆಸ 1:2; 2 ತಿಮೊ 1:3. **5**

**1:5** *"ಸಮೃದ್ಧಿ ಹೊಂದಿದವರಾಗಿದ್ದೀರಿ"*– ರೋಮಾ 10:12; 2 ಕೊರಿಂಥ 8:9; ಮತ್ತಾಯ 7:11. ದೇವರು ತನ್ನ ಸೇವೆ ಮಾಡಲು ಅವರಿಗೆ ಎಲ್ಲಾ ರೀತಿಯ ಸಾಮರ್ಥ್ಯಗಳನ್ನು ಕೊಟ್ಟಿದ್ದಾನೆ – 12:4-11,28-31; ರೋಮಾ 12:6-8. ಪೌಲನ ಕೇವಲ ಸಭೆಯಲ್ಲಿರುವ ನಾಯಕರು, ಬೋಧಕರು ಮತ್ತು ಉಪದೇಶಕರ ಬಗ್ಗೆ ಮಾತ್ರವೇ ಮಾತನಾಡುತ್ತಾ ಇಲ್ಲ, ಬದಲಾಗಿ ಸಭೆಯಲ್ಲಿರುವ ಎಲ್ಲಾ ವಿಶ್ವಾಸಿಗಳ ಬಗ್ಗೆಯೂ ಮಾತನಾಡುತ್ತಾ ಇದ್ದಾನೆ. ಕೊರಿಂಥದಲ್ಲಿದ್ದ ವಿಶ್ವಾಸಿಗಳ ಆತ್ಮೀಕ ಜೀವಿತವೇ ಆತನು ಅವರಿಗೆ ಸತ್ಯವಾದ ಸುವಾರ್ತೆಯನ್ನು ಬೋಧಿಸಿದ್ದಾನೆ ಎಂಬದಕ್ಕೆ ನಿಜವಾದ ಸಾಕ್ಷಿಯಾಗಿದೆ (ವ 6). ಅದರ ನಿಮಿತ್ತವಾಗಿ ಅವರು ಯೇಸು ಕ್ರಿಸ್ತನ ಎರಡನೇ ಬರೋಣವನ್ನು ಆಸಕ್ತಿಯಿಂದ ಎದುರುನೋಡುತ್ತಾ ಇದ್ದರು (ವ 7; ಮತ್ತಾಯ 24:30; 2 ಥೆಸ 1:7; 1 ಪೇತ್ರ 1:7,13; 4:13). **7**

**1:7** ಕೃಪಾವರ – ದೇವರು ಕೊಟ್ಟಿರುವ ತಲಾಂತು, ಸಾಮರ್ಥ್ಯ.

*"ಪ್ರತ್ಯಕ್ಷತೆ"*– ಇಲ್ಲಿ ಪೌಲನು "ಪ್ರಕಟನೆ" ಎಂಬ ಅರ್ಥವಿರುವ (ಅಪೊಕಲಿಪ್ಸಸ್) ಎಂಬ ಗ್ರೀಕ್ ಪದವನ್ನು ಉಪಯೋಗಿಸಿದ್ದಾನೆ. ಆತನು ರಹಸ್ಯವಾದ ಎತ್ತಲ್ಪಡುವಿಕೆ, ರಹಸ್ಯವಾಗಿರುವ ಯೇಸು ಕ್ರಿಸ್ತನ ಬರೋಣದ ಬಗ್ಗೆ ಏನೂ ಹೇಳಿಲ್ಲ. ಕರ್ತನಾದ ಯೇಸು ಕ್ರಿಸ್ತನು ಬಹಿರಂಗವಾಗಿ ಪ್ರತ್ಯಕ್ಷವಾಗುವದನ್ನು ಕೊರಿಂಥದ ವಿಶ್ವಾಸಿಗಳು ಎದುರು ನೋಡುತ್ತಾ ಇದ್ದರು ಎಂದು ಆತನು ಹೇಳಿದ್ದಾನೆ. ತೀತ 2:13 ರೊಂದಿಗೆ ಹೋಲಿಸಿ ನೋಡಿರಿ. **8**

**1:8** *"ಕಡೇವರೆಗು"*– ಫಿಲಿಪ್ಪಿ 1:6; ರೋಮಾ 5:9-10; 8:29-30; ಯೋಹಾನ 10:28-29; ಇಬ್ರಿ 7:25; 1 ಪೇತ್ರ 1:5.

*"ತಪ್ಪು ಹೊರಿಸಲಾಗದಂತೆ"*– ಎಫೆ 1:4. ತಪ್ಪು ಹೊರಿಸಲಾಗದಂತೆ ಅಂದರೆ ಅವರ ಮೇಲೆ ಯಾರೂ ತಪ್ಪುಹೊರಿಸಲು ಆಗುವದಿಲ್ಲ. ರೋಮಾ 4:8; 8:33-34ರೊಂದಿಗೆ ಹೋಲಿಸಿ ನೋಡಿರಿ. "ಕರ್ತನ ದಿನ" ಅಂದರೆ ಯೇಸು ಕ್ರಿಸ್ತನ ಎರಡನೇ ಬರೋಣದ ಸಮಯ (ವ 7). **9**

**1:9** *"ನಂಬಿಗಸ್ತನು"*–ದೇವರು ವಿಶ್ವಾಸಿಗಳಿಗೆ ಮಾಡಿರುವ ತನ್ನ ಎಲ್ಲಾ ವಾಗ್ದಾನಗಳನ್ನು ನೆರವೇರಿಸುವನು ಮತ್ತು ಕಡೆಯ ತನಕ ಅವರನ್ನು ಕಾಯುವನು (ವ 8; 1 ಥೆಸ 5:24; ತೀತ

1:2; 2 ತಿಮೊ 2:13).

*"ಅನ್ಯೋನ್ಯತೆ"*– 1 ಯೋಹಾನ 1:3; ಯೋಹಾನ 14:23. **10**

**1:10** 12:25; ರೋಮಾ 12:16; ಎಫೆ 4:3 ನೋಡಿರಿ. ವಿಶ್ವಾಸಿಗಳೆಲ್ಲರೂ "ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಲು . . . ಸಾಧ್ಯವೇ?" ಪುರಾವೆಗಾಗಿ. 2:16; 2 ಕೊರಿಂಥ 13:11; ಎಫೆ 4:13; ಫಿಲಿಪ್ಪಿ 1:27; 2:2; ಅಪೊ 4:32 ನೋಡಿರಿ. ಇಲ್ಲಿ ಪೌಲನು ಖಂಡಿತವಾಗಿಯೂ ಯೇಸು ಕ್ರಿಸ್ತನು ಮತ್ತು ಆತನ ಅಪೊಸ್ತಲರ ಬೋಧನೆಗಳ ಬಗ್ಗೆ ಮಾತನಾಡುತ್ತಾ ಇದ್ದಾನೆ. ವಿಶ್ವಾಸಿಗಳೆಲ್ಲರೂ ಈ ಬೋಧನೆಗಳನ್ನು ಅಂಗೀಕರಿಸಿಕೊಳ್ಳಲು ಸಾಧ್ಯವಿದೆ ಆದರೆ ಅಷ್ಟೊಂದು ಸುಲಭವಲ್ಲ ಬದಲಾಗಿ ಬಹಳ ಕಷ್ಟ. ದೇವರ ವಾಕ್ಯಗಳ ಸಂಪೂರ್ಣವಾದ ತಿಳುವಳಿಕೆ, ಅದರಲ್ಲಿ ದೃಢವಾದ ನಂಬಿಕೆ ಮತ್ತು ಪ್ರತಿಯೊಂದು ಸ್ಥಿತಿಯಲ್ಲಿಯೂ ಅದನ್ನು ಅಳವಡಿಸಿಕೊಳ್ಳುವ ದೃಢ ಸಂಕಲ್ಪವಿದ್ದರೆ ಮಾತ್ರ ಇದು ಸಾಧ್ಯ. **11-12**

**1:11-12** ಇದು ಅವರ ಅಪ್ರಬುದ್ಧತೆ ಮತ್ತು ಆತ್ಮೀಕತೆಯ ಕೊರತೆಯ ಗುರುತಾಗಿದೆ – 3:1-4. ಅವರಿಗೆ ಬಹಳ ಗೊತ್ತಿತ್ತು ಮತ್ತು ಚೆನ್ನಾಗಿ ಮಾತನಾಡುತ್ತಾ ಇದ್ದರು (ವ 5), ಆದರೆ ತಮಗೆ ಗೊತ್ತಿದ್ದ ಸತ್ಯವನ್ನು ಸ್ವಲ್ಪ ಮಾತ್ರವೇ ಅಭ್ಯಾಸ ಮಾಡುತ್ತಾ ಇದ್ದರು – ಇದು ಎಲ್ಲಾ ಕಡೆಗಳಲ್ಲಿ ಮತ್ತು ಯಾವಾಗಲೂ ಕಾಣಿಸಿಕೊಳ್ಳುವ ಸಹಜವಾದ ದೋಷವಾಗಿದೆ. ಅವರು ಜನರ ವಿಷಯದಲ್ಲಿಯೂ ಬಹಳ ವಿಭಜನೆಗಳನ್ನು ತೋರುತ್ತಾ ಇದ್ದರು-ಇದು ಎಲ್ಲಾ ಕಾಲದಲ್ಲಿಯೂ ಕಾಣಸಿಗುವ ಮತ್ತೊಂದು ದೋಷವಾಗಿದೆ (3:5-8). **12**

**1:12** *"ಅಪೊಲ್ಲೋಸನು"* – ಅಪೊ 18:24-28. "ಕೇಫ" ಪೇತ್ರನಿಗಿರುವ ಇನ್ನೊಂದು ಹೆಸರು. ಎರಡೂ ಹೆಸರುಗಳ ಅರ್ಥ ಬಂಡೆ.

*"ಕ್ರಿಸ್ತನವನು"*– ನಾವು ಕ್ರಿಸ್ತನನ್ನು ಮಾತ್ರವೇ ಅನುಸರಿಸುವವರು ಎಂಬದಾಗಿ ಹೇಳುವವರು ಇತರರಿಗಿಂತ ಹೆಚ್ಚು ಪರಿಪಕ್ವತೆಯುಳ್ಳವರು ಮತ್ತು ಆತ್ಮೀಕರು ಆಗಿರಲಿಲ್ಲ, ಯಾಕಂದರೆ ಸಭೆಯಲ್ಲಿ ವಿಭಾಗಗಳನ್ನು ಮಾಡಲು ಮತ್ತು ಇತರರನ್ನು ಕೀಳಾಗಿ ಕಾಣಲು ಈ ಕಾರಣವನ್ನು ಕೊಡುವ ಅವರು ತಾವು ಪರಿಪಕ್ವರಲ್ಲ ಎಂಬದನ್ನು ಅವರೇ ತೋರಿಸಿದ್ದಾರೆ. ಇದಲ್ಲದೆ "ನಾವು ಪೌಲವನವರು" ಎಂಬದಾಗಿ ಒಂದು ಗುಂಪಿನವರು ಹೇಳುತ್ತಾ ಇದ್ದಾರೆ ಎಂಬ ವಿಷಯ ತಿಳಿದಾಗ ಪೌಲನಿಗೆ ಅದು ಇಷ್ಟವಾಗಲಿಲ್ಲ ಎಂಬದನ್ನು ಗಮನಿಸಿರಿ. ಅವನಿಗೆ ಇಂಥವುಗಳು ಬೇಕಾಗಿರಲಿಲ್ಲ. ಅವನು ಜನರನ್ನು ಯಾವಾಗಲೂ ಕ್ರಿಸ್ತನ ಕಡೆಗೆ ನಡೆಸುತ್ತಾ ಇದ್ದನೇ ಹೊರತು ತನ್ನ ಕಡೆಗೆ ಸೆಳೆದುಕೊಳ್ಳುತ್ತಾ ಇರಲಿಲ್ಲ. **13**

**1:13** ಕ್ರಿಸ್ತನನ್ನಾಗಲಿ ಆತನ ದೇಹವನ್ನಾಗಲಿ ವಿಭಜನೆ ಮಾಡಲು ಆಗುವದಿಲ್ಲ (12:12-13). ವಿಶ್ವಾಸಿಗಳು ಈ ಸಂಗತಿಯನ್ನು ಗುರುತಿಸಿಕೊಳ್ಳಬೇಕು, ಒಬ್ಬರನ್ನೊಬ್ಬರು ಅಂಗೀಕರಿಸಿಕೊಳ್ಳಬೇಕು, ಮತ್ತು ಕ್ರಿಸ್ತನಲ್ಲಿ ತಮಗಿರುವ ಐಕ್ಯತೆಗನುಸಾರವಾಗಿ ಜೀವಿಸಬೇಕು

(ಎಫೆ 4:2). ಪೌಲನು ಈ ವಾಕ್ಯದಲ್ಲಿ ಹೇಳುತ್ತಾ ಇರುವದೇನೆಂದರೆ, "ಕ್ರಿಸ್ತನಿಗೆ ಹೋಲಿಸಿಕೊಳ್ಳಲು ನಾವು ಎಷ್ಟರವರು? ಯಾವ ಮನುಷ್ಯನನ್ನು ಅತಿಯಾಗಿ ಹೊಗಳಬಾರದು". **14-17**

**1:14-17** ಮತ್ತಾಯ 3:6; 28:19; ಮಾರ್ಕ 16:16; ಅಪೊ 2:38 ರಲ್ಲಿ ದೀಕ್ಷಾಸ್ನಾನದ ಕುರಿತಾದ ನೋಟ್ಸ್ ನೋಡಿರಿ. ರಕ್ಷಣೆಯ ವಿಷಯಕ್ಕೆ ಬಂದರೆ ಪಶ್ಚಾತ್ತಾಪ ಮತ್ತು ನಂಬಿಕೆ ಪ್ರಮುಖ ವಿಷಯಗಳು ಎಂಬದನ್ನು ಪೌಲನು ಬಲ್ಲವನಾಗಿದ್ದನು (ಅಪೊ 17:30; 20:21; ರೋಮಾ 10:9-10). ಒಂದುವೇಳೆ ರಕ್ಷಣೆ ಹೊಂದಲು ದೀಕ್ಷಾಸ್ನಾನ ಅವಶ್ಯವಾಗಿದ್ದರೆ (ಇಂದು ಕೆಲವರು ಇದನ್ನು ದೃಢವಾಗಿ ವಾದಿಸುತ್ತಾರೆ) ಪೌಲನು ಇದರ ವಿಷಯದಲ್ಲಿ ಇಂಥಾ ಮನೋಭಾವನೆಯನ್ನು ತೋರಿಸುತ್ತಾ ಇದ್ದನೇ? ದೀಕ್ಷಾಸ್ನಾನದ ವಿಷಯದಲ್ಲಿ ಪ್ರಶ್ನೆ ಮಾಡುವದಕ್ಕಿಂತ ವಿಶ್ವಾಸಿಗಳೆಲ್ಲರೂ ಒಬ್ಬರೊಂದಿಗೊಬ್ಬರು ಅನ್ಯೋನ್ಯವಾಗಿ ಜೀವಿಸುವದೇ ಪೌಲನಿಗೆ ಪ್ರಾಮುಖ್ಯವಾದ ವಿಷಯವಾಗಿತ್ತು. **17-25**

**1:17-25** ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ದೀಕ್ಷಾಸ್ನಾನ ಮಾಡಿಸಿರಿ (ಮತ್ತಾಯ 28:19) ಎಂಬದಾಗಿ ಹೇಳಿರುವದನ್ನು ಪೌಲನು 17ನೇ ವಚನದಲ್ಲಿ ನಿರಾಕರಿಸುತ್ತಾ ಇಲ್ಲ ಅಥವಾ ವಿಶ್ವಾಸಿಗಳೆಲ್ಲರೂ ದೀಕ್ಷಾಸ್ನಾನ ತೆಗೆದುಕೊಳ್ಳಬೇಕು ಎಂಬ ವಿಷಯವನ್ನು ವಿರೋಧಿಸುತ್ತಲೂ ಇಲ್ಲ. ಅವನು ತನ್ನ ಸೇವೆಯ ಪ್ರಾಮುಖ್ಯತೆಯ ಬಗ್ಗೆ ಮಾತನಾಡುತ್ತಾ ಇದ್ದಾನೆ, ಅತ್ಯಂತ ಪ್ರಾಮುಖ್ಯವಾದ ಸಂಗತಿಯನ್ನು ವ್ಯಕ್ತಪಡಿಸುತ್ತಾ ಇದ್ದಾನೆ – ಅದೇನೆಂದರೆ ಸುವಾರ್ತೆ ಸಾರುವದು. ಪೌಲನು ಇಲ್ಲಿ ತನ್ನ ಬೋಧನೆಯಲ್ಲಿ ಮಾನುಷಿಕ ಜ್ಞಾನವನ್ನು ಉಪಯೋಗಿಸುತ್ತಾ ಇರಲಿಲ್ಲ ಎಂಬದನ್ನು ಗಮನಿಸಿರಿ. ಅಂಥ ಜ್ಞಾನವು ನಿಜವಾಗಿಯೂ ಮೂರ್ಖತನವಾಗಿದೆ ಎಂಬದನ್ನು ಅವನು ಬಲ್ಲವನಾಗಿದ್ದನು (ವ 20) ಮತ್ತು ಅದರ ಮೂಲಕ ಯಾರಿಗೂ ದೇವರ ಕುರಿತಾದ ನಿಜವಾದ ತಿಳುವಳಿಕೆಯನ್ನು ಹೊಂದಲಾರರು ಎಂಬದನ್ನೂ ತಿಳಿದಿದ್ದನು (ವ 21). ಜನರನ್ನು ರಕ್ಷಣೆಯ ಮಾರ್ಗಕ್ಕೆ ನಡೆಸಲು ದೇವರು ಸುವಾರ್ತೆಯ ಸ್ಪಷ್ಟ ಬೋಧನೆಯನ್ನು ನೇಮಿಸಿದ್ದಾನೆ ಎಂಬದನ್ನು ಆತನು ಬಲ್ಲವನಾಗಿದ್ದನು (ವ 21,23; 15:1-2; ರೋಮಾ 1:16). ಮಾನವ ಜ್ಞಾನದಿಂದ ಬೋಧನೆ ಮಾಡುವದೂ ಯೇಸು ಕ್ರಿಸ್ತನ ಶಿಲುಬೆಯ ಶಕ್ತಿಯನ್ನು ನಿರಾಕರಿಸುವದು ಒಂದೇ ಆಗಿದೆ. ದೇವರಿಗೆ ಇಷ್ಟವಿಲ್ಲದೆ ಇರುವ ಯಾವುದೇ ಕಾರ್ಯವನ್ನ ನಾವು ಮಾಡಿದರೂ, ಮಾನವರ ರಕ್ಷಣೆಗೆ ಅದರಿಂದ ಯಾವುದೇ ಪ್ರಯೋಜನವಾಗುವದಿಲ್ಲ ಎಂಬದೂ ನಮಗೆ ಚೆನ್ನಾಗಿ ಗೊತ್ತಿರುವ ವಿಷಯವಾಗಿದೆ. 18ನೇ ವಚನವು ಎರಡು ರೀತಿಯ ಜನರ ಬಗ್ಗೆ ಮಾತನಾಡುತ್ತದೆ – "ನಾಶವಾಗುತ್ತಾ ಇರುವವರು" ಮತ್ತು "ರಕ್ಷಣೆ ಹೊಂದುತ್ತಾ ಇರುವವರು." ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಜನರು ತೋರುವ ಮನೋಭಾವನೆ ಅವರು ಯಾವ ಗುಂಪಿನವರಾಗಿದ್ದಾರೆ ಎಂಬದನ್ನು ಪ್ರಕಟಪಡಿಸುತ್ತದೆ. ಈ ವಾಕ್ಯಗಳಲ್ಲಿ

“ನಾಶವಾಗುವವರು” (ಯೋಹಾನ 3:16; ಲೂಕ 19:10) ಎರಡು ಬಗೆಯವರಾಗಿದ್ದಾರೆ (ವ 22) – ಧರ್ಮೋಪದೇಶವನ್ನು ಪಾಲಿಸುವ ಯೆಹೂದ್ಯರು ಮತ್ತು ತತ್ವಗಳನ್ನು ಪ್ರೀತಿಸುವ ವಿಗ್ರಹಾರಾಧಕರಾದ ಗ್ರೀಕರು. ಈ ಎರಡೂ ತರಹದ ತರಹದ ಜನರಿಗೆ ಶಿಲುಬೆಯ ಮಾತು ಹುಚ್ಚು ಮಾತಾಗಿದೆ. ಯಾಕೆ? ಯಾಕಂದರೆ ಅವರಿಗೆ ಇದು ಅರ್ಥವಾಗುವದಿಲ್ಲ (2 ಕೊರಿಂಥ 4:4) ಮತ್ತು ಇದು ಅವಶ್ಯ ಎಂದು ಅವರು ನಂಬುವದಿಲ್ಲ (ಸುವಾರ್ತೆಯು ಮಾನವನ ಯೋಚನೆಯಲ್ಲ ಬದಲಾಗಿ ದೇವರ ಯೋಚನೆಯಾಗಿದೆ – ರೋಮಾ 8:5-7). ಎಲ್ಲದಕ್ಕಿಂತ ಹೆಚ್ಚಾಗಿ, ಇದು ಅವರಿಗೆ ಬೇಕಾಗಿಲ್ಲ (ಅವರು ತಮ್ಮಲ್ಲಿಯೇ ವಿಶ್ವಾಸವುಳ್ಳವರು ಮತ್ತು ಗರ್ವಿಷ್ಠರು ಹಾಗೂ ಶಿಲುಬೆಯು ಅವರನ್ನು ಧೂಳಿನಂತೆ ತಗ್ಗಿಸಿಬಿಡುತ್ತದೆ). ಇವತ್ತಿಗೂ ಅಂಥ ಅನೇಕ ಜನರಿದ್ದಾರೆ. ಸುಳ್ಳು ಹೇಳುವದು, ಮೋಸ ಮಾಡುವದು, ಕದಿಯುವದು, ತಾತ್ಕಾಲಿಕ ಭೋಗಗಳಿಗಾಗಿ ಜೀವಿಸುವದು ಅಥವಾ ಮಾನವರು ನಿರ್ಮಿಸಿರುವ ಪ್ರತಿಮೆಗಳಿಗೆ ಅಡ್ಡಬೀಳುವದು ಮೂರ್ಖತನ ಎಂದು ಅವರು ಯೋಚಿಸುವದೇ ಇಲ್ಲ. ಅವರಿಗೆ (ದೇವರ ಜ್ಞಾನವಾಗಿರುವ) ಶಿಲುಬೆ (ವ 24) ಮಾತ್ರವೇ ಮೂರ್ಖತನವಾಗಿದೆ! ಆದರೆ ಕೆಲವರು “ರಕ್ಷಣೆಯ ಮಾರ್ಗದಲ್ಲಿದ್ದಾರೆ” (ರಕ್ಷಣೆ ಹೊಸ ಜನನದೊಂದಿಗೆ ಪ್ರಾರಂಭವಾಗುತ್ತದೆ – ಯೋಹಾನ 1:12-13; 3:3-8, ಮತ್ತು ಪುನರುತ್ಥಾನ ಹಾಗೂ ವಿಶ್ವಾಸಿಗಳು ಪ್ರಭಾವ ಸ್ಥಾನಕ್ಕೆ ಹೋಗುವ ತನಕ ಮುಂದುವರೆಯುತ್ತದೆ – ರೋಮಾ 8:23,30). ಅವರಿಗೆ ಶಿಲುಬೆಯು ದೇವರ ಶಕ್ತಿಯಾಗಿದೆ (ವ 18,24; ರೋಮಾ 1:16). ಅವರು ಅದರ ಶಕ್ತಿಯನ್ನು ಅನುಭವಿಸಿದ್ದಾರೆ. ಅದು ಅವರ ಜೀವಿತಗಳನ್ನು ಸಂಪೂರ್ಣವಾಗಿ ಬದಲಾಯಿಸಿದೆ (2 ಕೊರಿಂಥ 5:17). ಅವರಿಗೆ ಇದು ದೇವರ ಜ್ಞಾನವಾಗಿದೆ (ವ 24). ನಂಬಿಕೆಯಿಡದೆ ಮತ್ತು ಕ್ರಿಸ್ತನನ್ನು ತಿಳಿದುಕೊಳ್ಳದೆ ಇರುವ ಲೋಕದ ಬುದ್ಧಿವಂತರು ಹಾಗೂ ತತ್ವಜ್ಞಾನಿಗಳ ಕೆಲಸಗಳಿಗಿಂತಲೂ ಶಿಲುಬೆಯ ಕಾರ್ಯದಲ್ಲಿ ದೇವರ ಜ್ಞಾನವು ಅಪಾರವಾದದ್ದು ಎಂಬದನ್ನು ಅವರು ತಿಳಿದಿದ್ದಾರೆ. **19**

**- 1:19** ಯೆಶಾಯ 29:14. **20**

**1:20** ನಿಜವಾದ ಜ್ಞಾನವು ಒಬ್ಬನೇ ನಿಜವಾದ ದೇವರ ಮೇಲಿನ ಭಯದಿಂದ ಪ್ರಾರಂಭವಾಗುತ್ತದೆ ಆದರೆ ಈ ಲೋಕದ ಬುದ್ಧಿವಂತರು, ಪಂಡಿತರು ಹಾಗೂ ಜ್ಞಾನಿಗಳಲ್ಲಿ ಇವುಗಳು ಇರುವದಿಲ್ಲ (ಯೋಬ 28:28; ಕೀರ್ತನೆ 111:10; ಜ್ಞಾನೋ 1:7 ನೋಡಿರಿ). ಆದ್ದರಿಂದ ಅವರಲ್ಲಿ ಜ್ಞಾನದ ಪ್ರಾರಂಭವೇ ಇರುವದಿಲ್ಲ. ಆದರೆ ಇಲ್ಲಿ ಮುಖ್ಯ ವಿಷಯವೇನೆಂದರೆ ದೇವರು ಅವರ ಜ್ಞಾನವನ್ನೆಲ್ಲಾ ಶಿಲುಬೆಯ ಮೂಲಕ ಮೂರ್ಖತನವನ್ನಾಗಿ ಮಾಡಿದ್ದಾನೆ. ಶಿಲುಬೆಯು ಮಾನವರನ್ನು ರಕ್ಷಿಸುವ ದೇವರ ಮಾರ್ಗಗಳಲ್ಲಿ ಒಂದಾಗಿದೆ ಮತ್ತು ಈ ಮಾರ್ಗದ ಕುರಿತು ಲೋಕದ ಬುದ್ಧಿವಂತರು ಒಮ್ಮೆಯೂ ಆಲೋಚನೆ ಮಾಡಲಿಲ್ಲ. ಜ್ಞಾನದ ಮಾರ್ಗವು ಯಾರಿಗೂ ರಕ್ಷಣೆಯನ್ನು

ಕೊಡಲಾರದು. ಅದು ದೇವರ ಮಾರ್ಗವಲ್ಲ. ಕೊಲೊ 2:8 ನೋಡಿರಿ. **21**

**1:21** ಇಲ್ಲಿ ಮೂರು ಪ್ರಮುಖ ಸತ್ಯಗಳನ್ನು ನಾವು ನೋಡಬಹುದು. ಮೊದಲನೆಯದಾಗಿ, ಮಾನವರು ತಮ್ಮ ಎಲ್ಲಾ ತತ್ವಗಳು, ಬುದ್ಧಿವಂತಿಕೆಯ ಚಟುವಟಿಕೆ ಅಥವಾ ರಹಸ್ಯಕರವಾದ ತಿಳುವಳಿಕೆಗಳಿಂದ ದೇವರ ಜ್ಞಾನಕ್ಕೆ ಸಮನಾಗಲಿಲ್ಲ. ಆದರೆ ಇದಕ್ಕೆ ವಿರುದ್ಧವಾದದ್ದು ಉಂಟಾಯಿತು – ಮಾನವರಲ್ಲಿ ಒಮ್ಮೆ ಇದ್ದ ದೇವರ ಜ್ಞಾನವನ್ನು ಅವರು ಕಳೆದುಕೊಂಡರು (ರೋಮಾ 1:21-23 ನೋಡಿರಿ). ಎರಡನೆಯದಾಗಿ, ದೇವರು ಶಿಲುಬೆಯ ಕುರಿತಾದ ಬೋಧನೆಯ ಮೂಲಕ ಬುದ್ಧಿವಂತರಿಗೆ ಮೂರ್ಖತನ ಎನಿಸುವ ಕಾರ್ಯಗಳಿಂದ ಜನರನ್ನು ರಕ್ಷಿಸುತ್ತಾನೆ (ವ 18).

*"ಹುಚ್ಚು ಮಾತು ಎನಿಸಿಕೊಂಡಿರುವ ನಮ್ಮ ಪ್ರಸಂಗ"*– "ಹುಚ್ಚುತನದ ನಮ್ಮ ಪ್ರಸಂಗ" ಎಂಬದಕ್ಕಿಂತಲೂ ಇದು ಗ್ರೀಕ್ ಭಾಷೆಯ ಉತ್ತಮ ಭಾಷಾಂತರ ಎಂಬದಾಗಿ ಅನ್ನಿಸುತ್ತದೆ. ವಚನಗಳು 23 ಮತ್ತು 25 ಹೋಲಿಸಿ ನೋಡಿರಿ. ಸುವಾರ್ತಾ ಸಂದೇಶವು ಖಂಡಿತವಾಗಿಯೂ ಹುಚ್ಚುತನಕ್ಕೆ ವಿರುದ್ಧವಾಗಿದೆ, ಆದರೆ ತಮ್ಮ ಸ್ವಂತ ದೃಷ್ಟಿಗೆ ತಮ್ಮನ್ನು ಜ್ಞಾನವಂತರೆಂದುಕೊಳ್ಳುವವರಿಗೆ ಮಾತ್ರ ಇದು ಹುಚ್ಚು ಮಾತಾಗಿದೆ. ಪೌಲನ ಮಾತುಗಳ ಅರ್ಥ ಇದುವೇ ಆಗಿದೆ. ಮೂರನೆಯದಾಗಿ, ಈ ಪ್ರಸಂಗವನ್ನು ನಂಬುವವರಿಗೆ ಮಾತ್ರವೇ ರಕ್ಷಣೆಯಾಗುತ್ತದೆ (ರೋಮಾ 1:16-17). **22**

- **1:22** ಮಾರ್ಕ 8:11; ಯೋಹಾನ 6:30; ಮತ್ತಾಯ 12:39-40.

*"ಸೂಚಕಕಾರ್ಯಗಳು"*, *"ಜ್ಞಾನ"*– ಎಲ್ಲವುಗಳಿಗೆ ಯಾವುದು ಮೂಲ ಎಂಬದಾಗಿ ಅವರು ಅಂದುಕೊಳ್ಳುತ್ತಾ ಇದ್ದರೋ ಅವುಗಳನ್ನೇ ಹುಡುಕಿದರು. ದೇವರು ಇದು ಸತ್ಯ ಎಂಬದಾಗಿ ಹೇಳಿರುವದನ್ನು ಸುಮ್ಮನೆ ನಂಬಲು ಅವರಿಗೆ ಸಮಾಧಾನವಿರಲಿಲ್ಲ. **23**

**1:23** *"ಎಡವುವ ಕಲ್ಲು"*– ಶಿಲುಬೆಗೇರಿಸಲ್ಪಟ್ಟ ಮೆಸ್ಸೀಯನು ಅವನ ನಿರೀಕ್ಷೆಗಳು ಅಥವಾ ಬಯಕೆಗಳಿಗನುಸಾರವಾಗಿ ಇರಲಿಲ್ಲ.

*"ಹುಚ್ಚು ಮಾತು"*– ಅಪರಾಧಿಗಳನ್ನು ಮಾತ್ರವೇ ಶಿಲುಬೆಗೆ ಹಾಕುತ್ತಾರೆ, ಹೀಗಿರುವದರಿಂದ ಶಿಲುಬೆಗೆ ಹಾಕಲ್ಪಟ್ಟ ಅಪರಾಧಿ ಜನರಿಗೆ ರಕ್ಷಣೆಯನ್ನು ಕೊಡಲು ಅಥವಾ ತಾವು ಹುಡುಕುವ ಜ್ಞಾನವನ್ನು ಪ್ರದರ್ಶಿಸಲು ಹೇಗೆ ಸಾಧ್ಯ ಎಂಬದು ಅವರ ವಾದವಾಗಿದೆ. **24**

**1:24** *"ಕರೆಯಲ್ಪಟ್ಟವರು"*– ರೋಮಾ 1:6; 8:30. ವ 24ರಲ್ಲಿ ಹೇಳಲಾಗಿರುವ ಕರೆಯಲ್ಪಟ್ಟವರು, ವ 18ರಲ್ಲಿ ಹೇಳಲಾಗಿರುವ ರಕ್ಷಣೆಯ ಮಾರ್ಗದಲ್ಲಿರುವವರಾಗಿದ್ದಾರೆ. **25**

**1:25** ದೇವರ ಜ್ಞಾನವು ಮಾನವನ ಜ್ಞಾನಕ್ಕಿಂತ ಎಷ್ಟು ಭಿನ್ನವಾಗಿದೆ ಮತ್ತು ಉನ್ನತವಾಗಿದೆ ಎಂಬದನ್ನು ನೋಡಿರಿ. ಯೆಶಾಯ 55:8-9; ರೋಮಾ 11:33-36 ರೊಂದಿಗೆ ಹೋಲಿಸಿ ನೋಡಿರಿ. **26**

**1:26** ಇದು ಆಗಲೂ ಈಗಲೂ ಸತ್ಯವಾಗಿದೆ. ಭಾರತದಲ್ಲಿಯೂ ದೇವರು ಬುದ್ಧಿವಂತರು ಅಥವಾ ಉನ್ನತ ವರ್ಗಗಳಿಂದ ಕೆಲವರನ್ನು ಕರೆದಿದ್ದಾನೆಯೇ ಹೊರತು ಹೆಚ್ಚಿನವರನ್ನು ಕರೆದಿಲ್ಲ. ಬಡವರು ಮತ್ತು ವಿದ್ಯಾಬುದ್ಧಿಯಿಲ್ಲದವರು, ಕೆಳವರ್ಗಗಳವರನ್ನು ಕರೆಯುವದು ಆತನಿಗೆ ಮೆಚ್ಚಿಕೆಯಾದ ಕಾರ್ಯವಾಗಿದೆ. ಮತ್ತಾಯ 11:25-26ರಲ್ಲಿ ಬರೆಯಲ್ಪಟ್ಟಿರುವ ಯೇಸು ಕ್ರಿಸ್ತನ ಮಾತುಗಳನ್ನು ಹೋಲಿಸಿ ನೋಡಿರಿ. ಜಾತಿ ವರ್ಗ ಇವುಗಳನ್ನು ಆತನು ದಯೆಯಿಂದ ನೋಡುವದಿಲ್ಲ. **27-29**

**1:27-29** ದೀನತೆಯುಳ್ಳವರು ಮತ್ತು ಕಡೆಗಣಿಸಲ್ಪಟ್ಟವರನ್ನು ತನ್ನ ಜನರನ್ನಾಗಿ ಆಯ್ಕೆ ಮಾಡಿಕೊಂಡದ್ದರಲ್ಲಿ ನಾವು ದೇವರ ಉದ್ದೇಶವನ್ನು ಇಲ್ಲಿ ನೋಡಬಹುದು. ಆತನು ಮಾನವರ ಗರ್ವವನ್ನು ಕಡೆಗಣಿಸುತ್ತಾನೆ ಮತ್ತು ತಮ್ಮ ಬಲ ಹಾಗೂ ಪ್ರಭಾವಗಳಲ್ಲಿ ಹೆಚ್ಚಳಪಡುವವರನ್ನು ಆತನು ಸಹಿಸುವದಿಲ್ಲ. ಯೆರೆ 9:23; ಜ್ಞಾನೋ 6:16-17; 16:5; ಯೆಶಾಯ 1:31; 2:12-18; 13:11; ಯೆರೆ 17:5; ಮತ್ತಾಯ 18:3-4; ಯಾಕೋಬ 4:6 ನೋಡಿರಿ. ಆತನು ಕಾರ್ಯಗಳನ್ನು ಯಾವ ರೀತಿ ಏರ್ಪಡಿಸಿದ್ದಾನೆಂದರೆ ಮಾನವರು ಯಾವುದರಲ್ಲಿ ಹೆಚ್ಚಳಪಡುತ್ತಾರೋ ಅವುಗಳು ಅಪ್ರಯೋಜನವಾಗುತ್ತವೆ ಮತ್ತು ಯಾವ ಮಾನವನೂ ಆತನ ಪ್ರಸನ್ನತೆಯಲ್ಲಿ ಹೆಚ್ಚಿಸಿಕೊಳ್ಳಲು ಆಗುವದಿಲ್ಲ – ರೋಮಾ 3:27; ಎಫೆ 2:9. **30**

**1:30** ವಿಶ್ವಾಸಿಗಳು ಕ್ರಿಸ್ತನಲ್ಲಿರುವವರಾಗಿದ್ದಾರೆ (ಎಫೆ 1:1,4). ತಂದೆಯಾದ ದೇವರು ಅವರನ್ನು ಆಯ್ಕೆ ಮಾಡಿಕೊಂಡಿರುವದರಿಂದ ಅವರು ಅಲ್ಲಿದ್ದಾರೆ. ಮತ್ತು ಯೇಸು ಕ್ರಿಸ್ತನೇ ಎಲ್ಲಾ ಸಮಯಗಳಲ್ಲಿಯೂ ಮತ್ತು ನಿತ್ಯತ್ವದಲ್ಲಿ ಅವರ ರಕ್ಷಣೆಗೆ ಅವಶ್ಯವಾಗಿರುವ ಎಲ್ಲವೂ ಆಗಿದ್ದಾನೆ. ಲೋಕಕ್ಕೆ ಗೊತ್ತಿರುವ ಅಥವಾ ಗೊತ್ತಾಗಲಿರುವ ಎಲ್ಲಾ ಜ್ಞಾನಗಳಿಗಿಂತಲೂ ದೇವರು ಉತ್ತಮನಾಗಿದ್ದಾನೆ (ಕೊಲೊ 2:2-3,8,9). ಯೇಸು ಕ್ರಿಸ್ತನನ್ನು ಅರಿಯದೆ ಇರುವ ಬುದ್ಧಿವಂತನು ಅಥವಾ ತತ್ವಜ್ಞಾನಿಗಿಂತಲೂ ಯೇಸು ಕ್ರಿಸ್ತನಲ್ಲಿರುವ ವಿದ್ಯಾಭ್ಯಾಸವಿಲ್ಲದ ಮತ್ತು ಕೆಳಹಂತದಲ್ಲಿರುವ ವಿಶ್ವಾಸಿಯು ನಿಜವಾಗಿರುವ ಜ್ಞಾನವನ್ನು ಹೆಚ್ಚಾಗಿ ಹೊಂದಿದವನಾಗಿರುತ್ತಾನೆ.

*"ನೀತಿ"*– ಮತ್ತಾಯ 5:6; ರೋಮಾ 1:17; 3:21-26; 10:9-10; ಫಿಲಿಪ್ಪಿ 3:9ರ ನೋಟ್ಸ್ ನೋಡಿರಿ.

*"ಶುದ್ಧೀ" ಅಥವಾ "ಪರಿಶುದ್ಧತೆ"*– ಯೋಹಾನ 17:17-19; ರೋಮಾ 1:7ರ ನೋಟ್ಸ್ ನೋಡಿರಿ.

*"ವಿಮೋಚನೆ"*– ಮತ್ತಾಯ 20:28; ಕೀರ್ತನೆ 78:35ರ ನೋಟ್ಸ್ ನೋಡಿರಿ. ವಿಶ್ವಾಸಿಗಳಲ್ಲಿ ತಾವಾಗಿಯೇ ಇವುಗಳು ಯಾವುವೂ ಇರಲಿಲ್ಲ ಆದರೆ ಕ್ರಿಸ್ತನಲ್ಲಿರುವಾಗ ಇವುಗಳು ದೊರೆತವು (ಎಫೆ 1:1,4). **31**

**1:31** ಯೆರೆ 9:24 . ಕೀರ್ತನೆ 34:2; 44:8ರೊಂದಿಗೆ ಹೋಲಿಸಿ ನೋಡಿರಿ.

"*ಕರ್ತನು*"– ಯೆರೆ 9:24ರಲ್ಲಿ ಇಬ್ರಿಯ ಪದ ಯೆಹೋವ ಎಂಬದಾಗಿದೆ; ಆದರೆ 1 ಕೊರಿಂಥದಲ್ಲಿ ಅದು ಕ್ರಿಸ್ತನನ್ನು ಸೂಚಿಸುತ್ತದೆ. ಯೇಸು ಕ್ರಿಸ್ತನ ಯೆಹೋವನ ಪ್ರತಿರೂಪವಾಗಿದ್ದಾನೆ. ಲೂಕ 2:11ರಲ್ಲಿ ಇದನ್ನು ಕಲಿಸುವ ಇತರೆ ವಚನಭಾಗಗಳನ್ನು ನೋಡಿರಿ.

# 2[1]

**2:1** "*ಜ್ಞಾನ*"– ಅಂದರೆ ಮಾನವರು ಜ್ಞಾನ ಎಂಬದಾಗಿ ಯೋಚಿಸುವದು. **2**

**2:2** ಲೋಕದ ಜ್ಞಾನ ಹಾಗೂ ತತ್ವಗಳಿಗೆ ಪ್ರಸಿದ್ಧವಾಗಿದ್ದ ಅಥೇನೆಯಿಂದ ಪೌಲನು ನೇರವಾಗಿ ಕೊರಿಂಥಕ್ಕೆ ಬಂದನು (ಅಪೊ 17:15; 18:1). ಸುವಾರ್ತಾ ಹೃದಯವನ್ನು ಕಾಪಾಡಿಕೊಳ್ಳುವದು ಎಷ್ಟು ಪ್ರಾಮುಖ್ಯ ಎಂಬದನ್ನು ಆತನು ನೂತನವಾಗಿ ಮನವರಿಕೆ ಮಾಡಿಕೊಂಡನು. ಸುವಾರ್ತೆಯ ಹೃದಯವು ಯೇಸು ಕ್ರಿಸ್ತನೇ ಆಗಿದ್ದಾನೆ, ಯೇಸು ಕ್ರಿಸ್ತನು ಮಾನವರ ಪಾಪಗಳಿಗಾಗಿ ಶಿಲುಬೆಯ ಮರಣವನ್ನು ಅನುಭವಿಸಿದನು. ಒಂದುವೇಳೆ ಯಾವನಾದರೂ ಬೋಧಕನು ಇದರಿಂದ ದೂರ ಹೋದರೆ ಅವನು ದೇವರ ಪ್ರಕಟನೆಯ ಮುಖ್ಯ ವಿಷಯದಿಂದಲೇ ದೂರ ಹೋಗುವವನಾಗಿದ್ದಾನೆ ಹಾಗೂ ದುರ್ಬಲ ಮತ್ತು ಪರಿಣಾಮಕಾರಿಯಿಲ್ಲದ ಸೇವೆಯನ್ನು ಹೊಂದುವ ಅಪಾಯಕ್ಕೆ ಒಳಗಾಗುತ್ತಾನೆ (ಆದರೆ ಅದು ಮನುಷ್ಯರ ದೃಷ್ಟಿಗೆ ಮಾತ್ರ ಸಫಲವಾಗಿ ಕಾಣುತ್ತಾ ಇರುತ್ತದೆ ಅಷ್ಟೆ). **3**

**2:3** ಮಾನವರು ನನಗೆ ಏನು ಮಾಡುವರೋ ಎಂಬದಾಗಿ ಆತನು ಭಯಪಡಲಿಲ್ಲ. ಕೊರಿಂಥದಲ್ಲಿರುವ ಜನರು, ಅಥೇನೆಯ "ಬುದ್ಧಿವಂತರ" ಹಾಗೆ ಸುವಾರ್ತೆಗೆ ವ್ಯತ್ಯಸ್ಥವಾಗಿ ನಡೆದುಕೊಳ್ಳುತ್ತಾರೇನೋ ಮತ್ತು ಆತನಲ್ಲಿ ಅವರಿಗೆ ಕೊರತೆ ಇರುವದರಿಂದ ತನ್ನ ಬೋಧನೆ ವಿಫಲವಾಗುವದೇನೋ ಎಂಬದಾಗಿ ಮಾತ್ರವೇ ಆತನು ಭಯಪಡುತ್ತಾ ಇದ್ದನು. ಬಲಹೀನತೆ ಮತ್ತು ನಡುಗುವಿಕೆ ಯಾವುದೇ ಬೋಧಕನಲ್ಲಿದ್ದರೂ ಅವುಗಳು ಸ್ವ-ಆತ್ಮವಿಶ್ವಾಸ, ಬುದ್ಧಿವಂತಿಕೆಯ ಮೇಲೆ ಆತುಕೊಳ್ಳುವಿಕೆ ಅಥವಾ ಚಿಂತೆಯಿಲ್ಲದ ಮನೋಭಾವನೆಗಿಂತ ಉತ್ತಮವಾದದ್ದಾಗಿದೆ. 2 ಕೊರಿಂಥ 12:9-10ರೊಂದಿಗೆ ಹೋಲಿಸಿ ನೋಡಿರಿ. **4**

**2:4** 1:17 ನೋಡಿರಿ. ಅವಶ್ಯಕತೆ ಇದೆ ಎಂಬದಾಗಿ ಅನ್ನಿಸುವಾಗ ಪೌಲನು ಬುದ್ಧಿವಂತ ಹಾಗೂ ಮನವೊಲಿಸುವಂಥ ಮಾತುಗಳನ್ನಾಡುವ ಸಾಮರ್ಥ್ಯವನ್ನು ಹೊಂದಿದ್ದನು (ಅಪೊ 17:22-31). ಆದರೆ ಪ್ರಸಂಗದಲ್ಲಿ ಸರಿಯಾದ ಸಂದೇಶ ಹಾಗೂ ಅದನ್ನು ವ್ಯಕ್ತಪಡಿಸಲು ದೇವರಾತ್ಮನ ಶಕ್ತಿ ಎರಡು ಪ್ರಾಮುಖ್ಯವಾದ ಸಂಗತಿಗಳು ಎಂಬದನ್ನು ಅವನು ಚೆನ್ನಾಗಿ ಬಲ್ಲವನಾಗಿದ್ದನು. ಆದರೆ ಸರಿಯಾದ ಸಂದೇಶವಿದ್ದರೂ ದೇವರ ಶಕ್ತಿಯ ಕೊರತೆಯಿದ್ದರೆ ಜನರನ್ನು ದೇವರ ರಾಜ್ಯದ ವಿಷಯಗಳಿಗೆ ನಡೆಸದೆ ಬೋಧಕರು ಸೋಲುವ ಸಾಧ್ಯತೆಯೂ

ಬಹಳವಾಗಿದೆ. ಲೂಕ 24:49; ಅಪೊ 1:8; ಎಫೆ 5:18 ಸಹ ನೋಡಿರಿ. ಜನರು ಬೋಧಕನ ಜ್ಞಾನ ಅಥವಾ ವಾಕ್ಚಾತುರ್ಯದಿಂದಲ್ಲ ಬದಲಾಗಿ ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವ ಮೂಲಕ ರಕ್ಷಣೆ ಹೊಂದುತ್ತಾರೆ ಮತ್ತು ನಂಬಿಕೆಯಲ್ಲಿ ಬಲಗೊಳ್ಳುತ್ತಾರೆ. **5**

**2:5** ದೇವರಾತ್ಮನ ಶಕ್ತಿಯ ಮೂಲಕ ಜನರ ಹೃದಯಗಳಲ್ಲಿ ನಿಜವಾದ ನಂಬಿಕೆಯನ್ನು ಉಂಟುಮಾಡಬೇಕು. ಒಂದುವೇಳೆ ಅವರು ತಮ್ಮ ನಂಬಿಕೆಯನ್ನು ಬೋಧಕನ ಜ್ಞಾನ ಅಥವಾ ವಾಕ್ಚಾತುರ್ಯ ಅಥವಾ ಮನವೊಲಿಸುವಂಥ ಅವನ ವಾದಗಳ ಮೇಲೆ ನೆಲೆಗೊಳಿಸಿಕೊಳ್ಳುವದಾದರೆ; ಅದು ಕೇವಲ ಸಾಧಾರಣವಾಗಿರುತ್ತದೆ ಮತ್ತು ರಕ್ಷಣೆಗೆ ಬೇಕಾಗಿರುವಷ್ಟು ನಂಬಿಕೆ ಇರುವದಿಲ್ಲ. ಕ್ರೈಸ್ತ ನಂಬಿಕೆಯು ಯುಕ್ತವಾದದ್ದಾಗಿದೆ ಆದರೆ ಕಾರಣಗಳಿಗೆ ಮಾತ್ರವೇ ಸೀಮಿತವಾಗಿರುವ ವಾದಗಳಿಂದ ಯಾರ ಹೃದಯದಲ್ಲಿಯೂ ಹೊಸ ಜೀವನ ಕಾಣಿಸಿಕೊಳ್ಳಲು ಆಗುವದಿಲ್ಲ. ಯೇಸು ಕ್ರಿಸ್ತನ ಸೇವಕರು ಪರಲೋಕದಿಂದ ದೇವರು ಕಳುಹಿಸುವ ಶಕ್ತಿಯ ಮೂಲಕ ಯೇಸು ಕ್ರಿಸ್ತನು ಹಾಗೂ ಆತನ ಶಿಲುಬೆಯ ಬಗ್ಗೆ ಪ್ರಚುರಪಡಿಸಬೇಕು. **6-7**

**2:6-7** ನಾನು ಅಮಾಯಕತನವನ್ನು ಹೊಗಳುತ್ತಾ ಇದ್ದೇನೆ ಅಥವಾ ಜ್ಞಾನದ ವಿಷಯಕ್ಕೆ ಬರುವಾಗ ವಿಶ್ವಾಸಿಗಳು ಏನೂ ಅಲ್ಲದವರಾಗಿದ್ದಾರೆ ಎಂದು ತನ್ನ ಬೋಧಕರು ತಿಳಿದುಕೊಳ್ಳಬಾರದು ಎಂಬದು ಪೌಲನ ಆಲೋಚನೆಯಾಗಿದೆ. ಈ ಲೋಕದ ಬುದ್ಧಿವಂತರು ಮತ್ತು ಪ್ರಭಾವಿ ಜನರಿಗೆ ಗೊತ್ತಿಲ್ಲದ ರಹಸ್ಯವಾದ ಜ್ಞಾನವನ್ನು ಅವರು ಹೊಂದಿದ್ದಾರೆ (1:30; ಕೊಲೊ 2:2-3). "ಜ್ಞಾನದ" ವಿಷಯದಲ್ಲಿ ಕೀರ್ತನೆ 51:6; 90:12; 111:10; ಜ್ಞಾನೋ 1:7,20; 2:1-6; 3:13; 8:1-36; 9:10; ಎಫೆ 1:17; ಯಾಕೋಬ 1:5 ಸಹ ನೋಡಿರಿ. ಜಗದುತ್ಪತ್ತಿಗೆ ಮೊದಲು ದೇವರು ತನ್ನ ಜನರನ್ನು ತಿಳಿದಿದ್ದನು ಮತ್ತು ಅವರನ್ನು ಆರಿಸಿಕೊಂಡನು (ರೋಮಾ 8:29-30) ಹಾಗೂ ಅವರಿಗೆ ಉನ್ನತವಾದ ಜ್ಞಾನವಿರಬೇಕೆಂದು ಅಂದರೆ ದೇವರು ಮತ್ತು ಕ್ರಿಸ್ತನ ಕುರಿತಾದ ತಿಳುವಳಿಕೆ ಇರಬೇಕೆಂದು ಪ್ರತಿಷ್ಠಿಸಿದನು. **8**

**2:8** "*ಮಹಿಮೆಯುಳ್ಳ ಕರ್ತನು*"– ದೇವರಿಗೆ ಮಾತ್ರ ಕೊಡಲಾಗಿದ್ದ ಶೀರ್ಷಿಕೆಯನ್ನು ಪೌಲನು ಯೇಸು ಕ್ರಿಸ್ತನಿಗೆ ಕೊಟ್ಟಿದ್ದಾನೆ. ಯೆಹೋವ ದೇವರು "ಪ್ರಭಾವವುಳ್ಳ ಅರಸನು" ಎಂದು ಹೇಳುವ ಕೀರ್ತನೆ 24:10ರೊಂದಿಗೆ ಹೋಲಿಸಿ ನೋಡಿರಿ. ಹಾಗೆಯೇ ಅಪೊ 7:2; ಯಾಕೋಬ 2:1 ಸಹ ನೋಡಿರಿ. ಯೇಸು ಕ್ರಿಸ್ತನೇ ಯೆಹೋವನು ಎಂದು ಹೇಳುವ ಮತ್ತೊಂದು ವಚನಭಾಗ ಲೂಕ 2:11. ಮಾನವರು ದೈವೀಕ ವ್ಯಕ್ತಿಯನ್ನು ಶಿಲುಬೆಗೆ ಏರಿಸಿದರು ಎಂಬ ವಿಷಯವು ಅವರಿಗೆ ದೇವರಾಗಲಿ ಅಥವಾ ದೇವರ ಜ್ಞಾನವಾಗಲಿ ಗೊತ್ತಿರಲಿಲ್ಲ ಎಂಬ ವಿಷಯವನ್ನು ಪ್ರಕಟಪಡಿಸುತ್ತದೆ. **9**

**2:9** ಯೆಶಾಯ 64:4 ರಲ್ಲಿಯೂ ಇದೇ ವಾಕ್ಯ ಇದೆ ಆದರೆ ಪದಗಳು ಕೊಂಚ ಬದಲಾಗಿವೆ.
**10**

**2:10** ಪೌಲನು ಮಾತನಾಡುತ್ತಿರುವ ಜ್ಞಾನವನ್ನು ಮಾನವನ ಬುದ್ಧಿ ಅಥವಾ ತತ್ವಾನುಸಾರವಾದ ಕಾರಣಗಳಿಂದ ತಿಳಿಯಲು ಆಗುವದಿಲ್ಲ ಅಥವಾ ಧರ್ಮಾಗ್ರಳಲ್ಲಿ ಅಥವಾ ಆಧ್ಯತ್ಮದಲ್ಲಿ ಅಥವಾ ಅತೀಂದ್ರಿಯಗಳಲ್ಲಿ ಹುಡುಕಿದರೆ ಸಿಗುವದಿಲ್ಲ. ದೇವರು ತನ್ನ ಆತ್ಮದ ಮೂಲಕ ಅದನ್ನು ಪ್ರಕಟಪಡಿಸುತ್ತಾನೆ. ಯೋಹಾನ 16:13-15ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ಮಾತ್ರವೇ ದೇವರ ಆತ್ಮವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. **11**

**2:11** ದೇವರು ಪ್ರಕಟಪಡಿಸದೆ ಹೋದರೆ ಆತನು ಏನು ಯೋಚಿಸುತ್ತಿದ್ದಾನೆ ಎಂಬದನ್ನು ತಿಳಿದುಕೊಳ್ಳಲು ಯಾರಿಂದಲೂ ಆಗುವದಿಲ್ಲ, ಆದರೆ ಪವಿತ್ರಾತ್ಮನಿಗೆ ಅದು ಗೊತ್ತಿರುತ್ತದೆ ಯಾಕಂದರೆ ಆತನೇ ದೇವರಾಗಿದ್ದಾನೆ. ಈ ವಾಕ್ಯ ನಮಗೆ ಕಲಿಸುವದೇನೆಂದರೆ ದೇವರ ಆತ್ಮನು ವ್ಯಕ್ತಿಗತವಲ್ಲದ ಪ್ರಭಾವ ಅಥವಾ ಶಕ್ತಿಯಲ್ಲ. ಆತನು ವ್ಯಕ್ತಿಯಾಗಿದ್ದು ತಿಳುವಳಿಕೆಯುಳ್ಳವನಾಗಿದ್ದಾನೆ ಮತ್ತು ಅದನ್ನು ನಮಗೆ ಪ್ರಕಟಪಡಿಸುತ್ತಾನೆ (ವ 10). **12**

**2:12** ಲೋಕವು (ಹುದುವಾಗಿ ಪಾಪದ ಪರಿಸ್ಥಿತಿಯಲ್ಲಿರುವ ಮಾನವ ಕುಲವು) ದೇವರಾತ್ಮವಿಲ್ಲದ್ದಾಗಿದೆ ಮತ್ತು ಆತನನ್ನು ಅಂಗೀಕರಿಸಿಕೊಳ್ಳದ ಸ್ಥಿತಿಯಲ್ಲಿದೆ (ಯೋಹಾನ 14:16-17). ಯೇಸು ಕ್ರಿಸ್ತನಲ್ಲಿರುವ ವಿಶ್ವಾಸಿಗಳು ದೇವರ ಆತ್ಮನನ್ನು ಅಂಗೀಕರಿಸಿಕೊಂಡಿದ್ದಾರೆ (ಅಪೊ 2:38; 5:32; ಗಲಾ 3:14; ಎಫೆ 1:13), ಮತ್ತು ಇತರರು ತಿಳಿದುಕೊಳ್ಳಲು ಆಗದ ವಿಷಯಗಳನ್ನು ತಿಳಿದುಕೊಂಡಿದ್ದಾರೆ (ವ 14). **13**

**2:13** ಪೌಲನು "ಮಾತುಗಳಿಗೆ" ಕೊಟ್ಟಿರುವ ಆದ್ಯತೆಯನ್ನು ಗಮನಿಸಿರಿ. ದೇವರ ಆತ್ಮನು ಅಪೊಸ್ತಲರಿಗೆ ದೇವರ ಸತ್ಯವನ್ನು ಪ್ರಕಟಿಸುವ ಮಾತುಗಳನ್ನು ಕೊಟ್ಟಿದ್ದನೇ ಹೊರತು ಕೇವಲ ಮನಸ್ಸಿನಲ್ಲಿರುವ ಹುದುವಾದ ಆಲೋಚನೆಗಳನ್ನಲ್ಲ. ಮತ್ತಾಯ 4:4; 5:18; 2 ತಿಮೊ 3:16ರೊಂದಿಗೆ ಹೋಲಿಸಿ ನೋಡಿರಿ.

"*ಆತ್ಮ ಸಂಬಂಧವಾದವುಗಳನ್ನು ಆತ್ಮನಿಗೆ*"– ಗ್ರೀಕ್ ನಲ್ಲಿ ಈ ಪದಗಳನ್ನು ವಿವಿಧ ರೀತಿಯಲ್ಲಿ ಭಾಷಾಂತರ ಮಾಡಬಹುದು, ಆದರೆ ಮೇಲೆ ಕೊಡಲಾಗಿರುವ ಭಾಷಾಂತರವೇ ಈ ನೋಟ್ಸ್ ಗಳ ಬರಹಗಾರರಿಗೆ ಉತ್ತಮವೆಂದು ತೋರಿದೆ. ಅಕ್ಷರಾರ್ಥವಾಗಿ ಇದು "ಆತ್ಮ ಸಂಬಂಧವಾದವುಗಳನ್ನು ಆತ್ಮನೊಂದಿಗೆ ಹೋಲಿಸುವದು (ಅಥವಾ ವಿವರಿಸುವದು ಅಥವಾ ಒಟ್ಟುಗೂಡಿಸುವದು – ಗ್ರೀಕ್ ಪದ ಮೂರೂ ಅರ್ಥಗಳನ್ನು ಕೊಡುತ್ತದೆ). "ಸಂಬಂಧವಾದವುಗಳು" ಎಂಬ ಪದ ಪರೋಕ್ಷವಾಗಿದೆ ಮತ್ತು ಅದನ್ನು ಸರಿಯಾದ ಕನ್ನಡದ ವಾಕ್ಯವನ್ನಾಗಿ ಮಾಡಬೇಕು. **14**

**2:14** 1:18,23; ರೋಮಾ 8:5-8 ನೋಡಿರಿ. ಒಂದುವೇಳೆ ನಾವು ದೇವರ ಸತ್ಯಗಳನ್ನು ಅಂಗೀಕರಿಸಿಕೊಂಡು ಅರ್ಥಮಾಡಿಕೊಳ್ಳುವದಾದರೆ ದೇವರಾತ್ಮನೇ ನಮಗೆ ಕಲಿಸಿಕೊಡಬೇಕಾದದ್ದು ಬಹಳ ಪ್ರಾಮುಖ್ಯವಾಗುತ್ತದೆ. ಆದ್ದರಿಂದ ಎಫೆ 1:15-19.

"ಪ್ರಾಕೃತ" = ರಕ್ಷಣೆಹೊಂದಿಲ್ಲದವರು. **15**

**2:15** 1 ಯೋಹಾನ 2:20,27; ಯೋಹಾನ 3:8. ಕ್ರಿಸ್ತನಲ್ಲಿರುವ ವಿಶ್ವಾಸಿಗಳು ದೇವರ ಆತ್ಮನಿಂದ ಆತ್ಮೀಕರಾದ ನಂತರವಷ್ಟೇ ಕಾರ್ಯಗಳ ಹಾಗೂ ಜನರ ನಿಜಸ್ಥಿತಿಯನ್ನು ನೋಡಲು ಶಕ್ತರಾಗುತ್ತಾರೆ. ಆದರೆ ಆತ್ಮನಿಲ್ಲದೆ ಇರುವವರು ಕ್ರಿಸ್ತನ ಜನರನ್ನು ಅರ್ಥಮಾಡಿಕೊಳ್ಳಲಾರರು ಆದ್ದರಿಂದ ಅವರನ್ನು ಸರಿಯಾಗಿ ವಿಚಾರಣೆ ಮಾಡಲು ಆಗದವರಾಗಿದ್ದಾರೆ. ಸರಿಯಾದ ತೀರ್ಪು ಆತ್ಮೀಕ ತಿಳುವಳಿಕೆಯ ಮೇಲೆ ಆಧಾರವಾಗಿರಬೇಕು, ಆದರೆ ಸಹಜವಾಗಿ ಈ ಗುಣ ಸ್ವಾಭಾವಿಕವಾಗಿಯೇ ಯಾರಲ್ಲಿಯೂ ಇಲ್ಲ.

*"ವಿಚಾರಿಸುತ್ತಾನೆ", "ವಿಚಾರಿಸಿದ್ದಾನೆ"*– ಗ್ರೀಕ್ ಭಾಷೆಯಲ್ಲಿ 14ನೇ ವಚನದಲ್ಲಿ ಇದೇ ಪದವನ್ನು ಉಪಯೋಗಿಸಲಾಗಿದೆ. ಇಲ್ಲಿ ಇದರ ಅರ್ಥ ಒಬ್ಬ ವ್ಯಕ್ತಿ ಅಥವಾ ವಸ್ತುವಿನ ಅರ್ಹತೆ ಅಥವಾ ಸತ್ಯವನ್ನು ದೃಢಪಡಿಸುವದಾಗಿದೆ. **16**

**2:16** ಯೆಶಾಯ 40:13. ಇದನ್ನು ಮೇಲೆ ಹೇಳಿರುವ ಸತ್ಯಗಳಿಗೆ ಪುರಾವೆಯನ್ನಾಗಿ ಕೊಡಲಾಗಿದೆ. ಪ್ರಾಕೃತ ಮನುಷ್ಯನು (ದೇವರಾತ್ಮ ಇಲ್ಲದವನು) ದೇವರ ಮನಸ್ಸನ್ನು ಅರ್ಥಮಾಡಿಕೊಳ್ಳಲಾರನು ಆದ್ದರಿಂದ ವಿಶ್ವಾಸಿಗಳ ಮನಸ್ಸನ್ನು ಅರ್ಥಮಾಡಿಕೊಳ್ಳಲು ಅವರಿಂದ ಆಗುವದಿಲ್ಲ. ಇದಕ್ಕೆ ಕಾರಣ ವಿಶ್ವಾಸಿಗಳು ಲೋಕದ ಜನರ ಹಾಗೆ ಆಲೋಚನೆ ಮಾಡಲು ಆಗದವರಾಗಿರುತ್ತಾರೆ. ಅವರು ಕ್ರಿಸ್ತನ ಮೂಲಕ ದೇವರ ಮನಸ್ಸನ್ನು ಹಂಚಿಕೊಳ್ಳುತ್ತಾರೆ. ಇದರ ಅರ್ಥ ಕ್ರಿಸ್ತನಿಗೆ ಗೊತ್ತಿರುವ ವಿಷಯಗಳೆಲ್ಲವೂ ವಿಶ್ವಾಸಿಗಳಿಗೆ ಗೊತ್ತಿರುತ್ತದೆ ಎಂಬದಲ್ಲ. ಬದಲಾಗಿ ಇದರ ಅರ್ಥವೇನೆಂದರೆ ಕ್ರಿಸ್ತನು ಅವರಲ್ಲಿದ್ದಾನೆ ಮತ್ತು ಅವರು ಪವಿತ್ರಾತ್ಮನನ್ನು ಹೊಂದಿದ್ದಾರೆ, ಅವರು ದೇವರ ಸತ್ಯದ ಮೂಲವಾಗಿದ್ದಾರೆ, ಮತ್ತು ಇದನ್ನು ಅರ್ಥಮಾಡಿಕೊಳ್ಳಲುಅ ಅತನು ಅವರನ್ನು ಬಲಪಡಿಸುತ್ತಾನೆ. ಅಪೊಸ್ತಲರು ಮತ್ತು ಪ್ರಸಿದ್ಧ ಹಾಗೂ ಜ್ಞಾನವುಳ್ಳ ಕ್ರೈಸ್ತ ನಾಯಕರ ವಿಷಯದಲ್ಲಿ ಮಾತ್ರ ಇದು ಸತ್ಯವಾಗಿದೆಯೇ? ಇಲ್ಲ, ಇದು ಆತ್ಮೀಕವಾಗಿರುವ ಎಲ್ಲಾ ವಿಶ್ವಾಸಿಗಳ ವಿಷಯದಲ್ಲಿಯೂ ಸತ್ಯವಾಗಿದೆ (1:26-28). ವಿದ್ಯಾಭ್ಯಾಸ, ಪ್ರಸಿದ್ಧವಾದ ಬುದ್ಧಿವಂತಿಕೆಯ ಸಾಮರ್ಥ್ಯ ಮತ್ತು ಮಾನುಷಿಕ ಜ್ಞಾನ ಇವುಗಳಿಗೂ ಅದಕ್ಕೂ ಸಂಬಂಧವಿಲ್ಲ. ದೇವರ ಆತ್ಮನು ಮಾನವನ ಆತ್ಮಕ್ಕೆ ತಿಳುವಳಿಕೆಯನ್ನು ಕೊಡುತ್ತಾನೆ – ಇದು ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ. ಈ ವಚನಭಾಗದಾದ್ಯಂತ ದೇವರ ಆತ್ಮನು ಮನುಷ್ಯನ ಆತ್ಮಕ್ಕಿಂತ ಭಿನ್ನವಾಗಿರುವದನ್ನು ಗಮನಿಸಿರಿ. ಇದು ಎಲ್ಲಾ ಕಡೆಗಳಲ್ಲಿಯೂ ದೇವರ ವಾಕ್ಯಗಳ ಬೋಧನೆಯಾಗಿದೆ. ಯೋಹಾನ 14:17; ರೋಮಾ 8:9,16; ಗಲಾ 3:2; ಎಫೆ 4:18; ಯೂದ 19 ರ ನೋಟ್ಸ್ ನೋಡಿರಿ.

**3**1

**3:1** *"ದೇವರಾತ್ಮನಿಂದ ನಡಿಸಿಕೊಳ್ಳುವವರು"*– ದೇವರಾತ್ಮನಿಲ್ಲದವರೆಲ್ಲರೊಂದಿಗೆ ಹೋಲಿಸಿದರೆ ವಿಶ್ವಾಸಿಗಳೆಲ್ಲರೂ ಆತ್ಮೀಕರಾಗಿದ್ದಾರೆ (2:14-16; ರೋಮಾ 8:5-9). ಆದರೆ ವಿಶ್ವಾಸಿಗಳಲ್ಲಿಯೇ ಕೆಲವರು ಇತರರಿಗಿಂತ ಹೆಚ್ಚು ಆತ್ಮೀಕರಾಗಿರುತ್ತಾರೆ. ಮತ್ತು ಕೆಲವರು, ದುರಾದೃಷ್ಟವಾಗಿ, ತಮ್ಮ ಪಾಪದ ಸ್ವಭಾವಗಳನ್ನೇ ಅನುಸರಿಸುವ ಲೋಕದ ಜನರ ಹಾಗೆ ನಡೆದುಕೊಳ್ಳುತ್ತಾರೆ. ಪೂರ್ತಿಯಾಗಿ ಹೇಳಬೇಕಾದರೆ ಕೊರಿಂಥದ ವಿಶ್ವಾಸಿಗಳು ಹೀಗೆಯೇ ಇದ್ದರು. ಆತ್ಮೀಕವಾಗಿ ಮಾತನಾಡುವದಾದರೆ ಅವರಿನ್ನೂ ಎಳೆಕೂಸುಗಳಾಗಿದ್ದರು ಮತ್ತು ಅವರಿಗೆ ದೇವರ ಕುರಿತಾದ ಆಳವಾದ ವಿಷಯಗಳನ್ನು ಕಲಿಸಲು ಪೌಲನಿಗೆ ಆಗಲಿಲ್ಲ (2:6; ಇಬ್ರಿ 5:11-14ರೊಂದಿಗೆ ಹೋಲಿಸಿ ನೋಡಿರಿ).

*"ಪ್ರಾಪಂಚಿಕರು" ಅಥವಾ "ಶರೀರದನುಸಾರವಾಗಿ ನಡೆದುಕೊಳ್ಳುವವರು"*– ಸಹಜವಾಗಿ ತಮ್ಮ ಹಳೆಯ ಅವಿಧೇಯತೆಯ ಸ್ವಭಾವಕ್ಕೆ ಒಳಗಾಗುವವರಾಗಿದ್ದಾರೆ. 2:14 ಮತ್ತು 3:1 ರಲ್ಲಿ ಪೌಲನು ಮೂರು ರೀತಿಯ ಜನರ ಬಗ್ಗೆ ಮಾತನಾಡಿದ್ದಾನೆ. "ಪ್ರಾಕೃತರು" ಎಂದರೆ ದೇವರಾತ್ಮ ಇಲ್ಲದೆ ಇರುವವರು. "ಆತ್ಮೀಕರು" ಎಂದರೆ ದೇವರಾತ್ಮನನ್ನು ಹೊಂದಿರುವವರು ಮತ್ತು ದೇವರಾತ್ಮನಿಂದ ನಡಿಸಿಕೊಳ್ಳುವವರು. ಮತ್ತು ಪ್ರಾಪಂಚಿಕರು ದೇವರಾತ್ಮವುಳ್ಳವರಾಗಿದ್ದರೂ ಕೆಲವೊಮ್ಮೆ ತಮ್ಮಲ್ಲಿ ದೇವರಾತ್ಮನಿಲ್ಲದ ಹಾಗೆ ನಡೆದುಕೊಳ್ಳುತ್ತಾರೆ. **3**

**3:3** ಅವರು "ಪ್ರಾಪಂಚಿಕರು" ಎಂಬದಕ್ಕೆ ಇಲ್ಲಿ ಸೂಕ್ತ ಪುರಾವೆಯಿದೆ. ಯಾಕಂದರೆ ವಿಶ್ವಾಸಿಗಳ ನಡುವೆ ಹೊಟ್ಟೆಕಿಚ್ಚು ಮತ್ತು ಜಗಳ ದೇವರಾತ್ಮನಿಂದ ಬರುವದಿಲ್ಲ ಬದಲಾಗಿ ಜನರಲ್ಲಿರುವ ಅವಿಧೇಯತೆಯ ಸ್ವಭಾವದಿಂದ ಬರುತ್ತದೆ (ಗಲಾ 5:19-20; ಯಾಕೋಬ 3:14-18). ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ಅಪನಂಬಿಕೆಯುಳ್ಳ ಜನರ ಹಾಗೆ ನಡೆದುಕೊಳ್ಳಲು ಯಾವುದೇ ಅಧಿಕಾರವಿಲ್ಲ. ಅವರು ದೇವರಾತ್ಮನನ್ನು ಹೊಂದಿರುವ ದೇವರ ಪರಿಶುದ್ಧ ಜನರಾಗಿದ್ದಾರೆ ಮತ್ತು ಉನ್ನತವಾದ ರೀತಿಯಲ್ಲಿ ಜೀವಿಸಲು ಕರೆಯಲ್ಪಟ್ಟಿದ್ದಾರೆ. **4**

**3:4** 1:11-12 ನೋಡಿರಿ. ಇಂದಿಗೂ ಅನೇಕ ವಿಶ್ವಾಸಿಗಳು ತಮ್ಮ ಶರೀರಾಧೀನ ಸ್ವಭಾವ ಮತ್ತು ಪ್ರಾಪಂಚಿಕತೆಯನ್ನು ತಮ್ಮ ಜಗಳಗಳು, ತಮ ಗುಂಪು ಅಥವಾ ಸಭೆ ಅಥವಾ ಸಂಸ್ಥೆಗಳಲ್ಲಿನ ಗರ್ವ ಮತ್ತು ಮಾನವರಿಗೆ ಮಹಿಮೆಯನ್ನು ಸಲ್ಲಿಸುವ ಮೂಲಕ ತೋರಿಸುತ್ತಾರೆ. **5-9**

**3:5-9** ಕರ್ತನು ಮಾತ್ರವೇ ಪ್ರಾಮುಖ್ಯವಾಗಿರುವಾತನು ಮತ್ತು ಆತನ ವಾಕ್ಯವನ್ನು ಬೋಧಿಸುವವರು ಹಾಗೂ ಉಪದೇಶಿಸುವವರೆಲ್ಲರೂ ಕೇವಲ ಸೇವಕರಾಗಿದ್ದಾರೆಯೇ ಹೊರತು, ತಮ್ಮಲ್ಲಿ ಯಾವುದೇ ಮೇಲು ಇಲ್ಲದವರಾಗಿದ್ದಾರೆ ಎಂದು ವಿಶ್ವಾಸಿಗಳು ತಿಳಿದುಕೊಳ್ಳಬೇಕು (ವ 7). ಕರ್ತನು ಬೇರೆಬೇರೆ ಸೇವಕರಿಗೆ ವಿವಿಧ ಕೆಲಸಗಳನ್ನು ಕೊಡುತ್ತಾನೆ (ವ 5), ಮತ್ತು ಕೆಲಸವನ್ನು ಅಭಿವೃದ್ಧಿಪಡಿಸುವವನು ದೇವರಾಗಿದ್ದಾನೆಯೇ ಹೊರತು

ಮನುಷ್ಯರಲ್ಲ (ವ 7). ಸತ್ಯ, ಆತ್ಮೀಕ ಜೀವನ ಮತ್ತು ಆಶೀರ್ವಾದಗಳಿಗೆ ದೇವರು ಮಾತ್ರವೇ ಮೂಲವಾಗಿದ್ದಾನೆ. ದೇವರ ನಂಬಿಗಸ್ತ ಸೇವಕರಾದ ಪೌಲ ಮತ್ತು ಅಪೊಲ್ಲೋಸನು ಒಂದೇ ಉದ್ದೇಶವುಳ್ಳವರಾಗಿದ್ದರು (ವ 8), ವಿಶ್ವಾಸಿಗಳು ಇದನ್ನು ತಿಳಿದುಕೊಳ್ಳಬೇಕು ಮತ್ತು ಒಂದೇ ಮನಸ್ಸು ಹಾಗೂ ಹೃದಯದಿಂದ ಎಲ್ಲರನ್ನೂ ಅಂಗೀಕರಿಕೊಳ್ಳಬೇಕು (1:10), ಆದರೆ ಯಾರ ವಿಷಯದಲ್ಲಿಯೂ ವಿಪರೀತವಾಗಿ ಮುಂದುವರೆಯಬಾರದು. **7**

**3:7** *"ಏನೇಆದರೂ"*– ದೇವರ ಸೇವಕನು ಯಾರೇ ಆದರೂ ತನ್ನ ವಿಷಯದಲ್ಲಿ ಯಾವ ರೀತಿಯ ಅಭಿಪ್ರಾಯವುಳ್ಳವನಾಗಿರಬೇಕು ಎಂಬದನ್ನು ಇಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. 15:9; 2 ಕೊರಿಂಥ 3:5; ಎಫೆ 3:8; 1 ತಿಮೊ 1:15ರೊಂದಿಗೆ ಹೋಲಿಸಿ ನೋಡಿರಿ. ಹಾಗೆಯೇ ವಿಮೋ 3:11; ನ್ಯಾಯ 6:15; ಯೆರೆ 1:6 ಸಹ ನೋಡಿರಿ. ಪೌಲನು ಮಹದಾದ ಫಲವಂತನಾಗಿರಲು ಹಲವು ಕಾರಣಗಳಲ್ಲಿ ಇದೂ ಸಹ ಒಂದಾಗಿದೆ. ಮನುಷ್ಯರ ಹೊಗಳಿಗೆ ಅಥವಾ ದೂಷಣೆ, ಗೌರವ ಅಥವಾ ಅಸಮಾಧಾನದ ಬಗ್ಗೆ ಅವನು ನಿಜವಾಗಿಯೂ ಯೋಚಿಸುತ್ತಾ ಇರಲಿಲ್ಲ. ದೀನತೆಯುಳ್ಳ ಆತ್ಮನಿಂದ ದೇವರ ಸೇವೆ ಮಾಡಬೇಕೆಂಬದೇ ಅವನು ಏಕೈಕ ಉದ್ದೇಶವಾಗಿತ್ತು. **8**

**3:8** ವಚನ 14. **9**

**3:9** *"ದೇವರ ಜೊತೆ ಕೆಲಸದವರು"*– ದೇವರ ಸೇವಕರು ಕರ್ತನಾದ ಯೇಸು ಕ್ರಿಸ್ತನೊಂದಿಗೆ ಸೇರಿದವರಾಗಿದ್ದಾರೆ, ದೇವರ ಪ್ರವಿತ್ರಾತ್ಮನು ಅವರೊಳಗೆ ಜೀವಿಸುವವನಾಗಿದ್ದಾನೆ ಮತ್ತು ತಂದೆಯ ಕೆಲಸವನ್ನು ಅವರು ಮಾಡುವವರಾಗಿದ್ದಾರೆ. ಇದಕ್ಕಿಂತ ಗೌರವವುಳ್ಳ, ಪ್ರಭಾವವುಳ್ಳ, ಬೆಲೆಯುಳ್ಳ ಕೆಲಸ ಬೇರೆ ಯಾವುದಾದರು ಇದೆಯೇ?

*"ದೇವರ ಹೊಲ"*– ಮತ್ತಾಯ 13:24.

*"ದೇವರ ಕಟ್ಟಡ"*– ವ 16; ಎಫೆ 2:19-22; 1 ಪೇತ್ರ 2:5. **10**

**3:10** 7ನೇ ವಚನದಲ್ಲಿ ಪೌಲನು ನಾನು ಏನೂ ಅಲ್ಲದವನಾಗಿದ್ದೇನೆ ಎಂದು ಹೇಳಿದ್ದಾನೆ. ನಾನು ದೇವರ ಕೃಪೆಯಿಂದಲೇ ಕ್ರಿಸ್ತನ ದಾಸನಾಗಿ ಇವೆಲ್ಲಾ ಕಾರ್ಯಗಳನ್ನು ಮಾಡಿದ್ದೇನೆ ಎಂದು ಅವನು ಇಲ್ಲಿ ಹೇಳಿದ್ದಾನೆ. ದೇವರು ಉಚಿತವಾಗಿ ಅವನಿಗೆ ಸಾಮರ್ಥ್ಯಗಳನ್ನು ಮತ್ತು ಅವಕಾಶಗಳನ್ನು ಕೊಟ್ಟನು. ಹಾಗೆಯೇ 2 ಕೊರಿಂಥ 3:5-6 ನೋಡಿರಿ.

*"ನಾನು ಅಸ್ತಿವಾರ ಹಾಕಿದೆನು"*– ಪೌಲನು ಕೊರಿಂಥದಲ್ಲಿ ಸೇವೆಯನ್ನು ಪ್ರಾರಂಭಿಸಿದನು (ಅಪೊ 18:1). ಅವನು ಹಾಕಿದ ಅಸ್ತಿವಾರದ ಮೇಲೆ ಇತರರು ಕಟ್ಟುತ್ತಾ ಇದ್ದರು. **11**

**3:11** ಯೆಶಾಯ 28:16; ಅಪೊ 4:11; ಎಫೆ 2:20; 1 ಪೇತ್ರ 2:6. ಯೇಸು ಕ್ರಿಸ್ತನ ಕುರಿತಾದ ಸತ್ಯವನ್ನು ಬೋಧಿಸುವ ಮತ್ತು ಉಪದೇಶಿಸುವ ಮೂಲಕ ಪೌಲನು ಕೊರಿಂಥದಲ್ಲಿ ಅಡಿಪಾಯವನ್ನು ಹಾಕಿದನು, ದೇವರಾತ್ಮನ ಶಕ್ತಿಯು ಅವನ ಮೂಲಕ ಕಾರ್ಯಮಾಡುತ್ತಾ ಇದ್ದದರಿಂದ ರಕ್ಷಣೆ ಹೊಂದಲು ಜನರು ಯೇಸು ಕ್ರಿಸ್ತನಲ್ಲಿ

ನಂಬಿಕೆಯನ್ನಿಡುತ್ತಾ ಇದ್ದರು. ಪೌಲನು ಕೊರಿಂಥದಿಂದ ಹೊರಟ ನಂತರ, ಇತರರು ನಿರ್ಮಾಣ ಕಾರ್ಯವನ್ನು ಮುಂದುವರೆಸಿದರು. **12**

**3:12** ಕಟ್ಟುವವರು ಒಂದುವೇಳೆ ಆತ್ಮೀಕರಾಗಿದ್ದು, ದೇವರ ವಾಕ್ಯಗಳಲ್ಲಿರುವ ನಿಕ್ಷೇಪಗಳನ್ನು ಅಭ್ಯಾಸ ಮಾಡುವವರಾಗಿದ್ದು, ಅಮೂಲ್ಯವಾದ ರತ್ನಗಳ ಹಾಗೆ ಅದನ್ನು ಬೋಧಿಸುತ್ತಾರೆ. ಆದರೆ ಕಟ್ಟುವವರು ಒಂದುವೇಳೆ ಪ್ರಾಪಂಚಿಕರಾಗಿದ್ದು ನಂಬಿಕೆಯಿಲ್ಲದವರಾಗಿ ನಡೆದುಕೊಂಡರೆ (ವ 3) ಮತ್ತು ತಮ್ಮ ಆಲೋಚನೆಗನುಸಾರ ಕಟ್ಟಿದರೆ, ಅದು ಕಟ್ಟಿಗೆ, ಆಪು ಅಥವಾ ಹುಲ್ಲು ಉಪಯೋಗಿಸುವದಕ್ಕೆ ಸಮಾನವಾಗಿರುತ್ತದೆ. ವಿಶ್ವಾಸಿಗಳಲ್ಲಿ ಶರೀರದನುಸಾರವಾಗಿ ಬರುವ ಕಾರ್ಯಗಳು, ಸಭೆಗೆ ಸಂಬಂಧಪಟ್ಟವುಗಳಾಗಿದ್ದು, ನಾವು ಅವುಗಳನ್ನು ಯೇಸು ಕ್ರಿಸ್ತನ ನಾಮದಲ್ಲಿ ಮಾಡಿದ್ದೇವೆ ಅಂದರೂ, ನ್ಯಾಯವಿಚಾರಣೆಯ ದಿನದಲ್ಲಿ ಏನೂ ಅಲ್ಲದವುಗಳಾಗಿರುತ್ತವೆ. (ಸಭೆಗಳಲ್ಲಿ ಇಂದು ಇಂಥ ಪ್ರಯತ್ನಗಳು ನಡೆಯುತ್ತಾ ಇಲ್ಲವೇ?) ಆದರೆ ದೇವರಾತ್ಮನ ಮೂಲಕ ನಡೆಯುವ ಕಾರ್ಯಗಳೆಲ್ಲವೂ ಆ ದಿನದಲ್ಲಿ ಆಗುವ ಪರೀಕ್ಷೆಯನ್ನು ಜಯಿಸುತ್ತವೆ. **13**

**3:13** *"ದಿನ"*– ದೇವರು ತನ್ನ ಎಲ್ಲಾ ಸೇವಕರ ಕೆಲಸವನ್ನು ವಿಚಾರಿಸುವ ದಿನವು ಬರುತ್ತದೆ ಎಂಬದಾಗಿ ಪೌಲನು ಹೇಳಿದ್ದಾನೆ. 13ನೇ ವಚನವು ಹೇಳುವದೇನೆಂದರೆ ಅದು ಪ್ರಕಟಿಸುವಂಥ, ಗಂಭೀರವಾದ ಮತ್ತು ಪರೀಕ್ಷಿಸುವ ನ್ಯಾಯವಿಚಾರಣೆಯಾಗಿರುತ್ತದೆ. ಆ ದಿನದಲ್ಲಿ ಒಬ್ಬನು ಎಷ್ಟು ಕಾರ್ಯಮಾಡಿದ್ದಾನೆ ಎಂಬದು ಪ್ರಾಮುಖ್ಯವಾಗಿರುವದಿಲ್ಲ, ಬದಲಾಗಿ ಹೇಗೆ ಮಾಡಿದ್ದಾನೆ ಎಂಬದು ಪ್ರಾಮುಖ್ಯವಾಗಿರುತ್ತದೆ. ದೇವರ ಬೆಂಕಿಯ ಪರೀಕ್ಷೆಯ ಎದುರಿನಲ್ಲಿ ಉತ್ತಮವಾಗಿ ಕಾಣಿಸುವ ಕಾರ್ಯ ಪ್ರಮುಖವಾಗಿರುವದಿಲ್ಲ ಬದಲಾಗಿ ಪರೀಕ್ಷೆಯ ನಂತರ ಉಳಿಯುವುದೇ ಪ್ರಾಮುಖ್ಯವಾಗಿರುತ್ತದೆ. ದೇವಸೇವಕರು ಯಾವ ರೀತಿಯ ಆದರಣೆ, ದೈವ ಭಕ್ತಿ ಮತ್ತು ನಡುಗುವಿಕೆಯಿಂದ (2:3) ತಮ್ಮ ಕೆಲಸವನ್ನು ಮಾಡಬೇಕು. **14**

**- 3:14** ಮತ್ತಾಯ 16:27; 2 ಕೊರಿಂಥ 5:10; ಪ್ರಕ 22:12. **15**

**3:15** *"ಸಂಬಳವು ನಷ್ಟವಾಗುವದು"*– ಅಂದರೆ ಅವನಿಗೆ ದೊರಯಬೇಕಾದ ಬಹುಮಾನಗಳು ನಷ್ಟವಾಗುವವು. 2 ಯೋಹಾನ 8 ರೊಂದಿಗೆ ಹೋಲಿಸಿ ನೋಡಿರಿ.

*"ಬೆಂಕಿ"*– 1 ಪೇತ್ರ 4:17-18ರೊಂದೊಗೆ ಹೋಲಿಸಿ ನೋಡಿರಿ. **16**

**3:16** ವ್ಯಕ್ತಿಗತವಾಗಿ ಮತ್ತು ಸಂಪೂರ್ಣವಾಗಿ ಕ್ರಿಸ್ತನ ವಿಶ್ವಾಸಿಗಳಾಗಿ ದೇವರ ಆಲಯವಾಗಿದ್ದೇವೆ. ದೇವಾಲಯದಲ್ಲಿ ಆರಾಧನೆಗಳು ನಡೆಯುತ್ತಾ ಇರುತ್ತವೆ ಮತ್ತು ದೇವರಿಗೆ ಕಾಣಿಕೆಗಳನ್ನು ಸಮರ್ಪಿಸಲಾಗುತ್ತದೆ (ರೋಮಾ 12:1-2; ಇಬ್ರಿ 13:15-16; 1 ಪೇತ್ರ 2:5). ದೇವರ ಪ್ರಸನ್ನತೆಯು ಅಲ್ಲಿಯೇ ಇರುತ್ತದೆ (ಕೀರ್ತನೆ 11:4; ಯೋಹಾನ 17:23; ಅಪೊ 2:4; ರೋಮಾ 8:9). ಕ್ರಿಸ್ತನ ವಿಶ್ವಾಸಿಗಳು ಮಾತ್ರವೇ ಈಗ ಭೂಲೋಕದ ಮೇಲಿರುವ ದೇವರ ಆಲಯವಾಗಿದ್ದಾರೆ. ಆತನನ್ನು ಅಥವಾ ಅವರನ್ನು ನಿರಾಕರಿಸುವವರು

ಮಾನವರು ಮಾಡಿರುವ ದೇವಾಲಯಗಳಿಗೆ ಹೋಗುತ್ತಾರೆ, ಆದರೆ ಅವುಗಳಲ್ಲಿ ದೇವರು ಇರುವದಿಲ್ಲ (ಅಪೊ 17:24). **17**

**3:17** *"ಕೆಡಿಸಿದರೆ", "ಕೆಡಿಸುವನು"*– ಇದೇ ಒಂದೇ ಗ್ರೀಕ್ ಪದವನ್ನು ಎರಡು ಸಲ ಉಪಯೋಗಿಸಲಾಗಿದೆ. ಇದಕ್ಕೆ ಇನ್ನೂ ಕೆಲವು ಅರ್ಥಗಳಿವೆ – ಭ್ರಷ್ಟ, ಗಾಯ, ಹಾಳು ಅಥವಾ ನಾಶ. ಕೊರಿಂಥ ಸಭೆ ಮತ್ತು ಇನ್ನೂ ಅನೇಕ ಸಭೆಗಳಿಗೆ ತೊಂದರೆ ಕೊಟ್ಟಿರುವ ಸುಳ್ಳು ಬೋಧಕರನ್ನು ಪೌಲನು ಇಲ್ಲಿ ಸೂಚಿಸುತ್ತಾ ಇರಬಹುದು – ರೋಮಾ 16:17-18. ವಿಶ್ವಾಸಿಗಳು ದೇವರ ಆಲಯವನ್ನು ಹಾಳುಮಾಡೂವದಿಲ್ಲ – ಅವರೇ ದೇವರ ಆಲಯವಾಗಿದ್ದಾರೆ ಮತ್ತು ಇತರರು ಅವರನ್ನು ಹಾಳುಮಾಡಲು ಪ್ರಯತ್ನಿಸುತ್ತಾ ಇದ್ದಾರೆ. ಕೊರಿಂಥದಲ್ಲಿ ಸುಳ್ಳು ಬೋಧಕರು ಲೌಕಿಕ ಜ್ಞಾನವನ್ನು ಬೋಧಿಸುತ್ತಾ ಕ್ರಿಸ್ತನ ಶಿಲುಬೆಯನ್ನು ಕಡೆಗಣಿಸುತ್ತಾ ಇದ್ದರು ಮತ್ತು ಸುವಾರ್ತೆಯನ್ನು ತಿರುಚುತ್ತಾ ಇದ್ದರು ಎಂಬದು ಸ್ಪಷ್ಟವಾಗಿ ಗೋಚರಿಸುತ್ತದೆ. 2 ಕೊರಿಂಥ 11:4,13-15,18 ನೋಡಿರಿ. ಅವರು ಕೊಡುವಂಥ ಬೋಧನೆಗಳು ದೇವರ ಆಲಯಕ್ಕೆ ಗಾಯಗಳನ್ನು ಮಾಡುತ್ತದೆ. ಇದಲ್ಲದೆ ದೇವರ ಪವಿತ್ರವಾದ ಕೆಲಸವನ್ನು ಹಾಳು ಮಾಡಲು ಪ್ರಯತ್ನಿಸುವವರೊಂದಿಗೆ ದೇವರು ಗಂಭೀರವಾಗಿ ನಡೆದುಕೊಳ್ಳುತ್ತಾನೆ ಎಂಬದನ್ನು ನಾವು ದೃಢವಾಗಿ ಹೇಳಬಹುದು. **18**

**3:18** *"ಯಾವನೂ ತನ್ನನ್ನು ತಾನೇ ಮೋಸಗೊಳಿಸದಿರಲಿ"*– 6:9; 15:33. "ಜ್ಞಾನಿ" ಜನರು ಲೌಕಿಕ ಜ್ಞಾನದ ಹಿಂದೆ ಹೋಗದೆ ಅದನ್ನು ನಿರಾಕರಿಸಿ ಯೇಸು ಕ್ರಿಸ್ತನ ಸುವಾರ್ತೆಯಲ್ಲಿ ನಂಬಿಕೆಯನ್ನಿಡುವಾಗ ನಿಜವಾಗಿಯೂ ದೇವರ ದೃಷ್ಟಿಯಲ್ಲಿ ಜ್ಞಾನಿಗಳಾಗುತ್ತಾರೆ. ಆದರೆ ಲೌಕಿಕ ಜ್ಞಾನದ ಹಿಂದೆ ಹೋಗುವವರು ನಿಜವಾಗಿಯೂ ದೇವರ ದೃಷ್ಟಿಯಲ್ಲಿ ಮೂರ್ಖರಾಗಿದ್ದಾರೆ (1:18). **19**

**- 3:19** 1:20; ಯೋಬ 5:13 ನೋಡಿರಿ. **20**

**3:20** ಕೀರ್ತನೆ 94:11. ನಮ್ಮ ಸ್ವಂತ ಜ್ಞಾನವು ಅಸ್ಥಿರ ಮತ್ತು ಮೂರ್ಖತನವಾಗಿರುವದರಿಂದ ನಾವು ಅದನ್ನು ನಿರಾಕರಿಸಬೇಕು. **21**

**3:21** ವಚನ 4; 1:12,29,31. ಮಾನವರು ದೇವರ ಕೈಗಳಲ್ಲಿ ಸಾಧನಗಳಾಗಿದ್ದಾರೆ. ಸಾಧನಗಳನ್ನು ಉಂಟುಮಾಡಿ ಅವುಗಳನ್ನು ಉಪಯೋಗಿಸಿಕೊಳ್ಳುವ ದೇವರಿಗೆ ಎಲ್ಲಾ ಮಹಿಮೆಯು ಸಲ್ಲಬೇಕೇ ಹೊರತು ಸಾಧನಗಳಿಗಲ್ಲ. **22**

**3:22** ವಿಶ್ವಾಸಿಗಳ ಪ್ರಯೋಜನಕ್ಕಾಗಿ ದೇವರು ತನ್ನ ಸೇವಕರನ್ನು ನೇಮಕ ಮಾಡಿದ್ದಾನೆ (ವ 5; ಎಫೆ 4:11-13). ಇಡೀ ಲೋಕವೇ ಹೊಲವಾಗಿದ್ದು ವಿಶ್ವಾಸಿಗಳು ಅದರೊಳಗೆ ನೆಡಲ್ಪಟ್ಟಿದ್ದಾರೆ, ಅವರಿಗೆ ನೀರನ್ನು ಹಾಕಿ ಬೆಳೆಸಲಾಗುತ್ತಿದೆ. ಸದ್ಯದ ಈ ಲೋಕದ ನಡೆಯುವ ಕಾರ್ಯಗಳೆಲ್ಲವೂ ಅವರ ಹಿತಕ್ಕಾಗಿಯೇ ನಡೆಯುತ್ತದೆ (ರೋಮಾ 8:28). ಮರಣವೂ ಅವರದ್ದಾಗಿದೆ – ಇದು ಕೃಪಾವರವಾಗಿದ್ದು ಅವರನ್ನು ಮರ್ತ್ಯ ದೇಹದಿಂದ

ಬಿಡುಗಡೆ ಮಾಡುತ್ತದೆ ಮತ್ತು ಎಲ್ಲಾ ರೀತಿಯ ಪಾಪ ಹಾಗೂ ಕಷ್ಟಗಳಿಂದ ವಿಮೋಚಿಸುತ್ತದೆ. ಕ್ರಿಸ್ತನಲ್ಲಿರುವ ವಿಶ್ವಾಸಿಗೆ ಮರಣವು ಉನ್ನತವಾಗಿರುವ, ಉತ್ತಮವಾಗಿರುವ ದೇವರೊಂದಿಗಿನ ಜೀವಿತಕ್ಕೆ ನಡೆಸುವ ಬಾಗಿಲಾಗಿದೆ. ಭವಿಷ್ಯದ ಕಾರ್ಯಗಳೆಲ್ಲವೂ ಅವರದ್ದಾಗಿವೆ – ಅವರು ದೇವರ ಬಾಧ್ಯಸ್ಥರಾಗಿದ್ದಾರೆ, ಕ್ರಿಸ್ತನೊಂದಿಗೆ ಸಹಭಾಗಿಗಳಾಗಿದ್ದಾರೆ (ರೋಮಾ 8:17; ಮತ್ತಾಯ 5:5; ಎಫೆ 1:14; ಪ್ರಕ 21:7). ಹೀಗಿರುವಾಗ ಮನುಷ್ಯರಲ್ಲಿ ಹೆಚ್ಚಳಪಡುವದು, ಒಬ್ಬರಿಗಿಂತ ಒಬ್ಬರು ಹೆಚ್ಚಿನವರೆಂದು ಕಿತ್ತಾಡುವದು ಯಾಕೆ? **23**

**3:23** ವಿಶ್ವಾಸಿಗಳು ಮನುಷ್ಯರಿಗೆ ಸೇರಿದವರಲ್ಲ ಬದಲಾಗಿ ಕ್ರಿಸ್ತನಿಗೆ ಸೇರಿದವರಾಗಿದ್ದಾರೆ (ಯೋಹಾನ 6:37,39; 17:6). ಅವರು ಆತನಲ್ಲಿ ಮಾತ್ರವೇ ಹೆಚ್ಚಳಪಡಬೇಕು (1:31).

*“ಕ್ರಿಸ್ತನು ದೇವರಿಗೆ ಸೇರಿದವನಾಗಿದ್ದಾನೆ”*– 11:3; 15:28; ಮತ್ತಾಯ 3:17; ಯೋಹಾನ 3:16; 14:28.

# 4 1

**4:1** 2:7; 3:5,10; ರೋಮಾ 16:25; ಗಲಾ 1:11-12; ಎಫೆ 3:2-3 ನೋಡಿರಿ. ಪೌಲನು ಮತ್ತು ಯೇಸು ಕ್ರಿಸ್ತನ ಇತರೆ ಅಪೊಸ್ತಲರು ತಮ್ಮ ಬೋಧನೆಗಳನ್ನು ತಾವೇ ಕಂಡುಹಿಡಿಯಲಿಲ್ಲ. ದೇವರು ಅದನ್ನು ಅವರಿಗೆ ಪ್ರಕಟಿಸಿ ಅವರಿಗೆ ಒಪ್ಪಿಸಿದನು. ಈ ಸತ್ಯದ ಪ್ರಾಮುಖ್ಯತೆಯನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕೆಂದು ಪೌಲನು ಬಯಸಿದನು. **2**

**4:2** ಕ್ರಿಸ್ತನ ಸೇವಕರೆಲ್ಲರಲ್ಲಿಯೂ ನಂಬಿಗಸ್ತಿಕೆ ಖಡ್ಡಾಯವಾಗಿ ಇರಬೇಕು. ಮತ್ತಾಯ 24:45; 25:21,23; ಲೂಕ 16:10; 19:17 ನೋಡಿರಿ. **3-4**

**4:3-4** ಪೌಲನು ತನ್ನ ನಂಬಿಗಸ್ತಿಕೆಯ ವಿಷಯದಲ್ಲಿ ಕೊರಿಂಥವರು ಮಾಡಿದ ತೀರ್ಪಿನ ವಿಷಯದಲ್ಲಿ ಹೆಚ್ಚು ಚಿಂತಿಸಲಿಲ್ಲ. ಅವನು ಕ್ರಿಸ್ತನ ಸೇವಕನಾಗಿದ್ದನೆಯೇ ಹೊರತು ಅವರ ಸೇವಕನಲ್ಲ. ಯೇಸು ಕ್ರಿಸ್ತನನ್ನು ಅವನನ್ನು ಕಳುಹಿಸಿದ್ದನು ಮತ್ತು ಏನನ್ನು ಬೋಧಿಸಬೇಕೆಂದು ಅವನಿಗೆ ಹೇಳಿದ್ದನೇ ಹೊರತು ಅವರು ಹೇಳಿರಲಿಲ್ಲ. ಅವನು ಕ್ರಿಸ್ತನಿಗೆ ಲೆಕ್ಕ ಕೊಡುವವನಾಗಿದ್ದನೇ ಹೊರತು ಅವರಿಗಲ್ಲ. ರೋಮಾ 14:10-12ರೊಂದಿಗೆ ಹೋಲಿಸಿ ನೋಡಿರಿ. ಅವನು ತಾನಾಗಿಯೇ ತೀರ್ಪು ಮಾಡಲಿಲ್ಲ ಯಾಕಂದರೆ ಅದು ಅವನ ಕೆಲಸವಲ್ಲ ಮತು ಯಾವನೂ ತನ್ನನ್ನು ಸರಿಯಾಗಿ ತೀರ್ಪು ಮಾಡಿಕೊಳ್ಳಲು ಆಗುವದಿಲ್ಲ ಎಂಬದನ್ನು ಬಲ್ಲವನಾಗಿದ್ದನು. ದೇವರು ಮಾತ್ರವೇ ಆ ಕಾರ್ಯವನ್ನು ಮಾಡುವಾತನು, ಯಾಕಂದರೆ ಒಬ್ಬನಿಗೆ ತಾನು ಏನನ್ನು ಮಾಡಲು ನೇಮಿಸಿದ್ದೇನೆ ಮತ್ತು ಅವನ ಉದ್ದೇಶಗಳು, ಕಷ್ಟಗಳು, ಶೋಧನೆಗಳು, ಸಮಸ್ಯೆಗಳು, ಆಂತರಿಕ ಸೋಲುಗಳು ಹಾಗೂ ಜಯಗಳು ಯಾವುವು ಎಂಬದು ಆತನಿಗೆ ಮಾತ್ರವೇ ದೃಢವಾಗಿ ಗೊತ್ತು. ಪೌಲನ

ಮನಸ್ಸಾಕ್ಷಿಯು ಸ್ಪಷ್ಟವಾಗಿತ್ತು – ಅಪೊ 23:1; 24:16 ನೋಡಿರಿ. ಇತರರ ನ್ಯಾಯತೀರ್ಪುಗಳ ಕುರಿತು ಚಿಂತಿಸದೆ ಇರುವಾಗ ದೇವರು ಸೂಚಿಸುವ ಹಾಗೆ ಆತನ ಸೇವೆ ಮಾಡಲು ಬೇಕಾದ ಸ್ವಾತಂತ್ರ್ಯವು ನಮಗೆ ಸಿಕ್ಕುತ್ತದೆ. **5**

**4:5** ಇತರರ ನಂಬಿಗಸ್ತಿಕೆ ಅಥವಾ ಉದ್ದೇಶಗಳ ಕುರಿತು ಯಾರೂ ಯಾವುದೇ ತೀರ್ಪು ಮಾಡಬಾರದು ಎಂಬದು ಆತನ ಮಾತಿನ ಅರ್ಥವಾಗಿದೆ. ನಂತರ ಅವನು ಜನರ ಹೊರಗಿನ ತೋರಿಕೆಯ ವಿಷಯದಲ್ಲಿ ತೀರ್ಪು ಮಾಡಿರಿ ಎಂದು ಅವನೇ ಹೇಳಿದ್ದಾನೆ (5:12; 6:1-6). ಯೇಸು ಕ್ರಿಸ್ತನು ಹೃದಯ ಆಲೋಚನೆಗಳನ್ನು ತೀರ್ಪು ಮಾಡಲು ಶಕ್ತನಾಗಿದ್ದಾನೆ ಮತ್ತು ತೀರ್ಪು ಮಾಡುತ್ತಾನೆ. ಆದರೆ ಇದನ್ನು ಮಾಡಲು ಯಾವ ಮನುಷ್ಯನೂ ಪ್ರಯತ್ನಿಸಬಾರದು.

*"ದೇವರಿಂದ ಬರುವ ಹೊಗಳಿಕೆ"*– ಮತ್ತಾಯ 25:21,23; ರೋಮಾ 2:29; 2 ಕೊರಿಂಥ 10:18; ಗಲಾ 1:10. **6**

**4:6** ಕೊರಿಂಥದಲ್ಲಿದ ವಿಶ್ವಾಸಿಗಳ ಸಮಸ್ಯೆ ಏನೆಂದರೆ ಅವರು ದೇವರ ಸೇವಕರನ್ನು ಸತ್ಯವೇದಾನುಸಾರವಾದ ರೀತಿಯಲ್ಲಿ ನೋಡುತ್ತಾ ಇರಲಿಲ್ಲ. ಪೌಲನು ಅವರಿಗೆ ಇದನ್ನು ತೋರಿಸುವ ಸಲುವಾಗಿ ತನ್ನ ಮತ್ತು ಅಪೊಲ್ಲೋಸನ ಉದಾಹರಣೆಯನ್ನು ಉಪಯೋಗಿಸಿದ್ದಾನೆ. ಅವರು ಜನರ ವಿಷಯದಲ್ಲಿ ತೀರ್ಪು ಮಾಡುತ್ತಾ ಇದ್ದರು, ತಮಗೆ ಮನಬಂದ ಹಾಗೆ ಹೊಗಳುತ್ತಾ ಇದ್ದರು ಅಥವಾ ತೆಗಳುತ್ತಾ ಇದ್ದರು, ಇಂಥ ಕಾರ್ಯ ಮಾಡಬಾರದು ಎಂಬದನ್ನು ಅವರು ಕಲಿತುಕೊಳ್ಳಬೇಕಾಗಿತ್ತು. **7**

**4:7** ಕೆಲವರು ತಮ್ಮ ಸಾಮರ್ಥ್ಯದಲ್ಲಿ ಅಥವಾ ಸ್ಥಾನದಲ್ಲಿ ಅಥವಾ ಒಬ್ಬನಲ್ಲದಿದ್ದರೆ ಮತ್ತೊಬ್ಬ ಬೋಧಕನ ಹಿಂಬಾಲಕರು ಎಂದು ಹಿಗ್ಗುತ್ತಾ ಇದ್ದರು. ಅಲ್ಲಿದ್ದ ಇತರೆ ವಿಶ್ವಾಸಿಗಳಿಗಿಂತ ತಾವೇ ಶ್ರೇಷ್ಠರು ಎಂದು ಯೋಚಿಸುವ ಹೀನವಾದ ಪಾಪಕ್ಕೆ ಅವರು ಒಳಗಾಗಿದ್ದರು (ಇದು ಅವರು ನಡೆದುಕೊಳ್ಳಬೇಕಾದ ರೀತಿಗೆ ಸಂಪೂರ್ಣ ವಿರುದ್ಧವಾದ ರೀತಿಯಾಗಿತ್ತು. ಫಿಲಿಪ್ಪಿ 2:3 ನೋಡಿರಿ. ಲೂಕ 18:9 ರೊಂದಿಗೆ ಹೋಲಿಸಿ ನೋಡಿರಿ). ಪೌಲನು ಅವರಿಗೆ ಜ್ಞಾಪಕಪಡಿಸುತ್ತಾ ಇರುವದೇನೆಂದರೆ ನಿಮಗಿರುವದೆಲ್ಲವೂ ದೇವರಿಂದ ನಿಮಗೆ ದೊರಕಿರುವ ವರದಾನವಾಗಿದೆ, ಆದ್ದರಿಂದ ನೀವೇನಾದರೂ ಹಿಗ್ಗಬೇಕಾದರೆ, ನಿಮಗೆ ಅವುಗಳನ್ನು ಕೊಟ್ಟವನಲ್ಲಿ ಹಿಗ್ಗಬೇಕೇ ಹೊರತು ನಿಮ್ಮಲ್ಲಿ ಹೆಚ್ಚಳಪಡಬಾರದು (15:10). **8-13**

**4:8-13** ಈ ವಚನಗಳಲ್ಲಿ ಪೌಲನು ಅವರ ಹೆಚ್ಚಳಪಡುವಿಕೆಯನ್ನು ಟೀಕಿಸುವ ಸಲುವಾಗಿ ವ್ಯಂಗ್ಯವಾಡುತ್ತಾ ಇದ್ದಾನೆ. ಅವರ ಆತ್ಮೀಕ ಜೀವಿತದ ಲಾಭಕ್ಕಾಗಿ ಆತನು ಈ ಕಾರ್ಯವನ್ನು ಮಾಡಿದ್ದಾನೆ. **8**

**4:8** ಪೌಲನು ಹೇಳುತ್ತಾ ಇರುವದೇನೆಂದರೆ, "ನಾವು ಕ್ರೈಸ್ತೀಯ ಜೀವಿತದಲ್ಲಿ ದೊಡ್ಡ ಹಂತಕ್ಕೆ ಬಂದಿದ್ದೇವೆ; ಪರಿಪೂರ್ಣತೆಯ ಗುರಿಯನ್ನು ತಲುಪಿದ್ದೇವೆ; ಯೇಸು ಕ್ರಿಸ್ತನೊಂದಿಗೆ

ಪ್ರಭಾವದಲ್ಲಿ ಆಳ್ವಿಕೆ ಮಾಡಲು ಪ್ರಾರಂಭಿಸಿದ್ದೇವೆ, ಎಂದು ಪುರಾವೆಯುತವಾಗಿ ನೀವು ಅಂದುಕೊಳ್ಳುತ್ತಾ ಇದ್ದೀರಿ." **9**

**4:9** ಅಪೊಸ್ತಲರು ಎದುರಿಸಿದ ಹಿಂಸೆಗಳು ಮತ್ತು ಕಷ್ಟದ ಪರಿಸ್ಥಿತಿಗಳನ್ನು ಪೌಲನು ಸೂಚಿಸುತ್ತಾ ಇದ್ದಾನೆ (ಅಪೊ 5:17-18,40; 12:1-4; 14:19; 16:22-24; 2 ಕೊರಿಂಥ 11:23-27). ಆಗಿನ ಕಾಲದಲ್ಲಿ ಅಧಿಕಾರಿಗಳು ಕೆಲವೊಮ್ಮೆ ಅಪರಾಧಿಗಳಿಗೆ ಗಲ್ಲುಶಿಕ್ಷೆ ಕೊಡುವ ಮೊದಲು ಜನರ ಮುಂದೆ ಮೆರವಣಿಗೆ ಮಾಡಿಸುತ್ತಾ ಇದ್ದರು. ಈ ಲೋಕದಲ್ಲಿ ನನ್ನ ಪರಿಸ್ಥಿತಿ ಇಂಥದ್ದೇ ಎಂದು ಪೌಲನು ಹೇಳುತ್ತಾ ಇದ್ದಾನೆ. ಇದಕ್ಕೆ ಕಾರಣ ಆಕಸ್ಮಿಕ ಅಥವಾ ಹಣೆಬರಹ ಎಂದು ಆತನು ನಂಬುತ್ತಾ ಇಲ್ಲ. ದೇವರು ಈ ಕಾರ್ಯವನ್ನು ಒಳ್ಳೆಯದಕ್ಕಾಗಿ, ಉತ್ತಮವಾದ ಉದ್ದೇಶದಿಂದ ಮಾಡಿದ್ದಾನೆ ಎಂದು ಅವನು ಬಲ್ಲವನಾಗಿದ್ದನು. **10**

**4:10** *"ಕ್ರಿಸ್ತನ ನಿಮಿತ್ತ ಹುಚ್ಚರಾಗಿದ್ದೇವೆ"*– ಇದರ ಅರ್ಥ ಅವರು ಲೋಕದ ಜ್ಞಾನವನ್ನು ತಿರಸ್ಕರಿಸಲು ಮತ್ತು ಲೋಕವು ಹುಚ್ಚುತನ ಎಂದು ಹೇಳುವದರ ಬಗ್ಗೆ ಬೋಧಿಸಲು ಸಿದ್ಧರಾಗಿದ್ದರು (1:18,23). ಕೊರಿಂಥದಲ್ಲಿದ್ದ ಕ್ರೈಸ್ತರು ನಿಜವಾಗಿಯೂ ಬಹಳ ಬುದ್ಧಿವಂತರಾಗಿರಲಿಲ್ಲ-ನಾವು ಬುದ್ಧಿವಂತರು ಎಂಬದಾಗಿ ಅವರು ಅಂದುಕೊಂಡಿದ್ದರಷ್ಟೆ.

*"ಬಲಹೀನರು"*– 2:3; 2 ಕೊರಿಂಥ 12:9-10. **11**

**4:11** 2 ಕೊರಿಂಥ 11:27. ಲೋಕವು ಉತ್ತಮವರು ಮತ್ತು ಎಲ್ಲಾ ಜನರಲ್ಲಿ ಆತ್ಮೀಕರಾಗಿರುವವರೊಂದಿಗೆ ಈ ರೀತಿಯಾಗಿಯೇ ನಡೆದುಕೊಳ್ಳುತ್ತದೆ. ಇಬ್ರಿ 11:36-38; ಯೋಹಾನ 15:18-21; 16:33. **12**

**4:12** *"ಸ್ವಂತ ಕೈಗಳಿಂದ ಕೆಲಸ ಮಾಡಿ"*– ಅಪೊ 18:3; 20:34-35.

*"ಹರಸುತ್ತೇವೆ"*–ಮತ್ತಾಯ 5:44; ಲೂಕ 6:27-28; ರೋಮಾ 12:14; 1 ಪೇತ್ರ 2:21-23. **13**

**4:13** *"ಕಸ"*– ಅಂದರೆ, ಲೋಕವು ಯೇಸು ಕ್ರಿಸ್ತನ ಅಪೊಸ್ತಲರನ್ನು ಕೀಳು, ಹೊಲಸು ಮತ್ತು ಎಲ್ಲಾ ಜನರಲ್ಲಿ ಅತ್ಯಂತ ಹೀನರೆಂದು ಭಾವಿಸುತ್ತಾ ಇತ್ತು. **14**

**4:14** ಅವರು ತನ್ನ ಮೇಲೆ ಕರುಣೆ ತೋರಿಸಬೇಕು ಅಥವಾ ಅವರನ್ನು ನಾಚಿಕೆಪಡಿಸಬೇಕು ಎಂಬ ಕಾರಣದಿಂದ ಪೌಲನು ಈ ವಿಷಯಗಳನ್ನು ಬರೆದಿಲ್ಲ. ಆತನು ಹೀನವಾಗಿದ್ದ ಅವರ ಆತ್ಮೀಕ ಪರಿಸ್ಥಿತಿಯನ್ನು ನೋಡಿದನು ಮತ್ತು ಅವರ ಮೇಲಿನ ಪ್ರೀತಿಯಿಂದ ("ನನ್ನ ಪ್ರೀತಿಯ ಮಕ್ಕಳೇ") ಆ ವಿಷಯದಲ್ಲಿ ಅವರಿಗೆ ಎಚ್ಚರಿಕೆಯನ್ನು ಕೊಟ್ಟನು. **15**

**4:15** ಅವರು ದೇವರ ರಾಜ್ಯದೊಳಗೆ ಆತ್ಮೀಕ ಜನನವನ್ನು ಅನುಭವಿಸಿದ್ದರು (ಯೋಹಾನ 1:12-13; 3:3-8), ಪೌಲನ ಸೇವೆ ಇದಕ್ಕೆ ಕಾರಣವಾಗಿತ್ತು. ಗಲಾ 4:19 ರೊಂದಿಗೆ ಹೋಲಿಸಿ ನೋಡಿರಿ. **16**

**4:16** ಫಿಲಿಪ್ಪಿ 3:17; 1 ಥೆಸ 1:6. ಪೌಲನು ಜನರನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸಲೇ ಇಲ್ಲ (3:1-7). ಆದರೆ ಮಾನವರು ಯಾವ ರೀತಿ ಜೀವಿಸಬೇಕು ಎಂಬದಕ್ಕೆ ತನ್ನನ್ನು ಮಾದರಿಯನ್ನಾಗಿ ಮಾಡಿದ್ದಾನೆ ಮತ್ತು ತಾನು ಬೋಧಿಸಿದ ಸುವಾರ್ತೆಯನ್ನು ತನಗೆ ಪ್ರಕಟಿಸಿದ್ದಾನೆ ಎಂದು ಅವನು ಬಲ್ಲವನಾಗಿದ್ದನು. ಅವನು ಯೇಸು ಕ್ರಿಸ್ತನನ್ನು ಅನುಸರಿಸುವವನಾಗಿದ್ದನು, ಆದ್ದರಿಂದ ವಿಶ್ವಾಸಿಗಳು ಆತನನ್ನು ಅನುಸರಿಸುವದು ಸುರಕ್ಷಿತವಾಗಿತ್ತು – 11:1. ಅವನು ಅನೇಕರ ಹಾಗೆ ಹೇಳುವದು ಒಂದು ಮಾಡುವದು ಇನ್ನೊಂದು ಎಂಬ ವ್ಯಕ್ತಿಯಾಗಿರಲಿಲ್ಲ (ಮತ್ತಾಯ 23:3; ರೋಮಾ 2:21-24). ಅವರಿಗೆ ತೊಂದರೆ ಕೊಡಲು ಬಂದಿದ್ದ ಸುಳ್ಳು ಬೋಧಕರನ್ನು ಹಿಂಬಾಲಿಸುವದು ಸುರಕ್ಷಿತವಾಗಿರಲಿಲ್ಲ. **17**

**4:17** ಪೌಲನು ತಿಮೊಥೆಯ ಸ್ವಾಭಾವಿಕ ತಂದೆಯಲ್ಲ ಬದಲಾಗಿ ಆತ್ಮೀಕ ತಂದೆಯಾಗಿದ್ದನು (ಅಪೊ 16:1; 1 ತಿಮೊ 1:2). ಪೌಲನ ಜೀವಿಸುವ ಮಾರ್ಗವು ಅವನ ಬೋಧನೆಗಳಿಗೆ ಅನುಸಾರವಾಗಿತ್ತು ಎಂಬದಾಗಿ ಅವನು ಕೊರಿಂಥದವರಿಗೆ ಹೇಳುವವನಾಗಿದ್ದನು. **18**

**4:18** ಈ ಜನರು ಅಲ್ಲಿ ಪೌಲನನ್ನು ವಿರೋಧಿಸುತ್ತಾ ಇದ್ದ ಒಂದು ಗುಂಪಿನವರಾಗಿದ್ದರು. ಅವರು ತಮ್ಮ ಲೌಕಿಕ ಜ್ಞಾನ ಮತ್ತು ಪಾಪಮಯವಾದ ಗರ್ವದಿಂದ ನಾವು ಅವನಿಗಿಂತ ಉತ್ತಮರು ಎಂದು ಅವರು ಅಂದುಕೊಳ್ಳುತ್ತಾ ಇದ್ದರು. ಅವನು ಕೊರಿಂಥಕ್ಕೆ ಹಿಂದಿರುಗಿ ಬರುವದಿಲ್ಲ ಎಂಬದಾಗಿ ಅವರು ನೆನೆಸಿದ್ದರು. **19**

**4:19** *"ಕರ್ತನ ಚಿತ್ತವಿದ್ದರೆ"*– ಇದು ಪೌಲನ ಜೀವಿತದಲ್ಲಿ ಯಾವಾಗಲೂ ಇದ್ದ ಆಡಳಿತಾತ್ಮಕ ಆಲೋಚನೆಯಾಗಿತ್ತು. ಯಾಕೋಬ 4:13-16 ರೊಂದಿಗೆ ಹೋಲಿಸಿ ನೋಡಿರಿ. **20**

**4:20** ಕೊರಿಂಥದಲ್ಲಿದ್ದ ಪೌಲನ ವಿರೋಧಿಗಳು ಒಳ್ಳೆಯ ಭಾಷಣಕಾರರಾಗಿದ್ದರು ಆದರೆ ಒಳ್ಳೆಯ ಜೀವನನ್ನು ಜೀವಿಸುವವರಾಗಿದ್ದರೇ? ಯೇಸು ಕ್ರಿಸ್ತನ ನಿಜವಾದ ಸುವಾರ್ತೆಯು ರಕ್ಷಣೆಗೆ ನಡೆಸುವ ದೇವರ ಶಕ್ತಿಯಾಗಿದೆ (ರೋಮಾ 1:16). ಅದು ಜನರನ್ನು ನೂತನರನ್ನಾಗಿ ಮಾಡುತ್ತದೆ (2 ಕೊರಿಂಥ 5:17). ಒಂದುವೇಳೆ ಒಬ್ಬ ವ್ಯಕ್ತಿಯು ಬದಲಾಗಿಲ್ಲವೆಂದರೆ, ಅವನಿಗೆ ದೀನತೆಯಿಂದ, ವಿಧೇಯತೆಯಿಂದ, ಪರಿಶುದ್ಧತೆಯಿಂದ ಜೀವಿಸುವ ಶಕ್ತಿಯಿಲ್ಲವೆಂದರೆ, ಅವನ ಮಾತು ಮತ್ತು ಬೋಧನೆ ವ್ಯರ್ಥವಾಗಿದೆ. ರೋಮಾ 14:17 ರೊಂದಿಗೆ ಹೋಲಿಸಿ ನೋಡಿರಿ. **21**

**4:21** *"ಬೆತ್ತ"*– ಅವನು ಯೇಸು ಕ್ರಿಸ್ತನ ಅಪೊಸ್ತಲನಾಗಿದ್ದನು ಮತ್ತು ಅವರ ಆತ್ಮೀಕ ತಂದೆಯಾಗಿದ್ದನು (ವ 15). ಅವರ ಪರಿಸ್ಥಿತಿ ಹದಗೆಟ್ಟರೆ ಅವರನ್ನು ಕ್ರಮಶಿಕ್ಷಣಕ್ಕೆ ನಡೆಸುವ, ಗದರಿಸುವ ಮತ್ತು ಎಚ್ಚರಿಸುವ ಅಧಿಕಾರ ಅವನಿಗಿತ್ತು. 2 ಕೊರಿಂಥ 13:10

ನೋಡಿರಿ. ಆದರೆ ಗಂಭೀರವಾದ ಗದರಿಸುವಿಕೆಯ ಅವಶ್ಯಕತೆಯಿಲ್ಲದೆಯೇ ಅವನು ಅವರೊಂದಿಗೆ ಪ್ರೀತಿಪೂರ್ವಕವಾದ ಅನ್ಯೋನ್ಯತೆಯಲ್ಲಿರಲು ಬಯಸಿದನು. ಆಯ್ಕೆಯು ಅವರದ್ದಾಗಿತ್ತು. 2 ಕೊರಿಂಥ 1:23-24 ನೋಡಿರಿ.

# 5[1]

**5:1** ಪೌಲನು ಇದನ್ನು ಹೇಳಿರುವ ರೀತಿ – "ತಾಯಿ" ಎಂಬದಾಗಿ ಹೇಳದೆ "ತಂದೆಯ ಹೆಂಡತಿ" ಎಂದು ಹೇಳಿರುವದು – ಅವನು ಮಲತಾಯಿ ಎಂದು ಹೇಳುತ್ತಾ ಇದ್ದಾನೆ ಎಂಬದನ್ನು ಸೂಚಿಸುತ್ತದೆ. ಅವಿಶ್ವಾಸಿಗಳು ಸಹ ಟೀಕಿಸುವ ಪಾಪದ ಅಪರಾಧವನ್ನು ಅವನು ಮಾಡಿದ್ದನು (ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಇದನ್ನು ಟೀಕಿಸಲಾಗಿದೆ – ಯಾಜಕ 18:8; 22:30; 27:20). **2**

**5:2** *"ಉಬ್ಬಿಕೊಂಡೇ ಇದ್ದೀರಲ್ಲಾ" ಅಥವಾ "ಗರ್ವಪಡುತ್ತಾ ಇದ್ದೀರಲ್ಲಾ."*– ಅವರು ಈ ವಿಷಯದಲ್ಲಿ ತಮ್ಮ ಲೌಕಿಕ ಜ್ಞಾನದಲ್ಲಿ ಉಬ್ಬಿಕೊಂಡಿದ್ದರೋ? ಅಥವಾ ಸಹಿಸಿಕೊಳ್ಳುವ ಮನೋಭಾವನೆಯಲ್ಲಿ ಉಬ್ಬಿಕೊಂಡಿದ್ದರೋ? ಯೇಸು ಕ್ರಿಸ್ತನ ಸುವಾರ್ತೆಯು ಕ್ರೈಸ್ತರಿಗೆ ಏನು ಬೇಕೋ ಅದನ್ನು ಮಾಡುವ ಪರವಾನಗಿಯನ್ನು ಕೊಡುತ್ತದೆ ಎಂದು ಅವರು ಯೋಚಿಸಿದರೋ? ಸ್ಥಳೀಯ ಸಭೆಯು ಪಾಪ ಮಾಡುವ ಸದಸ್ಯನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬದರ ವಿಷಯವಾಗಿ ಪೌಲನು ಇಲ್ಲಿ ತಿಳಿಸಿದ್ದಾನೆ. ದುಃಖಿಸಬೇಕು – ಜೊತೆಯಲ್ಲಿರುವ ಕ್ರೈಸ್ತನು ಕೀಳು ಮಟ್ಟಕ್ಕೆ ಬಂದಿರುವದರಿಂದ, ಸಭೆ ದೇವರ ನ್ಯಾಯತೀರ್ಪು ಎದುರಿಸುವ ಅಪಾಯಕ್ಕೆ ಸಿಲುಕಿದೆ ಆದ್ದರಿಂದ ಕ್ರಿಸ್ತನ ನಾಮಕ್ಕೆ ಅಗೌರವ ಉಂಟಾಗಿದೆ. ತಪ್ಪು ಮಾಡಿರುವ ಕ್ರೈಸ್ತನು ನಾಯಕನಾಗಿದ್ದರೂ ತಮ್ಮ ಅನ್ಯೋನ್ಯತೆಯಿಂದ ಅವನನ್ನು ಹೊರಗೆ ಹಾಕುವದು ಅವರ ಜವಾಬ್ದಾರಿಕೆಯಾಗಿದೆ. ನಾಯಕನಾದರೆ, ಅವನು ತನ್ನ ತಪ್ಪಿಗಾಗಿ ಪಶ್ಚಾತ್ತಾಪಪಡುವ ಸಾಧ್ಯತೆಯೂ ಬಹಳ ಕಡಿಮೆ ಆದ್ದರಿಂದ ಅವರನ್ನು ಹೊರೆಗೆ ಹಾಕಬೇಕು. ಇಂಥ ಕ್ರಮಶಿಕ್ಷಣವನ್ನು ಅಭ್ಯಾಸ ಮಾಡಲು ಇಷ್ಟಪಡದ ಸಭೆಯು ದೇವರ ನ್ಯಾಯತೀರ್ಪಿಗೆ ಒಳಗಾಗುತ್ತದೆ – 11:30-32. **3**

**5:3** ವ್ಯಕ್ತಿಗತವಾಗಿ ಕ್ರೈಸ್ತರ ವಿಶಯವಾಗಿ ತೀರ್ಪು ಮಾಡುವದು ಕ್ರೈಸ್ತ ನಾಯಕರ ಜವಾಬ್ದಾರಿಕೆಯಾಗಿದೆಯೇ ಅಥವಾ ಸಭೆಯ ಜವಾಬ್ದಾರಿಕೆಯಾಗಿದೆಯೇ? ಹೌದು. ಸಭೆಯನ್ನು ಶುದ್ಧವಾಗಿಡುವದು, ಪಾಪವನ್ನು ಗದರಿಸುವದು ಮತ್ತು ಯೇಸು ಕ್ರಿಸ್ತನು ಕಲಿಸಿರುವ ಪವಿತ್ರವಾದ ಜೀವಿತಕ್ಕೆ ವಿರುದ್ಧವಾದ ನಡವಳಿಕೆ ಅನುಸರಿಸುವವರನ್ನು ಎಚ್ಚರಿಸುವದು ಅವರ ಜವಾಬ್ದಾರಿಕೆಯಾಗಿದೆ. ವ 12,13; ಮತ್ತಾಯ 18:15-17; ಅಪೊ 5:1-11 ನೋಡಿರಿ. ಇದು ಒಬ್ಬನು ಮತ್ತೊಬ್ಬನ ಮೇಲೆ ತೀರ್ಪು ಮಾಡುವದಕ್ಕೆ

ಸಮವಾದದ್ದಲ್ಲ (ಇದನ್ನು ನಾವು ಮಾಡಬಾರದು – 4:3,5; ಮತ್ತಾಯ 7:1-5; ರೋಮಾ 14:4,13). ಇದು ಸಭೆಯ ವಿಷಯವಾಗಿದೆ, ಸಭೆಯ ಅನ್ಯೋನ್ಯತೆಯಲ್ಲಿರಲು ಯಾರು ಯೋಗ್ಯರು, ಸಭೆಯಲ್ಲಿ ಯಾವ ಗುಣಮಟ್ಟ ಇರಬೇಕು ಎಂಬದನ್ನು ತಿಳಿಸುವ ವಿಷಯವಾಗಿದೆ. **4-5**

**5:4-5** ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ, ಆತನ ಪ್ರಸನ್ನತೆಯಲ್ಲಿ, ಆತನ ಶಕ್ತಿಯ ಮೂಲಕ ಕ್ರಮಶಿಕ್ಷಣವನ್ನು ತೆಗೆದುಕೊಳ್ಳಬೇಕು. ಆತನು ಸಭೆಯನ್ನು ಮಹದಾಗಿ ಶುದ್ಧೀಕರಿಸುವವನಾಗಿದ್ದಾನೆ ಮತ್ತು ಅದರ ಶಿರಸ್ಸು ಹಾಗೂ ಕರ್ತನಾಗಿದ್ದಾನೆ. ಸ್ಥಳೀಯ ಸಭೆಗಳು ಆತನ ಅಧಿಕಾರದನುಸಾರವಾಗಿ ಕಾರ್ಯ ಮಾಡಬೇಕು. ಪಾಪ ಮಾಡುವ ಕ್ರೈಸ್ತನನ್ನು ಸೈತಾನನ ಕೈಗಳಿಗೆ ಒಪ್ಪಿಸುವದೆಂದರೆ ಅವನನ್ನು ಸಭೆಯಿಂದ ಹೊರಗೆ ಹಾಕುವದು ಮತ್ತು ಅವನು ಪಶ್ಚಾತ್ತಾಪಪಡುವ ತನಕ ಅವನೊಂದಿಗೆ ಯಾವುದೇ ಸಂಬಂಧದಲ್ಲಿ ಇಲ್ಲದೆ ಇರುವದಾಗಿದೆ – ವ 11,13. ಅವನನ್ನು ಬಾಧಿಸಲು ಸೈತಾನನಿಗೆ ಅವಕಾಶ ಕೊಡುವದು ಎಂಬದಾಗಿಯೂ ಇದು ಸೂಚಿಸುತ್ತದೆ. ಸಭೆಯ ಹೊರಗಿರುವ ಲೋಕವು ಸೈತಾನನ ರಂಗವಾಗಿದೆ (ಯೋಹಾನ 14:30; ಎಫೆ 2:2; ಕೊಲೊ 1:3; 1 ಯೋಹಾನ 5:19). ಸೈತಾನನಿಗೆ ಮಾನವರ ಶರೀರವನ್ನು ಬಾಧಿಸುವ ಅಧಿಕಾರವಿದೆ (ಯೋಬ 2:4-7) ಮತ್ತು ಅವನಿಗೆ ಮರಣದ ಮೇಲೆಯೂ ಅಧಿಕಾರವಿದೆ (ಇಬ್ರಿ 2:14. ಸೈತಾನನ ಕುರಿತಾದ ನೋಟ್ಸ್ ಗಾಗಿ 1 ಪೂರ್ವ 21:1; ಮತ್ತಾಯ 4:1-10 ನೋಡಿರಿ). ಸೈತಾನನ ಕೈಗಳಿಗೆ ಒಪ್ಪಿಸುವದು ಘೋರವಾದ ಮತ್ತು ವೇದನೆಯುಳ್ಳ ಕ್ರಮಶಿಕ್ಷಣವಾಗಿದೆ. ಆದರೆ ಇಲ್ಲಿ ಪೌಲನು ಅದರ ಹಿಂದಿರುವ ಒಳ್ಳೆಯ ಉದ್ದೇಶವನ್ನು ತಿಳಿಸುತ್ತಾ ಇದ್ದಾನೆ. ಮಾನವನ ಶರೀರವು ನಾಶವಾಗಬೇಕು ಮತ್ತು ಅವನ ಆತ್ಮವು ರಕ್ಷಣೆ ಹೊಂದಬೇಕು ಎಂಬದು ಅವನ ಬಯಕೆಯಾಗಿದೆ. **5**

**5:5** *"ಶರೀರಭಾವವು ನಾಶವಾಗಬೇಕು"*– ಇಲ್ಲಿ (ಸಾರಕ್ಸ್) ಗ್ರೀಕ್ ಪದವನ್ನು ಉಪಯೋಗಿಸಲಾಗಿದೆ, ಈ ಪದ ಹಲವು ಅರ್ಥಗಳನ್ನು ಹೊಂದಿದೆ. ಇದರ ಅರ್ಥ ನಿಜವಾದ ಶರೀರ ಅಥವಾ ದೇಹ ಅಥವಾ ಮಾನವನಲ್ಲಿರುವ ಪಾಪದ ಸ್ವಭಾವ ಹಾಗೂ ಇನ್ನಿತರೆ ಕಾರ್ಯಗಳಿರಬಹುದು. ಪೌಲನು ಮಾನವನ ಮರಣ ಅಥವಾ ಅವನು ತನ್ನ ಶರೀರವನ್ನು ವ್ಯರ್ಥಮಾಡುತ್ತಾ ಇದ್ದಾನೆ ಎಂಬದರ ಬಗ್ಗೆ ಪೌಲನು ಮಾತನಾಡುತ್ತಾ ಇರುವದಾಗಿಯೂ ಅನ್ನಿಸುತ್ತದೆ. ವಿಶ್ವಾಸಿಯೊಳಗಿರುವ ಪಾಪದ ಸ್ವಭಾವವು ಈ ಜೀವಿತದಲ್ಲಿ ನಾಶವಾಗುವದಿಲ್ಲ ( ರೋಮಾ 7, ಇತ್ಯಾದಿ ನೋಟ್ಸ್ ನೋಡಿರಿ) ಮತ್ತು ಯಾವುದೇ ಪರಿಸ್ಥಿತಿಯಲ್ಲಿಯೂ, ಅಸಿತಾನನು ಮಾನವನ ಪಾಪದ ಸ್ವಭಾವವನ್ನು ಹಾಳುಮಾಡಲು ಕಾರ್ಯಮಾಡುವದಿಲ್ಲ ಬದಲಾಗಿ ಪಾಪದ ಸ್ವಭಾವವು ನೆಲೆಯಾಗಿರುವ ಅವರ ದೇಹಗಳನ್ನು ಹಾಳುಮಾಡುತ್ತಾನೆ – ಅಂದರೆ ಅವರನ್ನು ಕೊಲ್ಲುವ ಮೂಲಕ ಈ ಕಾರ್ಯವನ್ನು

ಮಾಡುತ್ತಾನೆ.

*"ಆತ್ಮವು ರಕ್ಷಣೆ ಹೊಂದಬೇಕು"*– ತನ್ನ ಜನರನ್ನು ದೇವರು ಯಾವಾಗಲೂ ಒಳ್ಳೆಯ ಉದ್ದೇಶವುಳ್ಳವನಾಗಿಯೇ ಶಿಕ್ಷಿಸುತ್ತಾನೆ (11:32; ಇಬ್ರಿ 12:7-11). ಕೆಲವರನ್ನು ಕಾಪಾಡಲು ಇರುವ ಒಂದೇ ಮಾರ್ಗವೆಂದರೆ ಅವರು ಹೆಚ್ಚಿನ ಪಾಪ ಮಾಡದ ಹಾಗೆ ಮರಣದ ಮೂಲಕ ಅವರನ್ನು ತೆಗೆದುಕೊಳ್ಳುವದೇ ಆಗಿದೆಯೇ? ಈ ವಾಕ್ಯಗಳು ಇಂಥ ಒಂದು ಆಲೋಚನೆಯನ್ನು ಕೊಡುತ್ತವೆ. 11:30 ಸಹ ನೋಡಿರಿ. ಒಂದುವೇಳೆ ಇದು ಅವಶ್ಯವಾಗಿದ್ದರೆ, ತನ್ನವರಲ್ಲಿ ಒಬ್ಬನು ಶಾಶ್ವತವಾಗಿ ನಾಶವಾಗಲು ಬಿಡದೆ ದೇವರು ಖಂಡಿತವಾಗಿಯೂ ಇದನ್ನು ಮಾಡುತ್ತಾನೆ (ಯೋಹಾನ 6:49-50). **6**

**5:6** ವಚನ 2. ಈತನ ಮಾತಿನ ಅರ್ಥವೇನೆಂದರೆ ಪಾಪವು ಸಭೆಯಲ್ಲಿ ಚಿಕ್ಕದಾಗಿ ಪ್ರಾರಂಭವಾಗುತ್ತದೆ ಆದರೆ ಸಭೆಯ ತುಂಬಾ ಹರಡಿಕೊಳ್ಳುತ್ತದೆ. ಕೂಡಲೇ ಮತ್ತು ಗಂಭೀರವಾಗಿ ಅದನ್ನು ಬಗೆಹರಿಸುವದು ಬಹಳ ಪ್ರಾಮುಖ್ಯ ಎಂಬದಕ್ಕೆ ಇದೂ ಒಂದು ಪ್ರಮುಖ ಕಾರಣವಾಗಿದೆ. ಒಂದುವೇಳೆ ಸಭೆ ಈ ಕಾರ್ಯವನ್ನು ಮಾಡದೆ ಹೋದರೆ, ಸಭೆಯಲ್ಲಿರುವ ಜನರಿಗೆ ಪಾಪ ಪ್ರಾಮುಖ್ಯವಾದ ವಿಷಯವಲ್ಲ ಎಂಬ ಯೋಚನೆ ಬರುತ್ತದೆ ಮತ್ತು ನಾವು ಏನೇ ಮಾಡಿದರೂ ತಪ್ಪಿಸಿಕೊಳ್ಳಬಹುದು ಎಂಬದಾಗಿ ಅವರು ಅಂದುಕೊಳ್ಳುತ್ತಾರೆ. **7**

**5:7** *"ಹಳೆ ಹುಳಿ"*– ಅಂದರೆ ಭ್ರಷ್ಟವಾಗಿರುವ ಹಳೆಯ ಸ್ವಭಾವಗಳು. ಸಭೆ "ಹೊಸ ಕಣಿಕದಲ್ಲಿರುವ" ಹಿಟ್ಟಿನಂತಿದೆ ಆದ್ದರಿಂದ ಹಳೆಯ ಜೀವಿತದ ಕಾರ್ಯಗಳಿಗೆ ಅದರೊಳಗೆ ಅವಕಾಶವಿಲ್ಲ. ಎಫೆ 5:25-27; ಕೊಲೊ 3:5-12 ರೊಂದಿಗೆ ಹೋಲಿಸಿ ನೋಡಿರಿ. ಪಸ್ಕದ ಊಟವನ್ನು ಹುಳಿಯಿಲ್ಲದ ಹಿಟ್ಟಿನಿಂದ ಮಾಡುವ ರೊಟ್ಟಿಯೊಂದಿಗೆ ತಿನ್ನಲಾಗುತ್ತದೆ, ಹುಳಿಹಿಟ್ಟು ದುಷ್ಟತನದ ಚಿತ್ರಣವಾಗಿದೆ – ವಿಮೋ 12:14-15; ಯಾಜಕ 23:5-6 ನೋಡಿರಿ. ಶಿಲುಬೆಯ ಮೇಲಿನ ಯೇಸು ಕ್ರಿಸ್ತನ ಮರಣವು ಪಸ್ಕ ಹಬ್ಬದ ಆತ್ಮೀಕ ನೇರವೇರುವಿಕೆಯಾಗಿದೆ (ಮತ್ತಾಯ 26:26-28; ಯೋಹಾನ 1:29; 6:53-58). **8**

**5:8** "ಹಬ್ಬ" ಆಚರಣೆ ಮಾಡುವದೆಂದರೆ, ಅಕ್ಷರಾರ್ಥವಾಗಿ ಪಸ್ಕದ ಹಳೆಯ ಯೆಹೂದ್ಯರ ಪದ್ಧತಿಗಳನ್ನು ಪಾಲಿಸುವದು ಎಂಬದಾಗಿಯಲ್ಲ. ಈ ಕಾರ್ಯವನ್ನು ಮಾಡುವಂತೆ ಕ್ರೈಸ್ತರಿಗೆ ಎಲ್ಲಿಯೂ ಕಲಿಸಲಾಗಿಲ್ಲ. ವಿಶ್ವಾಸಿಗಳ ಹಬ್ಬವು ತಮ್ಮ ಪಸ್ಕವಾಗಿರುವ ಯೇಸು ಕ್ರಿಸ್ತನ ಕುರಿತಾದ ಸತ್ಯಗಳ ಮೇಲೆ ಆಧಾರವಾಗಿರುವ ಸತತವಾದ "ಹಬ್ಬವಾಗಿದೆ." ಅದು ಆತನೊಂದಿಗೆ ಹೊಸ ಜೀವಿತದಲ್ಲಿ ದೊರೆಯುವ ಅನ್ಯೋನ್ಯತೆಯಾಗಿದೆ. ಗರ್ವ, ಅಹಂಕಾರ ಮತ್ತು ಜಗಳ, ಅನೈತಿಕತೆ, ಅಪ್ರಾಮಾಣಿಕತೆ, ಇತ್ಯಾದಿ ಕಾರ್ಯಗಳಿಗೆ ಈ "ಹಬ್ಬದಲ್ಲಿ" ಜಾಗವಿಲ್ಲ. **9-11**

**5:9-11** ವಿಶ್ವಾಸಿಗಳು ಲೋಕದವರೊಂದಿಗೆ ನಡೆದುಕೊಳ್ಳುವ ಹಾಗೆ ಪಾಪ ಮಾಡುವ

ಕ್ರೈಸ್ತರೊಂದಿಗೆ ನಡೆದುಕೊಳ್ಳಬಾರದು. ವಿಶ್ವಾಸಿಗಳು ಲೋಕದಲ್ಲಿ ಜಿವಿಸುವವರಾಗಿದ್ದಾರೆ ಆದ್ದರಿಂದ ಪಾಪದ ಜನರ ಸಹವಾಸವನ್ನು ಮಾಡದೆ ದೂರವಿರಲಾರರು. ಆದರೆ "ಸಹೋದರ ಎಂಬದಾಗಿ ಕರೆಯಲ್ಪಡುವವನು" ಪಾಪದಲ್ಲಿ ಜೀವಿಸುವವನಾಗಿದ್ದರೆ ಅದು ಬೇರೆ ವಿಷಯವಾಗಿದೆ. ನಾವು ಅಂಥ ವ್ಯಕ್ತಿಯೊಂದಿಗೆ ಸೇರಲೂ ಬಾರದು ಅಥವಾ ತಿನ್ನಲೂ ಬಾರದು ಎಂಬ ನೇರವಾದ ಆಜ್ಞೆಯನ್ನು ನಮಗೆ ಕೊಡಲಾಗಿದೆ. ಹಾಗೆಯೇ 1 ಥೆಸ 3:6 ನೋಡಿರಿ. **12-13**

**5:12-13** ವಚನ 3; 6:1-5; 11:31. ಜನರಿಗೆ ವ್ಯಕ್ತಿಗತವಾಗಿ ಇತರೆ ಜನರ ವಿಷಯವಾಗಿ ತೀರ್ಪು ಮಾಡುವ ಮತ್ತು ಅವರನ್ನು ಗೇಲಿಮಾಡುವ ಅಧಿಕಾರವಿಲ್ಲ, ಆದರೆ ಸಭೆಗೆ ತನ್ನ ಅನ್ಯೋನ್ಯತೆಗೆ ಬರುವವರ ವಿಷಯದಲ್ಲಿ ತೀರ್ಪು ಮಾಡುವ ಅಧಿಕಾರವಿದೆ. ಸಭೆ ತನ್ನ ಅಧಿಕಾರವನ್ನು ಉಪಯೋಗ ಮಾಡಬೇಕು. ದುಷ್ಟರನ್ನು ಹೊರ ಹಾಕಿದಾಗ, ಸಭೆ ಪರಿಶುದ್ಧತೆಯಲ್ಲಿ ಮತ್ತು ಶಕ್ತಿಯಲ್ಲಿ ಬೆಳೆಯುತ್ತದೆ. ಅವರನ್ನು ಹೊರಗೆ ಹಾಕದೆ ಹೋದರೆ, ನಾಶನವು ಬಾಗಿಲ ಬಳಿಯಲ್ಲಿಯೇ ಕಾಯುತ್ತಾ ನಿಂತಿರುತ್ತದೆ. ಒಂದುವೇಳೆ ವ್ಯಭಿಚಾರಿಗಳು, ಕಳ್ಳರು ಮತ್ತು ಪ್ರಾಮಾಣಿಕತೆಯಿಲ್ಲದ ಜನರಿಗೆ ಅನ್ಯೋನ್ಯತೆಯಲ್ಲಿ ಮುಂದುವರೆಯಲು ಅವಕಾಶ ನೀಡಿದರೆ, ದೇವರು ದೊಡ್ಡ ಪ್ರಮಾಣದಲ್ಲಿ ತನ್ನ ಆಶೀರ್ವಾದಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾನೆ. ಅಂಥ ಸಭೆಯಲ್ಲಿ ಅನೇಕ ಆತ್ಮೀಕ ವರಗಳು ಮತ್ತು ಸೇವೆಯಲ್ಲಿ ಯಶಸ್ಸು ಇರಬಹುದು ಆದರೆ ಅಲ್ಲಿರುವ ಹೊಲಸುತನವು ನಿಜವಾದ ಆತ್ಮೀಕ ಜೀವಿತವನ್ನು ಕದ್ದುಕೊಳ್ಳುತ್ತದೆ.

# 6 1-8

**6:1-8** ಒಬ್ಬರ ಮೇಲೊಬ್ಬರು ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹಾಕುವದರಲ್ಲಿ ಯಾವುದೇ ತಪ್ಪಿಲ್ಲ ಎಂದು ಕೆಲವು ಕ್ರೈಸ್ತರು ಈಗಲೂ ಅಂದುಕೊಂಡಿದ್ದಾರೆ. ಕೆಲವೊಮ್ಮೆ ಇಡೀ ಸಭೆಗಳು ಮತ್ತು ಸಂಸ್ಥೆಗಳು ಇದರಲ್ಲಿ ಭಾಗಿಯಾಗುತ್ತವೆ. ಇಲ್ಲಿ ಅಪೊಸ್ತಲನ ಮಾತುಗಳು (ದೇವರಾತ್ಮನ ಪ್ರೇರಣೆಯುಳ್ಳವುಗಳು) ಅಂಥ ಕಾರ್ಯವನ್ನು ಗಂಭೀರವಾಗಿ ಟೀಕಿಸುತ್ತದೆ. ಅದು "ನಾಚಿಕೆಯ ಕಾರ್ಯವಾಗಿದೆ" (ವ 5), "ಸಭೆಯಲ್ಲಿ ಜ್ಞಾನದ ಕೊರತೆಯಿರುವದನ್ನು" ಅದು ತೋರಿಸುತ್ತದೆ (ವ 5), ಇದಲ್ಲದೆ ಸಭೆ ತನ್ನ ಕ್ರೈಸ್ತೀಯ ಜೀವಿತ ಹಾಗೂ ನಡೆಯಲ್ಲಿ ಸೋತುಹೋಗಿದೆ ಎಂಬದನ್ನು ಅದು ತೋರಿಸುತ್ತದೆ (ವ 7). **1**

**6:1** *"ಅನ್ಯಜನರು"*– ಇದರ ಅರ್ಥ ಸಭೆಯ ಹೊರಗಿರುವವರು, ಲೋಕದ ಜನ. ಎಫೆ 2:12. "ದೇವಜನರು" ಎಂದರೆ ವಿಶ್ವಾಸಿಗಳೇ ಹೊರತು ವಿಶೇಷವಾಗಿ ಪರಿಶುದ್ಧತೆಯುಳ್ಳ ವಿಶ್ವಾಸಿಗಳಲ್ಲ (ರೋಮಾ 1:7 ರಲ್ಲಿ ನೋಟ್ ನೋಡಿರಿ). "ಧೈರ್ಯವುಂಟೋ" ಎಂಬ ಪದವನ್ನು ಗಮನಿಸಿರಿ. ಪೌಲನ ಪ್ರಕಾರ ಕ್ರೈಸ್ತರು ಒಬ್ಬರ ಮೇಲೊಬ್ಬರು ಮೊಕದ್ದಮೆ

ಹಾಕುವದು ತಪ್ಪು ಮತ್ತು ಆಘಾತಕಾರಿಯಾದ ವಿಷಯವಾಗಿದೆ. ಮತ್ತಾಯ 5:23-26 ನೋಡಿರಿ. ಕ್ರೈಸ್ತರ ನಡುವೆಯಿರುವ ಎಲ್ಲಾ ಮನಸ್ತಾಪಗಳನ್ನು ಸಭೆಯೇ ಬಗೆಹರಿಸಬೇಕು. **2**

**6:2** ಯೇಸು ಕ್ರಿಸ್ತನು ಮತ್ತೆ ಬರುವಾಗ ನಡೆಯುವ ನ್ಯಾಯತೀರ್ಪನ್ನು ಇದು ಸೂಚಿಸುತ್ತದೆ. ಯೇಸು ಕ್ರಿಸ್ತನ ಜನರು ಆತನೊಂದಿಗೆ ಆಳ್ವಿಕೆ ಮಾಡುತ್ತಾರೆ (2 ತಿಮೊ 2:12; ಪ್ರಕ 3:21; 20:4). ಅಂದರೆ, ಅವರು ದೇವರ ರಾಜ್ಯದಲ್ಲಿ ಆತನೊಂದಿಗೆ ಕಾರ್ಯಮಾಡುವರು ಮತ್ತು ಅದರಲ್ಲಿ ನ್ಯಾಯವಿಚಾರಣೆಯೂ ಇರುವದು. ಮತ್ತಾಯ 19:28; ಲೂಕ 22:30; ಪ್ರಕ 2:26-27 ರೊಂದಿಗೆ ಹೋಲಿಸಿ ನೋಡಿರಿ. **3**

**6:3** ಯೇಸು ಕ್ರಿಸ್ತನೊಂದಿಗೆ ಆಳ್ವಿಕೆ ಮತ್ತು ನ್ಯಾಯವಿಚಾರಣೆ ಮಾಡುವದು ಎಂದರೆ ಎಲ್ಲಾ ಸೃಷ್ಟಿ ಮತ್ತು ಸೃಷ್ಟಿಸಲ್ಪಟ್ಟಿರುವವುಗಳ ಮೇಲೆ ಆಳ್ವಿಕೆ ಮತ್ತು ನ್ಯಾಯವಿಚಾರಣೆ ಮಾಡುವದಾಗಿದೆ. ಹೀಗಿರುವಾಗ, ಭೂಲೋಕದ ಸಾಧಾರಣ ವಿಷಯಗಳನ್ನು ಬಗೆಹರಿಸಲು ಅವರಿಂದ ಆಗುವದಿಲ್ಲವೇ? **4**

**6:4** ಅವನು ವ್ಯಂಗ್ಯವಾಗಿ ಮಾತನಾಡುತ್ತಾ ಇರಬಹುದು. ಅಥವಾ ಅವನ ಮಾತಿನ ಅರ್ಥ – "ಲೋಕದ ನ್ಯಾಯವಿಚಾರಕರ ಬಳಿಗೆ ಹೋಗುವ ಬದಲು ಸಭೆಯಲ್ಲಿ ಗಣನೆಗೆ ಬಾರದ ವಿಶ್ವಾಸಿಯನ್ನು ಆ ಕಾರ್ಯಕ್ಕೆ ನೇಮಿಸುವದೇ ಉತ್ತಮ." **5**

**6:5** *"ಜಾಣನು"*– ಕೆಲವರು ನಾವು ತುಂಬಾ ಜಾಣರು ಎಂಬದಾಗಿ ಅಂದುಕೊಂಡಿದ್ದರು. ನಿಮ್ಮ ನಡವಳಿಕೆಯು ನಿಮ್ಮಲ್ಲಿ ಒಬ್ಬ ಜಾಣನಾದರೂ ಇಲ್ಲವೇನೋ ಎಂಬ ಸಂದೇಹವನ್ನು ಹುಟ್ಟಿಸುತ್ತದೆ ಎಂಬದಾಗಿ ಪೌಲನು ಹೇಳುತ್ತಾ ಇದ್ದಾನೆ. **7**

**6:7** ಕ್ರೈಸ್ತರು ತಮ್ಮ ಜೊತೆ ಕ್ರೈಸ್ತರ ಮೇಲೆ ಮೊಕದ್ದಮೆಗಳನ್ನು ಹಾಕುವದು ಕೇವಲ ವಿಫಲತೆ ಮಾತ್ರವಲ್ಲ, ಅದು "ಹೀನಾಯವಾದ" ವಿಫಲತೆಯಾಗಿದೆ. ಅವರು ಲೋಕದ ಆತ್ಮ, ಅತಿಯಾಸೆ, ಅಥವಾ ಕಪಟ, ಅಥವಾ ದ್ವೇಷದ ಬಯಕೆ ಅಥವಾ ತಾವು ತಮ್ಮ ಹಕ್ಕೆಂದು ಭಾವಿಸುವ ಕಾರ್ಯಗಳನ್ನು ಪಡೆಯುವ ದೃಢತೆಯುಳ್ಳವರಾಗಿರುತ್ತಾರೆ ಆದರೆ ತಮ್ಮ ಕ್ರೈಸ್ತೀಯ ಸಾಕ್ಷಿ ಮತ್ತು ಯೇಸು ಕ್ರಿಸ್ತನ ನಾಮದ ಮಹತ್ತಿನ ಬಗ್ಗೆ ಯೋಚಿಸುವದಿಲ್ಲ. ಅವರ ಪ್ರೀತಿ, ದೀನತೆ, ದೇವರಿಗೆ ತೋರಬೇಕಾದ ವಿಧೇಯತೆ ಎಲ್ಲವೂ ಹಾಳಾಗಿವೆ (ಅವರಲ್ಲಿ ಇಂಥ ಗುಣಗಳು ಇದ್ದವೋ ಇಲ್ಲವೋ ಎಂಬ ಅನುಮಾನವೂ ಎದುರಾಗುತ್ತದೆ). ಲೌಕಿಕ ನ್ಯಾಯಲಯದಲ್ಲಿ ಇತರರ ಮೇಲೆ ಹಕ್ಕಿನ ಹೆಸರಿನಲ್ಲಿ ಹೋರಾಡುವದಕ್ಕಿಂತ ತಪ್ಪುಗಳು ಹಾಗೂ ವಂಚನೆಗಳ ನಿಮಿತ್ತ ಶ್ರಮೆಪಡುವದೇ ಉತ್ತಮವಾಗಿದೆ. ಮತ್ತಾಯ 5:38-41; ಲೂಕ 9:23; 14:33 ರೊಂದಿಗೆ ಹೋಲಿಸಿ ನೋಡಿರಿ. **8**

**6:8** ಅಂಥ ಮಾತುಗಳು ಆಗಲೂ ಮತ್ತು ಈಗಲೂ ನಾವು ಯೇಸು ಕ್ರಿಸ್ತನಿಗೆ ಸೇರಿದವರು ಎಂದು ಹೇಳಿಕೊಳ್ಳುವ ಎಲ್ಲರಿಗೂ ಅನ್ವಯಿಸುತ್ತದೆ ಎಂದು ಹೇಳುತ್ತಾರೆ. **9**

**6:9** *"ನಿಮಗೆ ತಿಳಿಯದೋ?"*– ವ 2, 3,19; 3:16. ಒಬ್ಬ ವಿಶ್ವಾಸಿ ಎಂದರೆ ಹೇಗಿರಬೇಕು

ಎಂಬ ಸಾಮನ್ಯ ಜ್ಞಾನವಾದರೂ ಈ ಕ್ರೈಸ್ತರಿಗೆ ಇತ್ತೋ ಇಲ್ಲವೋ ಎಂಬದಾಗಿ ಪೌಲನು ಆಶ್ಚರ್ಯಪಡುತ್ತಾ ಇರುವಂತೆ ಇಲ್ಲಿ ತೋರುತ್ತದೆ. ಅವರು ತಮ್ಮನ್ನು ವಿಶ್ವಾಸಿಗಳೆಂದು ಕರೆದುಕೊಳ್ಳುವದರಿಂದ ನಾವು ಹೇಗೆ ಬೇಕಾದರೂ ಜೀವಿಸಬಹುದು ಎಂಬದಾಗಿ ಅವರು ಅಂದುಕೊಂಡಿದ್ದರೇ? ಪೌಲನು ಈಗ ಅಂಥ ತಪ್ಪಾದ ಅಭಿಪ್ರಾಯಗಳನ್ನು ಸರಿಪಡಿಸುತ್ತಾ ಇದ್ದಾನೆ. 3:18; 15:33; ಗಲಾ 6:7; ಎಫೆ 5:6; 1 ಯೋಹಾನ 3:7 ರೊಂದಿಗೆ ಹೋಲಿಸಿ ನೋಡಿರಿ. ಇಂಥ ಲೋಕದಲ್ಲಿ ವಂಚನೆಗೆ ಒಳಗಾಗುವದು ಬಹಳ ಸುಲಭ (ಯೆರೆ 17:9; ಇಬ್ರಿ 3:13; ಪ್ರಕ 12:9). ನಾವು ಹೇಗೆ ಜೀವಿಸಿದರೂ ಪರವಾಗಿಲ್ಲ ದೇವರ ರಾಜ್ಯದಲ್ಲಿ ಮತ್ತು ದೇವರ ಪರಲೋಕದಲ್ಲಿ ನಮಗೆ ಸ್ಥಳ ಸಿಗುತ್ತದೆ ಎಂದು ಜನರು ಯೋಚಿಸುತ್ತಾರೆ. ಅವರು ತಪ್ಪು ತಿಳುವಳಿಕೆಯುಳ್ಳವರಾಗಿದ್ದಾರೆ. ದುಷ್ಟರಿಗೆ ದೇವರ ರಾಜ್ಯದೊಳಗೆ ಪ್ರವೇಶವಿಲ್ಲ ಆದರೆ ಪಶ್ಚಾತ್ತಾಪಪಡುವವರು, ಆತ್ಮದಲ್ಲಿ ಬಡವರು, ನೀತಿವಂತಿಕೆಯನ್ನು ಪ್ರೀತಿಸುತ್ತಾ ಅದಕ್ಕಾಗಿ ಹಿಂಸೆಗಳನ್ನು ಅನುಭವಿಸಲು ಸಿದ್ಧರಾಗಿರುವವರು (ಮತ್ತಾಯ 3:2; 4:17; 5:3,10), ತಮ್ಮ ಒಳ್ಳೆಯ ಕಾರ್ಯಗಳಿಂದ ತಮ್ಮ ನಂಬಿಕೆಯನ್ನು ಸಾಬೀತುಪಡಿಸಿಕೊಳ್ಳುವವರು (ಮತ್ತಾಯ 25:34-36; ಯಾಕೋಬ 2:14-16) ದೇವರ ರಾಜ್ಯದೊಳಗೆ ಪ್ರವೇಶಿಸುತ್ತಾರೆ. ಯೇಸು ಕ್ರಿಸ್ತನ ನಾಮವನ್ನು ಆಶ್ರಯಿಸಿಕೊಳ್ಳುವ ವ್ಯಕ್ತಿಗಳೆಲ್ಲರೂ ಇದನ್ನು ತನ್ನ ಹೃದಯಕ್ಕೆ ತೆಗೆದುಕೊಳ್ಳಲಿ ಮತ್ತು ದುಷ್ಟತನದಿಂದ ದೂರ ಉಳಿಯಲಿ (2 ತಿಮೊ 2:19). **10**

**- 6:10** ಎಫೆ 5:5; ಕೊಲೊ 3:5-6; ಪ್ರಕ 21:8 **11**

**6:11** *"ನಿಮ್ಮಲ್ಲಿ ಕೆಲವರು ಅಂಥವರಾಗಿದ್ದೀರಿ"*– ನಿಜವಾದ ವಿಶ್ವಾಸಿಗಳೂ ಒಮ್ಮೆ ಉಳಿದವರೆಲ್ಲರ ಹಾಗೆ ಪಾಪಿಗಳಾಗಿದ್ದರು (ಎಫೆ 2:3; ತೀತ 3:3). ಆದರೆ ಅವರು ಹಿಂದೆ ಜೀವಿಸುತ್ತಿದ್ದ ಹಾಗೆ ಇನ್ನು ಜೀವಿಸುವವರಲ್ಲ.

*"ತೊಳೆದುಕೊಂಡಿರಿ"*– ಯೋಹಾನ 13:10; 15:3; ತೀತ 3:5.

*"ದೇವಜನರಾದಿರಿ"*– ಯೋಹಾನ 17:17-19.

*"ನೀತಿವಂತರು"*– ರೋಮಾ 3:24. ಅವರು ಯೇಸು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿದ್ದಾರೆ (2 ಕೊರಿಂಥ 5:17) ಮತ್ತು ಇದು ದೇವರಾತ್ಮನ ಕಾರ್ಯದ ಫಲವಾಗಿದೆ. **12-20**

**6:12-20** ಈಗ ಪೌಲನು ವಿಶ್ವಾಸಿಗಳಿಗೆ ಕ್ರಿಸ್ತನಲ್ಲಿ ದೊರೆಯುವ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಾ ಇದ್ದಾನೆ. ಇತರೆ ಸಭೆಗಳಲ್ಲಿ ಪತ್ರಿಕೆಗಳನ್ನು ಬರೆಯುವಾಗ ವಿಶ್ವಾಸಿಗಳು ಧರ್ಮಶಾಸ್ತ್ರಕ್ಕೆ ಒಳಗಾಗಿಲ್ಲ (ರೋಮಾ 6:14), ಯೇಸು ಕ್ರಿಸ್ತನು ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ (ಗಲಾ 5:1) ಆದ್ದರಿಂದ ಆಹಾರ ಮತ್ತು ದಿನಗಳ ಆಚರಣೆಯ ವಿಷಯದಲ್ಲಿ ಯಾವುದೇ ರೀತಿಯ ನಿರ್ಬಂಧಗಳಿಲ್ಲ (ರೋಮಾ 14:1-6,14) ಎಂದು ಹೇಳಿದ್ದಾನೆ.

ಕೊರಿಂಥದಲ್ಲಿದ್ದ ಕೆಲವು ಕ್ರೈಸ್ತರು ಪೌಲನ ಬೋಧನೆಗಳನ್ನು ತಿರುಚುತ್ತಾ ಇದ್ದರು ಮತ್ತು ಲೈಂಗಿಕ ಪಾಪಗಳೂ ಸೇರಿ, ಪ್ರತಿಯೊಬ್ಬ ವಿಶ್ವಾಸಿಯೂ ತನಗೆ ಇಷ್ಟಬಂದ ಕಾರ್ಯಗಳನ್ನು ಮಾಡಲು ಸ್ವತಂತ್ರನಾಗಿದ್ದಾನೆ ಎಂಬದಾಗಿ ಹೇಳುತ್ತಾ ಇದ್ದರು ಅನ್ನಿಸುತ್ತದೆ. ಪೌಲನು ಇಲ್ಲಿ ಅಂಥ ಸುಳ್ಳು ಬೋಧನೆಗಳಿಗೆ ವಿರುದ್ಧವಾಗಿ ಹೋರಾಡುತ್ತಾ ಇದ್ದಾನೆ. ವಿಶ್ವಾಸಿಗಳಿಗೆ ಧರ್ಮಶಾಸ್ತ್ರದಿಂದ ಬಿಡುಗಡೆಯಾಗಿರುವದು ಅವರು ಪಾಪ ಮಾಡಬಹುದು ಎಂಬ ಕಾರಣಕ್ಕಾಗಿಯಲ್ಲ ಬದಲಾಗಿ ಪಾಪ ಮಾಡಬಾರದು ಎಂಬ ಕಾರಣಕ್ಕಾಗಿಯಾಗಿದೆ ಎಂಬದನ್ನು ಆತನು ತೋರಿಸುತ್ತಾ ಇದ್ದಾನೆ. 12 ನೇ ವಚನವು ವಿಶ್ವಾಸಿಗಳು ಸ್ವತಂತ್ರರು ಆದರೆ ಎರಡು ವಿಷಯಗಳಲ್ಲಿ ಅವರಿಗೆ ನಿರ್ಬಂಧಗಳಿವೆ ಎಂಬದನ್ನು ಹೇಳುತ್ತದೆ (10:23-24,31 ಇನ್ನೂ ಎರಡು ಸೇರಿಸಿಕೊಳ್ಳಿರಿ). ಅವರು ತಮಗೆ ಲಾಭಕರವಾಗುವ ವಿಷಯಗಳನು ಮಾತ್ರವೇ ಮಾಡಬೇಕೇ ಹೊರತು ಯಾವುದೇ ಬಯಕೆ ಅಥವಾ ಹವ್ಯಾಸಕ್ಕೆ ದಾಸರಾಗಬಾರದು (ರೋಮಾ 6:16-18; ಯೋಹಾನ 8:34 ರೊಂದಿಗೆ ಹೋಲಿಸಿ ನೋಡಿರಿ). ನಮಗೆ ಏನು ಬೇಕೋ ಅದನ್ನು ತಿನ್ನುವ ಸ್ವಾತಂತ್ರ್ಯವಿದೆ ಎಂಬದಾಗಿ ಯೋಚಿಸುತ್ತಿದ್ದವರು ಲೈಂಗಿಕ ಪಾಪಗಳನ್ನು ಮಾಡುವ ಸ್ವಾತಂತ್ರ್ಯವೂ ನಮಗಿದೆ ಎಂಬದಾಗಿ ಯೋಚಿಸುವವರ ಬಗ್ಗೆ 13ನೇ ವಚನವು ಮಾತನಾಡುತ್ತದೆ. ಆದರೆ ಎರಡೂ ಕಾರ್ಯಗಳು ವಿಭಿನ್ನವಾಗಿವೆ. ಮಾನವನ ಹೊಟ್ಟೆಗೆ ಹೋಗುವಂಥ ಯಾವುದೇ ರೀತಿಯ ಆಹಾರವು ದೇವರ ಉದ್ದೇಶಗಳಿಗೆ ವಿರುದ್ಧವಲ್ಲ ಆದರೆ ಲೈಂಗಿಕ ಪಾಪಗಳು ಮಾನವನ ದೇಹದ ವಿಷಯವಾಗಿರುವ ದೇವರ ಉದ್ದೇಶಗಳಿಗೆ ವಿರುದ್ಧವಾಗಿದೆ. ಪ್ರಭಾವ ಮತ್ತು ಪರಿಶುದ್ಧತೆಯೊಂದಿಗೆ ನಿತ್ಯಜೀವವನ್ನು ಜೀವಿಸಲು ದೇವರು ವಿಶ್ವಾಸಿಗಳ ದೇಹವನ್ನು ಎಬ್ಬಿಸುತ್ತಾನೆ (ವ 14). ವಿಶ್ವಾಸಿಗಳು ಇದನ್ನು ಅರಿತುಕೊಳ್ಳಬೇಕು ಮತ್ತು ದೇವರ ಉನ್ನತವಾದ ಉದ್ದೇಶಗಳಿಗಾಗಿ ತಮ್ಮ ದೇಹಗಳನ್ನು ಉಪಯೋಗಿಸಿಕೊಳ್ಳಬೇಕು. **15**

**6:15** 12:27; ರೋಮಾ 12:4-5; ಎಫೆ 1:22-23 ನೋಡಿರಿ. ವಿಶ್ವಾಸಿಯು ಯೇಸು ಕ್ರಿಸ್ತನು ಎಂದಿಗೂ ಮಾಡದೆ ಇರುವಂಥ ಕಾರ್ಯವನ್ನು ಮಾಡುವದರ ಬಗ್ಗೆ ಎಂದಿಗೂ ಯೋಚಿಸಬಾರದು. **16**

**- 6:16** ಆದಿ 2:24. **17**

**- 6:17** ಯೋಹಾನ 17:21-23. **18**

**6:18** *"ಓಡಿ ಹೋಗಿರಿ"*– ಆದಿ 39:11-12; 1 ತಿಮೊ 6:11; 2 ತಿಮೊ 2:22. ನಾವು ಎಲ್ಲಿಗೆ ಓಡಿಹೋಗಬೇಕು? ಜ್ಞಾನೋ 18:10. ವಿಶ್ವಾಸಿಗಳು ತಮ್ಮೊಳಗೆ ಲೈಂಗಿಕ ಅನೈತಿಕತೆಯ ಯೋಚನೆ ಬರಲೂ ಅವಕಾಶ ಕೊಡಬಾರದು (ಮತ್ತಾಯ 5:28; ಎಫೆ 5:3). ಪಾಪಕ್ಕೆ ಒಳಗಾಗದಂತೆ ಎಷ್ಟು ದೂರ ಹೋಗಬಹುದು ಎಂಬದಾಗಿ ನಾವು ಪ್ರಯತ್ನಿಸಬಾರದು ಬದಲಾಗಿ ಸಾಧ್ಯವಾದಷ್ಟು ಅದರಿಂದ ದೂರವೇ ಉಳಿಯಬೇಕು. **19-20**

**6:19-20** 3:16 ನೋಡಿರಿ. ಆಲಯವು ತನಗಲ್ಲ ಬದಲಾಗಿ ದೇವರಿಗೆ ಸೇರಿದ್ದಾಗಿದೆ. ಆರಾಧನೆ ಮತ್ತು ಸ್ತುತಿಗಳಿಗಾಗಿ ಅದು ಪ್ರತ್ಯೇಕಿಸಲ್ಪಟ್ಟಿದೆ. ವಿಶ್ವಾಸಿಯಾದವನಿಗೆ ತನ್ನ ದೇಹವನ್ನು ತನ್ನ ಸ್ವಂತವಾಗಿ ಉಪಯೋಗಿಸಿಕೊಳ್ಳುವ ಅಧಿಕಾರವಿಲ್ಲ. ಯೇಸು ಕ್ರಿಸ್ತನಲ್ಲಿ ವಿಶ್ವಾಸಿಗಳಿಗಿರುವ ಸ್ವತಂತ್ರದ ಕುರಿತು ಸ್ಪಷ್ಟವಾದ ನಿರ್ಬಂಧವನ್ನು ನಾವು ಇಲ್ಲಿ ನೋಡಬಹುದು. ಅವರು ತಮ್ಮೊಳಗೆ ಜೀವಿಸುವ ದೇವರಾತ್ಮನಿಗೆ ಮೆಚ್ಚಿಕೆಯಾಗುವ ಮತ್ತು ಮಹಿಮೆಯಾಗುವ ಕಾರ್ಯಗಳನ್ನು ಮಾತ್ರವೇ ಮಾಡಬೇಕು. **20**

**6:20** “*ನಿಮ್ಮ ಸ್ವಂತ ಸ್ವತ್ತಲ್ಲ*”– ಯೋಹಾನ 6:37; 17:6.

“*ಕ್ರಯ*”– ಮತ್ತಾಯ 20:28; 1 ಪೇತ್ರ 1:18-19.

# 7 1-40

**7:1-40** ಈ ಅಧ್ಯಾಯದಲ್ಲಿ ಮದುವೆಯ ಬಗ್ಗೆ ಪೌಲನು ಮಾಡಿರುವ ಬೋಧನೆಯ ಕೆಲವು ವಿಷಯಗಳನ್ನು ನಾವು ಅರ್ಥಮಾಡಿಕೊಳ್ಳಬಹುದು. ಪೌಲನು ಸತ್ಯವೇದದ ಪೂರ್ಣ ಪ್ರೇರಣೆಯನ್ನು ನಂಬುವವನಾಗಿದ್ದನು (2 ತಿಮೊ 3:16) ಮತ್ತು ದೇವರು ಪ್ರಕಟಪಡಿಸಿರುವ ಯಾವ ಕಾರ್ಯಗಳಿಗೂ ವಿರುದ್ಧವಾಗಿ ನಡೆದುಕೊಳ್ಳುವ ಯೋಚನೆಯನ್ನು ಮಾಡದವನಾಗಿದ್ದನು. ಮಾನವನ ಹಿತಕ್ಕಾಗಿ ದೇವರು ತಾನೇ ಮದುವೆಯನ್ನು ಪ್ರತಿಷ್ಠಿಸಿದನು (ಆದಿ 2:20-24; ಮತ್ತಾಯ 19:4-6). ಮದುವೆಯ ಸಂಬಂಧವು ಸುಂದರವಾದದ್ದು ಮತ್ತು ಅದೊಂದು ಅರ್ಥಪೂರ್ಣವಾದ ಭಾಷೆಯಾಗಿದೆ ಎಂದು ಪೌಲನು ತಾನು ಒಂದು ಕಡೆ ವಿವರಿಸಿದ್ದಾನೆ (ಎಫೆ 5:25-33). ವಿಶ್ವಾಸಿಗಳು ಮದುವೆಯಾಗಬಾರದೆಂದು ಅವನು ಹೇಳಿಲ್ಲ ಮತ್ತು ಒಂದುವೇಳೆ ಯಾರಾದರೂ ಮದುವೆಯಾಗದೆ ಇದ್ದರೆ ಅವರು ವಂಚನೆಗೆ ಒಳಗಾಗುತ್ತಾರೆ ಎಂಬದನ್ನು ಬಲ್ಲವನಾಗಿದ್ದನು (1 ತಿಮೊ 4:1-3). ವಿಶ್ವಾಸಿಗಳಿಗೆ ಮದುವೆಯಾಗುವ ಅಥವಾ ಮದುವೆಯಾಗದಿರುವ ಸ್ವಾತಂತ್ರ್ಯವಿದೆ ಎಂಬದಕ್ಕೆ ಅವನು ಪ್ರಾಮುಖ್ಯತೆಯನ್ನು ನೀಡಿದ್ದಾನೆ. ವಿವಾಹವಾಗುವದಕ್ಕಿಂತ ಒಂಟಿಯಾಗಿರುವದು ಪರಿಶುದ್ಧತೆಗೆ ಸಹಾಯ ಮಾಡುತ್ತದೆ ಎಂದು ಅವನು ಕಲಿಸಿಲ್ಲ. ಅವನು ತನಗೆ ವಿಚಾರಣೆಯ ಪತ್ರವನ್ನು ಬರೆದಿದ್ದ ಕೊರಿಂಥದ ಕ್ರೈಸ್ತರಿಗೆ ಈ ಪತ್ರಿಕೆಯನ್ನು ಬರೆದಿದ್ದಾನೆ. ಅವನು ಅವರಿಗೆ “ಈಗಿನ ಕಷ್ಟಕಾಲದ” ಬಗ್ಗೆ (ವ 26) ಬರೆಯುತ್ತಾ ಇದ್ದಾನೆ ಮತ್ತು “ಸಮಯವು ಸಂಕೋಚವಾಗಿತ್ತು” (ವ 29). ಇಂಥ ಸಮಯದಲ್ಲಿ ಒಂಟಿಯಾಗಿರುವವರು, ಒಂದುವೇಳೆ ತಮ್ಮಿಂದ ಆಗುವ ಹಾಗಿದ್ದರೆ (ವ 8,9) ಹಾಗೆಯೇ ಇರುವದು ಉತ್ತಮ ಎಂಬದು ಅವನ ಅಭಿಪ್ರಾಯವಾಗಿತ್ತು. ಪೌಲನು ಇಲ್ಲಿ ಬರೆದಿರುವ ಕೆಲವು ಕಾರ್ಯಗಳು ಎಲ್ಲಾ ಕಾಲಗಳಿಗೂ ಹೊಂದಿಕೆಯಾಗುವ ಹುದುವಾದ ಸತ್ಯಗಳಾಗಿವೆ, ಉಳಿದ ವಿಷಯಗಳು ಆ ಸಮಯದಲ್ಲಿ ಕೊರಿಂಥದಲ್ಲಿ ನೆಲೆಯಾಗಿದ್ದ ಪರಿಸ್ಥಿತಿಗಳಿಗೆ ಅನುಗುಣವಾದವುಗಳಾಗಿವೆ. ಉಳಿದ ಕಡೆಗಳಲ್ಲಿ

ಪೌಲನು ಜನರು ಮದುವೆಯಾಗುವದೇ ಉತ್ತಮ ಎಂದು ಕಲಿಸಿದ್ದಾನೆ (1 ತಿಮೊ 5:14). ಅವನು ಖಂಡಿತವಾಗಿಯೂ ಇಬ್ರಿ 13:4 ಒಪ್ಪಿಕೊಂಡಿರಬಹುದು. **2**

**7:2** ಕೊರಿಂಥದಲ್ಲಿ ಆ ಸಮಯದಲ್ಲಿ ಒಂಟಿಯಾಗಿ ಜೀವಿಸುವದು ಉತ್ತಮವಾಗಿತ್ತು, ಆದರೆ ಒಂಟಿಯಾಗಿರುವ ವಿಶ್ವಾಸಿಗಳು ಲೈಂಗಿಕ ಅನೈತಿಕತೆಯಿಂದ ದೂರವಿರುವದು ಪ್ರಾಮುಖ್ಯವಾಗಿತ್ತು (6:13-18). **3-5**

**7:3-5** ಗಂಡನಾಗಲಿ ಅಥವಾ ಹೆಂಡತಿಯಾಗಲಿ ಈ ತತ್ವವನ್ನು ಅನುಸರಿಸದೆ ಹೋದರೆ ಅವರ ವೈವಾಹಿಕ ಜೀವನದಲ್ಲಿ ತೊಂದರೆಗಳು ಕಾಣಿಸಿಕೊಳ್ಳುತ್ತವೆ. **5**

**7:5** ಒಂದುವೇಳೆ ಅವರು ದೀರ್ಘಕಾಲ ದೂರವಿದ್ದರೆ ಇತರರೊಂದಿಗೆ ಪಾಪ ಮಾಡುವಂತೆ ತಮ್ಮನ್ನು ಶೋಧಿಸುವ ಅವಕಾಶವನ್ನು ಸೈತಾನನಿಗೆ ಕೊಡುತ್ತಾರೆ. **6**

**7:6** ಆತನು ಬಹುಶಃ ಇಲ್ಲಿ 2ನೇ ವಚನವನ್ನು ಸೂಚಿಸುತ್ತಾ ಇರಬಹುದು. ಅವನು ವಿಶ್ವಾಸಿಗಳಿಗೆ ಮದುವೆ ಮಾಡಿಕೊಳ್ಳಿರಿ ಎಂಬದಾಗಿಯೂ ಆಜ್ಞಾಪಿಸುತ್ತಾ ಇಲ್ಲ ಹಾಗೆಯೇ ಮದುವೆ ಮಾಡಿಕೊಳ್ಳಬೇಡಿರಿ ಎಂಬದಾಗಿಯೂ ಆಜ್ಞಾಪಿಸುತ್ತಾ ಇಲ್ಲ. **7**

**7:7** *"ನಾನಿರುವಂತೆಯೇ"*– ಒಂಟಿಯಾಗಿರುವಂತೆಯೇ (ವ 8).

*"ವರ"*– ದೇವರು ಕೆಲವರಿಗೆ ಮದುವೆ ಮಾಡಿಕೊಳ್ಳುವ ವರವನ್ನು ಕೊಡುತ್ತಾನೆ ಮತ್ತು ಕೆಲವರಿಗೆ ಒಂಟಿಯಾಗಿ ಜೀವಿಸುವ ವರವನ್ನು ಕೊಡುತ್ತಾನೆ. ಇದಲ್ಲದೆ ದೇವರ ವರಗಳೆಲ್ಲವೂ ಒಳ್ಳೆಯದಾಗಿವೆ ಎಂಬ ದೃಢತೆ ನಮಗಿರಬೇಕು. ಆತನ ಕೃಪೆಯಿಂದ ಕೆಲವರಿಗೆ ಮದುವೆ ಮಾಡಿಕೊಳ್ಳಬೇಕೆಂಬ ಬಯಕೆಯಿರುತ್ತದೆ ಮತ್ತು ಇತರೆ ವಿಶ್ವಾಸಿಯನ್ನು ಮದುವೆ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ. ಇನ್ನೂ ಕೆಲವರಿಗೆ ಮದುವೆಮಾಡಿಕೊಳ್ಳದೆ ಮತ್ತು ಲೈಂಗಿಕ ಅನೈತಿಕತೆಗೆ ಒಳಗಾಗದಂತೆ ಜೀವಿಸುವ ಬಯಕೆ ಹಾಗೂ ಸಾಮರ್ಥ್ಯ ದೇವರ ಕೃಪೆಯಿಂದ ದೊರೆಯುತ್ತದೆ. ಮತ್ತಾಯ 19:11-12. ಇದು ಆಗಲೂ ಸತ್ಯವಾಗಿದೆ ಹಾಗೆಯೇ ಈಗಲೂ ಸತ್ಯವಾಗಿದೆ. **9**

**7:9** ದಮೆಯಿಲ್ಲದವರಾಗಿರುವದು, ಲೈಂಗಿಕ ಶೋಧನೆಗಳನ್ನು ಎದುರಿಸಲಾಗದೆ ಕಷ್ಟಪಡುತ್ತಾ ಇರುವದಾದರೆ ಅದು ಅವರ ಆತ್ಮೀಕ ಜೀವಿತಕ್ಕೆ ಅಪಾಯಕಾರಿಯಾಗಿದೆ. ತನ್ನ ಜನರು ವಿವಾಹಿತರಾಗಿದ್ದರೂ ಅಥವಾ ಅವಿವಾಹಿತರಾಗಿದ್ದರೂ ಆತ್ಮೀಕರಾಗಿರಬೇಕು ಮತ್ತು ಜಯಶಾಲಿಗಳಾಗಿರಬೇಕು ಎಂಬದು ದೇವರ ಬಯಕೆಯಾಗಿದೆ. **10-11**

**7:10-11** ಇದಕ್ಕೂ ಮೊದಲು ಅವನು ಹೇಳಿರುವದು ಆಜ್ಞೆಯಲ್ಲ (ವ 6). ವಿಶ್ವಾಸಿಗಳಿಗೆ ಮದುವೆ ಮಾಡಿಕೊಳ್ಳುವ ಅಥವಾ ಮದುವೆ ಮಾಡಿಕೊಳ್ಳದೆ ಇರುವ ಸ್ವಾತಂತ್ರ್ಯವಿದೆ. ಆದರೆ ವಿವಾಹಿತರಾದ ಮೇಲೆ ವಿಚ್ಛೇದನ ಕೊಡುವ ಸ್ವಾತಂತ್ರ್ಯ ಅವರಿಗಿಲ್ಲ. ಆದ್ದರಿಂದ ಆತನು ಯೇಸು ಕ್ರಿಸ್ತನ ಬೋಧನೆಗನುಸಾರವಾದ ಆಜ್ಞೆಯನ್ನೇ ಆತನು ಕೊಟ್ಟಿದ್ದಾನೆ – ಮತ್ತಾಯ 5:32; 19:3-9; ಲೂಕ 16:18. ವಿಶ್ವಾಸಿಗಳ ನಡುವೆಯ ಮದುವೆಯು ಗಂಡ ಮತ್ತು

ಹೆಂಡತಿಯು ಜೀವದಿಂದಿರುವ ತನಕ ಅವರನ್ನು ಒಟ್ಟಾಗಿಡುವ ಸಂಬಂಧವಾಗಿದೆ. **11**

**7:11** *"ಒಂದುವೇಳೆ"*– ಗಂಡಹೆಂಡತಿಯರಲ್ಲಿ ಯಾರೋ ಒಬ್ಬರಿಗೆ ವೈವಾಹಿಕ ಜೀವನದಲ್ಲಿ ಮುಂದುವರೆಯಲು ಆಗಲ್ಲ ಅಂದುಕೊಂಡು ಬಿಟ್ಟು ಹೋಗುತ್ತಾರೆ. ಹಾಗೆ ಹೋಗುವ ವ್ಯಕ್ತಿ ತನ್ನ ಸಂಗಾತಿ ಬದುಕಿರುವ ತನಕ ಬೇರೊಬ್ಬ ವ್ಯಕ್ತಿಯನ್ನು ಮದುವೆ ಮಾಡಿಕೊಳ್ಳಬಾರದು. **12**

**7:12** *"ಕರ್ತನ ಮಾತು ಇಲ್ಲವಾದರೂ"*– ಕರ್ತನಾದ ಯೇಸು ಕ್ರಿಸ್ತನು ತನಗೆ ಕೆಳಗೆ ಹೇಳಲಾಗಿರುವ ಪರಿಸ್ಥಿತಿಗಳ ಬಗ್ಗೆ ಹೇಳಿಕೊಟ್ಟಿಲ್ಲ ಎಂಬದು ಪೌಲನ ಮಾತುಗಳ ಅರ್ಥವಲ್ಲ. ಅವನ ಮಾತಿನ ಅರ್ಥವೇನೆಂದರೆ ಯೇಸು ಕ್ರಿಸ್ತನು ಈ ಲೋಕದಲ್ಲಿ ಇದ್ದಾಗ ಅವುಗಳ ಬಗ್ಗೆ ಏನೂ ಹೇಳಿಲ್ಲ ಎಂಬದಾಗಿದೆ. ವಿಶ್ವಾಸಿಗಳು ವಿಶ್ವಾಸಿಗಳನ್ನು ಮಾತ್ರವೇ ಮದುವೆ ಮಾಡಿಕೊಳ್ಳಬೇಕೆಂದು ಪೌಲನು ಕಲಿಸಿದ್ದಾನೆ (ವ 39; 2 ಕೊರಿಂಥ 6:14-15). ಆದರೆ ಗಂಡ ಅಥವಾ ಹೆಂಡತಿ ಮದುವೆಯಾದ ನಂತರ ವಿಶ್ವಾಸಿಯಾಗಬಹುದೇ ಹೊರತು ಅವಿಶ್ವಾಸಿಯಾಗಬಾರದು. ಪೌಲನು ಇಲ್ಲಿ ಅಂಥ ಪರಿಸ್ಥಿತಿಗೆ ಅನ್ವಯವಾಗುವಂಥ ಸ್ಪಷ್ಟವಾದ ಮಾರ್ಗದರ್ಶನವನ್ನು ಕೊಟ್ಟಿದ್ದಾನೆ. **14**

**7:14** ಪೌಲನು ಇಲ್ಲಿ "ದೇವಜನರು" ಮತ್ತು "ಪವಿತ್ರತೆ" ಪದವನ್ನು ಹೇಗೆ ಉಪಯೋಗಿಸಿದ್ದಾನೆ ಎಂಬದನ್ನು ಗಮನಿಸಿರಿ. ಆತನು ಇವುಗಳನ್ನು ಇಲ್ಲಿ ಪ್ರತ್ಯೇಕಿಸಲ್ಪಟ್ಟಿರುವ ರೀತಿಯಲ್ಲಿ ಉಪಯೋಗಿಸಿದ್ದಾನೆ. ಅವಿಶ್ವಾಸಿಯು ವಿಶ್ವಾಸಿಯನ್ನು ಮದುವೆಯಾಗುವ ಕಾರಣದಿಂದ ಅವನ ಪಾಪಗಳು ತೊಳೆಯಲ್ಪಡುವವು ಮತ್ತು ಅವನು ನೈತಿಕವಾಗಿ ಶುದ್ಧನಾಗುವನು ಎಂಬದಾಗಿ ಪೌಲನು ಹೇಳಿಲ್ಲ. ಅವನ ಮಾತಿನ ಅರ್ಥವೇನೆಂದರೆ ಅಂಥ ಅವಿಶ್ವಾಸಿಯು ವಿಶ್ವಾಸಿಯನ್ನು ಮದುವೆ ಮಾಡಿಕೊಳ್ಳದೆ ಇರುವ ಅವಶ್ವಾಸಿಯಿಂದ ಪ್ರತ್ಯೇಕವಾಗಿರಬೇಕು – ಯಾಕಂದರೆ ದೇವರು ಆ ಅವಿಶ್ವಾಸಿಯೊಂದಿಗೆ ಮತ್ತು ಅವರ ವೈವಾಹಿಕ ಜೀವನದಿಂದ ಜನಿಸುವ ಮಕ್ಕಳೊಂದಿಗೆ ವಿಶೇಷ ರೀತಿ ಕಾರ್ಯಮಾಡುವನು ಎಂಬದಾಗಿ ಹೇಳುತ್ತಾ ಇದ್ದಾನೆ. ಪೌಲನು ತನ್ನ ಈ ಮಾತುಗಳ ಅರ್ಥವೇನು ಎಂದು ವಿವರಿಸುತ್ತಾ ಇಲ್ಲ, ಆದರೆ ಈ ಕಾರ್ಯದಲ್ಲಿರುವ ವ್ಯತ್ಯಾಸ ಯಥಾರ್ಥ ಹಾಗೂ ಅರ್ಥಗರ್ಭಿತವಾಗಿರುತ್ತದೆ ಎಂಬದಾಗಿ ನಾವು ಆಲೋಚಿಸಬಹುದಾಗಿದೆ. "ಪವಿತ್ರ" ಮತ್ತು "ದೇವಜನರು" ಕುರಿತಾದ ನೋಟ್ಸ್ ಗಾಗಿ ಯಾಜಕ 20:7; ಯೋಹಾನ 17:17-19 ನೋಡಿರಿ. **15**

**7:15** *"ಸಮಾಧಾನ"*– ವಿಶ್ವಾಸಿಯು ತನ್ನ ಗಂಡ ಅಥವಾ ಹೆಂಡತಿ ಕ್ರಿಸ್ತನಂಬಿಕೆಯಲ್ಲಿ ಇಲ್ಲವೆಂದರೆ ಅವರೊಂದಿಗೆ ಸಾಧ್ಯವಾದಷ್ಟೂ ಸಮಾಧಾನದಿಂದ ನಡೆದುಕೊಳ್ಳಬೇಕು ಮತ್ತು ಒಂದುವೇಳೆ ಅವಿಶ್ವಾಸಿಯು ಬಿಟ್ಟುಹೋಗಲು ತೀರ್ಮಾನಿಸಿದರೂ ಸಮಾಧಾನದಿಂದಲೇ ಇರಬೇಕು. ಅಂಥ ಪರಿಸ್ಥಿತಿಯಲ್ಲಿ ಯಾವುದೇ ಅಡಚಣೆ, ಒತ್ತಾಯ ಮಾಡುವ ಪ್ರಯತ್ನವೂ

ಇರಬಾರದು. **16**

**7:16** *"ರಕ್ಷಣೆ"*– ಕ್ರಿಸ್ತನಂಬಿಕೆಯಲ್ಲಿರುವ ಗಂಡ ಅಥವಾ ಹೆಂಡತಿ, ತನ್ನ ಪರಿಶುದ್ಧವಾದ ಜೀವಿತ, ಯೇಸು ಕ್ರಿಸ್ತನ ಒಳ್ಳೆಯ ಸಾಕ್ಷಿ, ತನ್ನ ಪ್ರಾರ್ಥನೆ ಮತ್ತು ತಾಳ್ಮೆಯ ಮೂಲಕ ಕ್ರಿಸ್ತನಂಬಿಕೆಯಲ್ಲಿ ಇರದ ತನ್ನ ಸಂಗಾತಿಯನ್ನು ಕ್ರಿಸ್ತನ ಕಡೆಗೆ ನಡೆಸಲು ಮತ್ತು ರಕ್ಷಿಸಲು ಸಾಧ್ಯ. **17-24**

**7:17-24** ಈ ವಚನಗಳಲ್ಲಿ ಪೌಲನು ಮದುವೆ ಹಾಗೂ ಜೀವನದ ಇತರೆ ಪರಿಸ್ಥಿತಿಗಳ ಬಗ್ಗೆ ಮಾತನಾಡುತ್ತಾ ಅವುಗಳನ್ನು ನಿದರ್ಶನವಾಗಿ ಉಪಯೋಗಿಸಿದ್ದಾನೆ. ದೇವರು ಪ್ರತಿಯೊಬ್ಬರನ್ನು ಒಂದೊಂದು ನಿರ್ದಿಷ್ಟವಾದ ಸ್ಥಿತಿಗಳಿಗೆ "ಕರೆದಿದ್ದಾನೆ" ಮತ್ತು ಪ್ರತಿಯೊಬ್ಬರನ್ನು ನಿರ್ದಿಷ್ಟ ಸ್ಥಳಗಳಿಗೆ "ನೇಮಿಸಿದ್ದಾನೆ." ಪ್ರತಿಯೊಬ್ಬ ವಿಶ್ವಾಸಿಗೆ ಪ್ರಾಮುಖ್ಯವಾದ ವಿಷಯವೇನೆಂದರೆ ತನ್ನ ಕುರಿತು ದೇವರ ಚಿತ್ತ ಏನು ಎಂದು ಅವನು ತಿಳಿದುಕೊಳ್ಳಬೇಕು ಮತ್ತು ಅದಕ್ಕೆ ವಿಧೇಯನಾಗಿ ನಡೆದುಕೊಳ್ಳಬೇಕು. ಒಬ್ಬನು ತನ್ನ ಜೀವಿತದ ಕಾರ್ಯಗಳ ಬಗ್ಗೆ ಗುಣಗುಟ್ಟುವಿಕೆ ಮತ್ತು ಆರೋಪಗಳನ್ನು ಮಾಡಬಾರದು ಬದಲಾಗಿ ದೇವರ ಚಿತ್ತವು ಉತ್ತಮವೆಂದು ತಿಳಿದುಕೊಳ್ಳಬೇಕು ಹಾಗೂ ದೀನತೆಯಿಂದ ಅದನ್ನು ಒಪ್ಪಿಕೊಳ್ಳಬೇಕು. **17**

**7:17** ಪೌಲನು ಕೊರಿಂಥದಲ್ಲಿರುವ ಪರಿಸ್ಥಿತಿಯ ಬಗ್ಗೆ ಮಾತ್ರವೇ ಮಾತನಾಡುತ್ತಾ ಇದ್ದಾನೆ ಎಂದು ನಾವು ಯೋಚಿಸಬಾರದು. **18**

**7:18** ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರಾದ ಯೆಹೂದ್ಯರು ತಮ್ಮ ಯೆಹೂದ್ಯತ್ವದ ಗುರುತುಗಳನ್ನು ಹಾಳುಮಾಡಲು ಪ್ರಯತ್ನಿಸಬಾರದು ಮತ್ತು ವಿಶ್ವಾಸಿಗಳಾಗಿರುವ ಅನ್ಯರು ನಮಗೆ ಸುನ್ನತಿಯಾಗಬೇಕೆಂದು ಯೋಚಿಸಬಾರದು (ಕೆಲವು ಸುಳ್ಳು ಬೋಧಕರು ಹೀಗೆ ಕಲಿಸುತ್ತಾ ಇದ್ದರು – ಅಪೊ 15:1). **19**

**7:19** ಸಭೆಯ ಈ ಯುಗದಲ್ಲಿ ದೇಹದ ಮೇಲೆ ಗುರುತು ಇರಲಿ ಅಥವಾ ಇಲ್ಲದೆ ಇರಲಿ ದೇವರಿಗೆ ಪ್ರಾಮುಖ್ಯವಲ್ಲ. ದೇವರ ಚಿತ್ತದಂತೆ ನಡೆದುಕೊಳ್ಳುವದೇ ಪ್ರಾಮುಖ್ಯವಾದ ಕಾರ್ಯವಾಗಿದೆ. ಗಲಾ 6:15; ರೋಮಾ 2:25-29 ನೋಡಿರಿ. **21-22**

**7:21-22** ರೋಮನ್ ಸಾಮ್ರಾಜ್ಯದಲ್ಲಿ ಆಗಿನ ಕಾಲದಲ್ಲಿ ದಾಸತ್ವವು ಅತ್ಯಂತ ಸಾಮಾನ್ಯವಾದ ವಿಷಯವಾಗಿತ್ತು ಮತ್ತು ಅನೇಕ ದಾಸರು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟರು. ಅವರು ತಮ್ಮ ದಾಸತ್ವದ ಪರಿಸ್ಥಿತಿಯ ವಿಷಯವಾಗಿ ಏನು ಮಾಡಬೇಕು? ಸಮಾಧಾನದಿಂದ ಅದನ್ನು ಅಂಗೀಕರಿಸಿಕೊಳ್ಳಬೇಕು, ಸಾಧ್ಯವಾದರೆ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕು (ಆದರೆ ಸ್ವಾತಂತ್ರ್ಯಕ್ಕಾಗಿ ಹಿಂಸೆಯ ಮಾರ್ಗವನ್ನು ಅನುಸರಿಸಬಾರದು) ಮತ್ತು ಯೇಸು ಕ್ರಿಸ್ತನು ತಮ್ಮನ್ನು ಪಾಪದ ಬಂಧನದಿಂದ, ಮರಣದಿಂದ ಮತ್ತು ಮೋಶೆಯ ಧರ್ಮಶಾಸ್ತ್ರದಿಂದ ಬಿಡುಗಡೆ ಮಾಡಿದ್ದಾನೆ ಎಂಬದನ್ನು ಮನದಟ್ಟು

ಮಾಡಿಕೊಳ್ಳಬೇಕು. ಯೋಹಾನ 8:36; ಗಲಾ 5:1 ರೊಂದಿಗೆ ಹೋಲಿಸಿ ನೋಡಿರಿ. ಮತ್ತೊಂದು ಕಡೆ ಶಾರೀರಿಕವಾಗಿ ಮಾನವರಿಗೆ ದಾಸರಲ್ಲದವರು ತಾವು ಯೇಸು ಕ್ರಿಸ್ತನ "ದಾಸರು" (ರೋಮಾ 6:16-22) ಎಂಬದನ್ನು ಮನವರಿಕೆ ಮಾಡಿಕೊಳ್ಳಬೇಕು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಜೀವನದ ಎಲ್ಲಾ ತರಹದ ಪರಿಸ್ಥಿತಿಗಳಲ್ಲಿರುವ ವಿಶ್ವಾಸಿಗಳು ಯೇಸು ಕ್ರಿಸ್ತನೊಂದಿಗೆ ತಮಗಿರುವ ಸಂಬಂಧವು ಅತ್ಯಂತ ಪ್ರಾಮುಖ್ಯವಾದ ವಿಷಯ ಎಂಬದನ್ನು ಮನದಟ್ಟು ಮಾಡಿಕೊಂಡು, ಆತನ ಸೇವೆ ಮಾಡುತ್ತಾ, ಆತನನ್ನು ಘನಪಡಿಸಬೇಕು. **23**

**7:23** 6:20 ನೋಡಿರಿ. **24**

**7:24** ಆತನು ಇದನ್ನು ಮೂರನೇ ಸಲ ಹೇಳುತ್ತಿರುವದು ಇದರ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ (ವ 17, 20).

*"ದೇವರ ಮುಂದೆ"*– ವಿಶ್ವಾಸಿಗಳಾಗಿ ನಾವು ಯಾವುದೇ ಪರಿಸ್ಥಿತಿಯಲ್ಲಿದ್ದರೂ, ದೇವರು ನಮ್ಮ ಹತ್ತಿರದಲ್ಲಿದ್ದಾನೆ ಎಂಬದನ್ನು ಮನವರಿಕೆ ಮಾಡಿಕೊಂಡು ಆತನ ಪ್ರಸನ್ನತೆಯಲ್ಲಿ ಜೀವಿಸಬೇಕು. **25**

**7:25** ವಚನಗಳು 10, 12. **26**

**7:26** *"ಕಷ್ಟಕಾಲ"*– ಲೂಕ 21:23; 2 ಕೊರಿಂಥ 6:4; 1 ಥೆಸ 3:7ರಲ್ಲಿಯೂ ಇದೇ ಗ್ರೀಕ್ ಪದವನ್ನು ಉಪಯೋಗಿಸಲಾಗಿದೆ. ಅವನ ಮುಖ್ಯ ವಿಷಯವೇನೆಂದರೆ, ಕೆಲವು ಸಮಯ ಮತ್ತು ಪರಿಸ್ಥಿತಿಗಳಲ್ಲಿ ವಿಶ್ವಾಸಿಗಳು ಮದುವೆಯಾಗದೆ ಇರುವದೇ ಉತ್ತಮ. ಹಾಗೆಯೇ ಎಲ್ಲಾ ಸಮಯಗಳಲ್ಲಿ ಕೆಲವರು (ಕೆಲವು) ವಿಶ್ವಾಸಿಗಳು ಮದುವೆಯಾಗದೆ ಇರುವದೇ ಉತ್ತಮ (ಯೆರೆ 16:1-2 ರೊಂದಿಗೆ ಹೋಲಿಸಿ ನೋಡಿರಿ). **29**

**7:29** *"ಸಮಯವು ಸಂಕೋಚವಾಗಿದೆ"*– (ವ 29). ಪೌಲನ ಈ ಮಾತುಗಳ ಅರ್ಥವೇನು ಎಂಬದು ಸ್ಪಷ್ಟವಾಗಿಲ್ಲ. ಶೀಘ್ರದಲ್ಲಿಯೇ ಸಭೆಗೆ ದೊಡ್ಡ ಸಮಸ್ಯೆ ಎದುರಾಗುವದನ್ನು ಅವನು ಮುಂದಾಗಿ ತಿಳಿದುಕೊಂಡಿರಬಹುದು. ಕರ್ತನಾದ ಯೇಸು ಕ್ರಿಸ್ತನ ಬರೋಣವು ಹತ್ತಿರವಾಗಿದೆ ಎಂಬ ತನ್ನ ದೃಢತೆಯನ್ನು ಅವನು ವ್ಯಕ್ತಪಡಿಸುತ್ತಾ ಇದ್ದಾನೆ ಎಂಬದು ಕೆಲವರ ಆಲೋಚನೆಯಾಗಿದೆ (ರೋಮಾ 13:11-12 ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನ ಬರೋಣದ ಸಮಯ ಅವನಿಗಾಗಲಿ ಅಥವಾ ಬೇರೆ ಅಪೊಸ್ತಲರಿಗಾಗಲಿ ಗೊತ್ತಿರಲಿಲ್ಲ). ಇದು ಏನೇಆದರೂ, ಬಹುಬೇಗನೇ ಅಮೋಘವಾದ ಬದಲಾವಣೆಯು ಆಗುವದೆಂದು ಅವನು ನಿರೀಕ್ಷಿಸಿದನು (ವ 31) ಮತ್ತು ವಿಶ್ವಾಸಿಗಳು ಭೂಮಿಯ ಮೇಲೆ ಅತ್ಯಂತ ಪ್ರಾಮುಖ್ಯವಾಗಿರುವ – ಕರ್ತನ ಮೇಲಿನ ಪ್ರೀತಿ ಹಾಗೂ ಕರ್ತನ ಸೇವೆಗೆ ಆದ್ಯತೆ ಕೊಡುವವರಾಗಿರಬೇಕೆಂದು ಬಯಸಿದನು (ವ 35). **36-38**

**7:36-38** ತಾನು ಯಾರಿಗೂ ಮದುವೆಯಾಗುವದನ್ನು ನಿಷೇಧಿಸುತ್ತಾ ಇಲ್ಲ ಎಂಬದನ್ನು

ಪೌಲನು ಸ್ಪಷ್ಟಪಡಿಸಲು ಬಯಸುತ್ತಾ ಇದ್ದಾನೆ. ಬದಲಾಗುವ ಮತ್ತು ಕಷ್ಟಕರವಾದ ಸಮಯಗಳಲ್ಲಿಯೂ ದೇವರೊಂದಿಗೆ ಸಾಗುವ ವಿಶ್ವಾಸಿಗಳಿಗೆ ತಮಗೆ ಸರಿ ಅನ್ನಿಸುವದನ್ನು ಮಾಡುವ ಸ್ವಾತಂತ್ರ್ಯವಿದೆ ಎಂಬದಾಗಿ ಹೇಳಿದನು. **39**

**7:39** ವಚನ 10; ರೋಮಾ 7:2. ಪೌಲನು ಹೇಳಿರುವದೇನೆಂದರೆ ವಿಶ್ವಾಸಿಗಳು ವಿಶ್ವಾಸಿಗಳನ್ನು ಮಾತ್ರವೇ ಮದುವೆ ಮಾಡಿಕೊಳ್ಳಬೇಕು. "ಕ್ರಿಸ್ತನಲ್ಲಿ" ಎಂಬದಾಗಿ ಆತನು ಹೇಳಿರುವ ಮಾತಿನ ಅರ್ಥ ಇದುವೇ ಆಗಿದೆ. **40**

**7:40** *"ಸುಖ"*– ಮದುವೆ ಮಾಡಿಕೊಳ್ಳದೆ ಇರುವವರು ಮದುವೆ ಮಾಡಿಕೊಂಡಿರುವವರಿಗಿಂತ ಹೆಚ್ಚು ಸುಖವಾಗಿರಲು ಸಾಧ್ಯವೇ? ಹೌದು, ಒಂಟಿಯಾಗಿರುವ ವರವನ್ನು ದೇವರು ಅವರಿಗೆ ಕೊಟ್ಟಿರುವದಾದರೆ, ಅವರು ಹೆಚ್ಚು ಸುಖವಾಗಿರಲು ಸಾಧ್ಯ (ವ 7).

*"ದೇವರ ಆತ್ಮ"*– ದೇವರ ಆತ್ಮನು ತನ್ನಲ್ಲಿ ಇದ್ದಾನೆ ಎಂಬದು ಪೌಲನಿಗೆ ಗೊತ್ತಿತ್ತು. ತಾನು ಬರೆಯುತ್ತಿರುವ ವಿಷಯಗಳನ್ನು ಬರೆಯುವಂತೆ ದೇವರ ಆತ್ಮನೇ ಅವನನ್ನು ಪ್ರೇರೇಪಿಸುತ್ತಾ ಇದ್ದಾನೆ ಎಂಬದನ್ನು ಅವನು ಬಲ್ಲವನಾಗಿದ್ದನು.

# 8 1-13

**8:1-13** ಆಗಿನ ಕಾಲದಲ್ಲಿ ಕ್ರೈಸ್ತರ ನಡುವೆ ಭಿನ್ನಾಭಿಪ್ರಾಯವಿದ್ದ ವಿಷಯಗಳಲ್ಲಿ ಇದೂ ಒಂದಾಗಿದೆ – ವಿಗ್ರಹಗಳಿಗೆ ನೈವೇದ್ಯ ಮಾಡಿರುವ ಪದಾರ್ಥಗಳನ್ನು ತಿನ್ನಬಹುದು ಎಂಬದಾಗಿ ಕೆಲವರು ಹೇಳುತ್ತಾ ಇದ್ದರೂ, ಆದರೆ ಇನ್ನೂ ಕೆಲವರು ಅದು ತಪ್ಪು ಎಂದು ಹೇಳುತ್ತಾ ಇದ್ದರು. ಈ ಪ್ರಶ್ನೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಎಲ್ಲರೂ ಬಲ್ಲವರಾಗಿದ್ದರು. ಆದರೆ ಪೌಲನು ಈ ಚರ್ಚೆಯನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋದನು. ಅವನು ಹೇಳುವದೇನೆಂದರೆ, ಕ್ರೈಸ್ತೀಯ ಪ್ರೀತಿ, ಜ್ಞಾನಕ್ಕಿಂತ ಹೆಚ್ಚು ಪ್ರಾಮುಖ್ಯವಾಗಿದೆ; ಮತ್ತು ಆ ಪ್ರೀತಿಯಿಲ್ಲದ ಜ್ಞಾನವು ಹೆಚ್ಚು ಅಪಾಯಕಾರಿಯಾದ ವಿಷಯವಾಗಿದೆ. ಆತನು ವಿಶ್ವಾಸಿಗಳಿಗೆ ಸಾಧ್ಯವಾಗುವ ಉನ್ನತವಾದ ತತ್ವವನ್ನು ತಿಳಿಸಿದ್ದಾನೆ – ನಿಮ್ಮ ಜೊತೆ ವಿಶ್ವಾಸಿಗಳನ್ನು ಪ್ರೀತಿಸಿರಿ, ಅವರನ್ನು ಆತ್ಮೀಕ ವಿಷಯಗಳಲ್ಲಿ ಬೆಳೆಸಲು ಪ್ರಯತ್ನಿಸಿರಿ ಮತ್ತು ಅವರಿಗೆ ತೊಂದರೆಯನ್ನುಂಟು ಮಾಡಬಹುದಾದ ಕಾರ್ಯಗಳಿಂದ ದೂರ ಉಳಿಯಿರಿ. **1**

**8:1** ಜ್ಞಾನವು ಒಬ್ಬನಲ್ಲಿ ಗರ್ವ ಮತ್ತು ಅಹಂಕಾರವನ್ನು ಹುಟ್ಟಿಸುತ್ತದೆ. ಪ್ರೀತಿಯಿಂದ ನಡೆದುಕೊಳ್ಳುವದು ಇತರರು ತಮ್ಮ ಕ್ರೈಸ್ತೀಯ ಜೀವಿತದಲ್ಲಿ ಬೆಳೆಯಲು ಸಹಾಯ ಮಾಡುತ್ತದೆ. **2**

**8:2** ಯಾವುದೇ ವಿಷಯದ ಬಗ್ಗೆಯಾದರೂ ಎಲ್ಲಾ ತಿಳಿದವರು ಯಾರೂ ಇಲ್ಲ. ಒಬ್ಬನು ತನಗಿರುವ ಸ್ವಲ್ಪ ಜ್ಞಾನದಲ್ಲಿ ಹೆಚ್ಚಳಪಡುವದು ಹುಚ್ಚುತನವಾಗಿದೆ. ನಮಗೆ ಬಹಳ ಕಡಿಮೆ

ಗೊತ್ತಿದೆ ಎಂಬದನ್ನು ದೀನತೆಯಿಂದ ಒಪ್ಪಿಕೊಳ್ಳುವದೇ ನಿಜವಾದ ಜ್ಞಾನಾವಗಿದೆ. **3**

**8:3** ದೇವರಿಗೆ ಎಲ್ಲಾ ರೀತಿಯ ಜ್ಞಾನಗಳಿಗಿಂತಲೂ ಪ್ರೀತಿ ಅತ್ಯಂತ ಉತ್ತಮವಾದದ್ದಾಗಿದೆ. ಪ್ರೀತಿ ತನ್ನಲ್ಲಿಯೇ ಉನ್ನತ ಮಟ್ಟದ ಜ್ಞಾನವಾಗಿದೆ (13:2; 1 ಯೋಹಾನ 4:7-8). ದೇವರಿಗೆ ತನ್ನನ್ನು ಪ್ರೀತಿಸುವವರು ಯಾರು ಎಂಬದು ಗೊತ್ತು – ಅವರು ಆತನಿಗೆ ಸೇರಿದವರಾದ್ದರಿಂದ ಆತನು ಅವರನ್ನು ಗುರುತಿಸುತ್ತಾನೆ, ಅವರನ್ನು ಸಮ್ಮತಿಸುತ್ತಾನೆ (2 ತಿಮೊ 2:19; ಗಲಾ 4:9 ರೊಂದಿಗೆ ಹೋಲಿಸಿ ನೋಡಿರಿ). **4**

**- 8:4** ಧರ್ಮೋ 6:4; ಕೀರ್ತನೆ 115:2-8; ಯೆಶಾಯ 44:6-9. **5**

**8:5** ಆತನ ಮಾತಿನ ಅರ್ಥ ವಿಗ್ರಹಾರಾಧಕರು ಭೂಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಅನೇಕ ದೇವರುಗಳು ಮತ್ತು ಕರ್ತರುಗಳು ಇದ್ದಾರೆ ಎಂದು ಯೋಚಿಸುತ್ತಾರೆ ಆದರೆ ವಿಶ್ವಾಸಿಗಳು ನಿಜವಾದ ಮತ್ತು ಸತ್ಯವಾದ ದೇವರು ಒಬ್ಬನೇ ಎಂಬದನ್ನು ಬಲ್ಲವರಾಗಿದ್ದಾರೆ. 10:20 ರಲ್ಲಿ ಕೆಲವು ಜನರು ಆರಾಧಿಸುವ ಅನೇಕ ದೇವರುಗಳು ಮತ್ತು ಕರ್ತರ ಬಗ್ಗೆ ಆತನು ಏನು ಹೇಳಿದ್ದಾನೆ ಎಂಬದನ್ನು ತಿಳಿದುಕೊಳ್ಳಿರಿ. ಹಾಗೆಯೇ ಅಪೊ 14:15 ಸಹ ನೋಡಿರಿ. **6**

**8:6** ವಚನ 4. ಕರ್ತನಾದ ಯೇಸು ಕ್ರಿಸ್ತನೊಬ್ಬನೇ ಕರ್ತನು ಎಂದು ಹೇಳುವದರ ಅರ್ಥ ತಂದೆಯಾದ ದೇವರು ಕರ್ತನಲ್ಲ ಎಂಬದಾಗಿಯಲ್ಲ. ಯೇಸು ಕ್ರಿಸ್ತನು ತಾನೇ ಆತನನ್ನು ಕರ್ತನು ಎಂದು ಕರೆದಿದ್ದಾನೆ – ಮತ್ತಾಯ 11:25. ಇದೇ ಪ್ರಕಾರ, ತಂದೆಯಾದ ದೇವರು ಒಬ್ಬನೇ ದೇವರು ಎಂದು ಹೇಳುವದರ ಅರ್ಥ ಯೇಸು ಕ್ರಿಸ್ತನು ದೇವರಲ್ಲ ಎಂಬದಾಗಿಯಲ್ಲ. ತಂದೆಯಾದ ದೇವರು ಸತ್ಯವೇದದ ಬರಹಗಾರರಿಗೆ ಆತನನ್ನು ದೇವರು ಎಂದು ಬರೆಯುವಂತೆ ಪ್ರೇರೇಪಿಸಿದನು (ಯೆಶಾಯ 9:6; ಯೋಹಾನ 1:1; ಅಪೊ 20:28; ರೋಮಾ 9:5; ಫಿಲಿಪ್ಪಿ 2:6; ಕೊಲೊ 2:9; ತೀತ 2:13; ಇಬ್ರಿ 1:3,8; 1 ಯೋಹಾನ 5:20). ಪೌಲನು ಹೇಳುವದೇನೆಂದರೆ ಆತನ ಮೂಲಕವಾಗಿಯೇ ಎಲ್ಲಾ ಕಾರ್ಯಗಳು ಅಸ್ತಿತ್ವಕ್ಕೆ ಬಂದವು – ರೋಮಾ 11:36ರಲ್ಲಿ ದೇವರ ವಿಷಯವಾಗಿಯೂ ಇದೇ ಪದಗಳನ್ನು ಉಪಯೋಗಿಸಲಾಗಿದೆ. ಯೇಸುವೇ ಕರ್ತನೆಂದು ಹೇಳುವದೆಂದರೆ, ಆತನು ದೇವರು ಎಂದು ಹೇಳುವದಾಗಿದೆ. ಲೂಕ 2:11; ಫಿಲಿಪ್ಪಿ 2:6,10,11ರಲ್ಲಿ ನೋಟ್ಸ್ ನೋಡಿರಿ. ಹಾಗಾದರೆ ಇಬ್ಬರು ದೇವರುಗಳಿದ್ದಾರೆಯೇ? ಖಂಡಿತವಾಗಿಯೂ ಇಲ್ಲ. ದೇವರು ಒಬ್ಬನೇ, ಆದರೆ ತ್ರಯೇಕತ್ವದಲ್ಲಿ ಮೂವರು ವ್ಯಕ್ತಿಗಳಿದ್ದಾರೆ. ಮತ್ತಾಯ 3:16-17ರಲ್ಲಿ ತ್ರಯೇಕತ್ವದ ನೋಟ್ಸ್ ನೋಡಿರಿ. ಪೌಲನು, ಒಬ್ಬನೇ ಸತ್ಯದೇವರನ್ನು ಎಲ್ಲಾ ಕಾರ್ಯಗಳ ಸೃಷ್ಟಿಕರ್ತನೆಂದು ವ್ಯಾಖ್ಯಾನಿಸುತ್ತಿರುವದನ್ನು ಗಮನಿಸಿರಿ (ಆದಿ 1:1; ಯೆಶಾಯ 40:25-28). ನಾವು ಆತನನ್ನೇ ಆತುಕೊಳ್ಳಬೇಕು, ಆತನನ್ನೇ ಆರಾಧಿಸಬೇಕೇ ಹೊರತು ಬೇರೆ ಯಾರನ್ನೂ ಆರಾಧಿಸಬಾರದು. **7**

**8:7** ಆತನ ಮಾತಿನ ಅರ್ಥವೇನೆಂದರೆ ಎಲ್ಲರಿಗೂ ವಿಗ್ರಹಗಳಿಂದ ಯಾವುದೇ ಪ್ರಯೋಜನವಿಲ್ಲ ಎಂಬದು ಮತ್ತು ವಿಗ್ರಹಗಳಿಗೆ ಅರ್ಪಿಸುವ ಪದಾರ್ಥಗಳು ಕೇವಲ ಆಹಾರ ಪದಾರ್ಥಗಳೇ ಆಗಿರುತ್ತವೆಯೇ ಹೊರತು ಅಶುದ್ಧವಾಗುವದಿಲ್ಲ ಎಂಬದು ಗೊತ್ತಿಲ್ಲ. ಅಂಥ ಆಹಾರವನ್ನು ತಮ್ಮ ಮನೆಯಲ್ಲಿ ತಿನ್ನುವದು ತಪ್ಪು ಮತ್ತು ಒಂದುವೇಳೆ ಅವರೇನಾದರೂ ಅದನ್ನು ತಿಂದರೆ ಅವರ ಮನಸ್ಸಾಕ್ಷಿ ಅವರನ್ನು ದೂಷಿಸುತ್ತದೆ ಎಂಬದಾಗಿ ಅವರು ಯೋಚಿಸುತ್ತಾ ಇದ್ದರು. “ಬಲಹೀನವಾಗಿರುವ” ಮನಸ್ಸು ಯಾವುದೋ ಪಾಪದ ಕಾರ್ಯ ನಡೆಯುತ್ತಿದೆ ಎಂದು ಯೋಚಿಸುತ್ತದೆ ಆದರೆ ಅದು ಹಾಗಿರುವದಿಲ್ಲ ಅಥವಾ ಯಾವುದಾದರೊಂದು ವಿಷಯ ಪಾಪವಾಗಿದೆಯೋ ಅಥವಾ ಅಲ್ಲವೋ ಎಂಬದನ್ನು ತೀರ್ಮಾನಿಸಲು ಆಗದ ಸ್ಥಿತಿಯಲ್ಲಿರುತ್ತದೆ. **8**

**8:8** ಕೊರಿಂಥದಲ್ಲಿರುವ ಕೆಲವರು ಇದನ್ನೇ ಹೇಳುವವರಾಗಿದ್ದರು. ಪೌಲನು ಅದನ್ನು ಒಪ್ಪಿಕೊಂಡನು, ಆದರೆ ಮುಂದಿನ ವಾಕ್ಯದಲ್ಲಿ ಅದಕ್ಕಿಂತಲೂ ದೊಡ್ಡ ತತ್ವವಿದೆ ಎಂದು ಹೇಳಿದ್ದಾನೆ. **9-13**

**8:9-13** 10:23-33; ರೋಮಾ 14:14-23 ರೊಂದಿಗೆ ಹೋಲಿಸಿ ನೋಡಿರಿ. ವಿಶ್ವಾಸಿಗಳಿಗೆ ತಿನ್ನುವ ಅಥವಾ ಯಾವುದನ್ನಾದರೂ ತಿನ್ನದಿರುವ ಹಾಗೂ ತಿನ್ನುವ ಸ್ವಾತಂತ್ರ್ಯವಿದೆ. ಆದರೆ ಅವರು ಈ ಸ್ವಾತಂತ್ರ್ಯದ ಬಗ್ಗೆ ಯೋಚಿಸುವದಕ್ಕಿಂತ ಯೋಚಿಸಬೇಕಾದ ಇನ್ನೂ ಅನೇಕ ವಿಷಯಗಳಿವೆ. ಜೊತೆಯಲ್ಲಿರುವ ವಿಶ್ವಾಸಿಗಳು ತಮ್ಮ ಮೆಚ್ಚಿಕೆಗನುಸಾರ ನಡೆದುಕೊಳ್ಳುವದಕ್ಕಿಂತ ಹೆಚ್ಚಾಗಿ ಇತರರ ಬಗ್ಗೆ ಯೋಚಿಸಬೇಕು. **10**

**8:10** *“ವಿಗ್ರಹಾಲಯ”*– ಪೌಲನು ನಂತರದಲ್ಲಿ ಹೇಳಿರುವದೇನೆಂದರೆ ಯಾವ ವಿಶ್ವಾಸಿಯು ಅಂಥ ಸ್ಥಳದಲ್ಲಿ ತಿನ್ನಬಾರದು (10:19-21), ಮತ್ತು ಇಲ್ಲಿಯೂ ಸಹ ಅದನ್ನು ಮಾಡುವದು ಸರಿಯಲ್ಲ ಎಂದು ಅವನು ಹೇಳುತ್ತಾ ಇಲ್ಲಾ. **11**

**8:11** ಯೇಸು ಕ್ರಿಸ್ತನು ದುರ್ಬಲರಾಗಿದ್ದ ಸಹೋದರರನ್ನು ಪ್ರೀತಿಸಿದ್ದರಿಂದಲೇ ಅವರಿಗಾಗಿಯೂ ಪ್ರಾಣ ಕೊಟ್ಟನು. ಬಲಿಷ್ಠರಾದ ವಿಶ್ವಾಸಿಗಳು ಅವರಿಗೆ ತೊಂದರೆಯಾಗುವ ರೀತಿಯಲ್ಲಿ ನಡೆದುಕೊಳ್ಳದಂತೆ ಇನ್ನೂ ಹೆಚ್ಚಾಗಿ ಅವರನ್ನು ಪ್ರೀತಿಸಬೇಕಲ್ಲವೇ?

*“ನಾಶವಾಗುತ್ತಾನೆ”*– ಅಥವಾ “ಹಾಳಾಗುತ್ತಾನೆ” – ರೋಮಾ 14:15. ಇದರ ಅರ್ಥ ಅವರು ತಮ್ಮ ಆತ್ಮೀಕ ಜೀವಿತದಲ್ಲಿ ಗಾಯಗೊಳ್ಳುತ್ತಾರೆ. 2 ಥೆಸ 1:9 ರಲ್ಲಿ ಹೇಳಲಾಗಿರುವ ಪ್ರಕಾರ ಕರ್ತನ ಪ್ರಸನ್ನತೆಯಿಂದಾಗುವ ಅಂತಿಮವಾದ ನಾಶನದ ಬಗ್ಗೆ ಅದು ಮಾತನಾಡುವದಿಲ್ಲ (ಯೋಹಾನ 6:37-40; 10:27-29; ರೋಮಾ 5:9-10; 8:28-39 ನೋಡಿರಿ). **12**

**8:12** ಒಬ್ಬ ವಿಶ್ವಾಸಿಯು ಪಾಪ ಮಾಡುವದಕ್ಕೆ ಕಾರಣನಾಗುವವನು, ಆ ವಿಶ್ವಾಸಿಗೆ ಮತ್ತು ಯೇಸು ಕ್ರಿಸ್ತನಿಗೆ ವಿರುದ್ಧವಾಗಿ ಪಾಪ ಮಾಡುವವನಾಗಿದ್ದಾನೆ (ಅಪೊ 9:4; ಕೀರ್ತನೆ

51:4 ರೊಂದಿಗೆ ಹೋಲಿಸಿ ನೋಡಿರಿ). **13**

**8:13** ಪೌಲನು ಊಟದ ವಿಷಯದಲ್ಲಿ ಮಾತ್ರವಲ್ಲ ಬದಲಾಗಿ ಎಲ್ಲಾ ವಿಷಯಗಳಲ್ಲಿಯೂ ಈ ತತ್ವವನ್ನು ಅನುಸರಿಸುತ್ತಾ ಇದ್ದನು. ನಾವು ಹಾಗೆಯೇ ಅನುಸರಿಸಬೇಕು (10:24,32,33). ಇದು ಪ್ರೀತಿಯ ತತ್ವವಾಗಿದೆ. ಯಾವ ರೀತಿ ಪ್ರೀತಿಸಬೇಕು ಎಂದು ಗೊತ್ತಿರುವವರು ಹಾಗೆ ಪ್ರೀತಿಸುವಾಗ ಇತರರ ಹಿತಕ್ಕಾಗಿ ತಮ್ಮನ್ನು ನಿರಾಕರಿಸಿಕೊಳ್ಳಲು ಸಿದ್ಧರಾಗಿರುತ್ತಾರೆ.

# 9 1-27

**9:1-27** 8ನೇ ಅಧ್ಯಾಯದಲ್ಲಿ ಪೌಲನು ಇತರೆ ವಿಶ್ವಾಸಿಗಳ ಹಿತಕ್ಕಾಗಿ ಒಬ್ಬನು ತನ್ನನ್ನು ನಿರಾಕರಿಸಿಕೊಳ್ಳುವ ತತ್ವವನ್ನು ಕಲಿಸಿದ್ದಾನೆ. ಅವನು ತಾನು ಬೋಧಿಸುವ ಹಾಗೆಯೇ ನಡೆದುಕೊಳ್ಳುತ್ತಾ ಇದ್ದನೇ ಹೊರತು ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾ ಇರಲಿಲ್ಲ. ಈ ಅಧ್ಯಾಯದಲ್ಲಿ ಆತನು ತನ್ನ ಈ ಸ್ವಾತಂತ್ರ್ಯ ಮತ್ತು ಹಕ್ಕುಗಳ ಬಗ್ಗೆ ಮಾತನಾಡಿದ್ದಾನೆ – ವ 1,4,5,12,19. ಆದರೆ ಅವನು ತನ್ನ ಸ್ವಾತಂತ್ರ್ಯ ಮತ್ತು ಹಕ್ಕನ್ನು ತನ್ನನ್ನು ಮೆಚ್ಚಿಸಿಕೊಳ್ಳಲು ಉಪಯೋಗಿಸಿಕೊಳ್ಳಲಿಲ್ಲ ಬದಲಾಗಿ ಇತರರು ಕ್ರಿಸ್ತನ ಕಡೆಗೆ ಬರಲು ಹಾಗೂ ನಂಬಿಕೆಯಲ್ಲಿ ಬೆಳೆಯಲು ಅವರಿಗೆ ಹೇಗೆ ಸಹಾಯ ಮಾಡಬಹುದು ಎಂದು ಯೋಚಿಸುತ್ತಾ ಇದ್ದನು. ಯೇಸು ಕ್ರಿಸ್ತನ ಯಾವುದೇ ಸೇವಕನಾದರೂ ದೇವರು ತನ್ನ ನಂಬಿಗಸ್ತ ಸೇವಕರಿಗೆ ವಾಗ್ದಾನ ಮಾಡಿರುವ ಬಹುಮಾನಗಳನ್ನು ಪಡೆಯಬೇಕಾದರೆ ಅದಕ್ಕಿರುವ ಏಕೈಕ ಮಾರ್ಗ ಸ್ವನಿರಾಕರಣೆಯೇ ಎಂಬದಾಗಿ ಹೇಳುವ ಮೂಲಕ ಆತನು ತನ್ನ ಮಾತುಗಳನ್ನು ಮುಗಿಸುತ್ತಾ ಇದ್ದಾನೆ. **1**

**9:1** *"ಅಪೊಸ್ತಲ"*– ಇತರೆ ವಿಶ್ವಾಸಿಗಳಿಗೆ ಇರುವ ಸ್ವಾತಂತ್ರ್ಯ ಮತ್ತು ಅಧಿಕಾರಗಳಿಗಿಂತ ಹೆಚ್ಚು ಸ್ವಾತಂತ್ರ್ಯ ಹಾಗೂ ಅಧಿಕಾರವುಳ್ಳವನಾಗಿರಬೇಕು ಎಂಬದು ಅವನ ಮಾತಿನ ಅರ್ಥವಾಗಿದೆ.

*"ಸ್ವತಂತ್ರನಲ್ಲವೇ"*– ಆತನು ತನ್ನ ಆತ್ಮೀಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಾ ಇದ್ದಾನೆ, ಆಹಾರದ ವಿಷಯದಲ್ಲಿ ಆತನು ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ನಿಯಮಗಳಿಂದ ಸ್ವತಂತ್ರನಾಗಿದ್ದನು.

*"ನಮ್ಮ ಕರ್ತನಾದ. . . ಕಂಡವನಲ್ಲವೇ"*– 15:8; ಅಪೊ 9:3-5. **2**

**9:2** ಪೌಲನು ಅಪೊಸ್ತಲನೆಂಬದನ್ನು ಕೆಲವರು ನಿರಾಕರಿಸುತ್ತಾ ಇದ್ದರು. ಆದರೆ ಕೊರಿಂಥದಲ್ಲಿದ್ದ ವಿಶ್ವಾಸಿಗಳು ಅಷ್ಟೊಂದು ಮೂರ್ಖರಾಗಿ ಇರಬಾರದಾಗಿತ್ತು. ಆತನ ಮೂಲಕವಾಗಿಯೇ ಅವರು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿದ್ದರು – 4:15. **3**

**9:3** ಅವನು ಅಪೊಸ್ತಲನಲ್ಲವೆಂದು ಹೇಳುತ್ತಿದ್ದವರಿಗೆ 1,2 ವಾಕ್ಯಗಳಲ್ಲಿ ಪೌಲನು

ಉತ್ತರವನ್ನು ಕೊಟ್ಟಿದ್ದಾನೆ. **4-14**

**9:4-14** ಈ ಭಾಗದಲ್ಲಿ, ಅಪೊಸ್ತಲನಾಗಿ ತನಗಿರುವ "ಅಧಿಕಾರದ" ಬಗ್ಗೆ ಅವನು ಮಾತನಾಡಿದ್ದಾನೆ (ಅಥವಾ, ಈ ವಿಷಯಕ್ಕೆ ಬರುವದಾದರೆ ಯೇಸು ಕ್ರಿಸ್ತನು ಇತರರನ್ನು ತನ್ನ ಕೆಲಸಕ್ಕೆ ಕಳುಹಿಸುವ ಬಗ್ಗೆ ನೋಡಬಹುದು). ಆ "ಹಕ್ಕುಗಳು" ಯಾವುವೆಂದರೆ ಅವರು ತಮಗೆ ಬೇಕಾದ ಆಹಾರವನ್ನು ತಿನ್ನಬಹುದು ಮತ್ತು ಪಾನೀಯವನ್ನು ಕುಡಿಯಬಹುದು (ವ 4), ಮದುವೆ ಮಾಡಿಕೊಳ್ಳಬಹುದು ಮತ್ತು ತಮ್ಮ ಪ್ರಯಾಣಗಳಲ್ಲಿ ಹೆಂಡತಿಯರನ್ನು ಕರೆದುಕೊಂಡು ಹೋಗಬಹುದು (ವ 5), ಹಾಗೂ ಯಾರ ಮಧ್ಯದಲ್ಲಿ ಸೇವೆ ಮಾಡುತ್ತೇವೆಯೋ ಅವರಿಂದ ಪೂರ್ಣ ಸಹಕಾರವನ್ನು ಪಡೆದುಕೊಳ್ಳಬಹುದು (ವ 6-14). **4**

**- 9:4** ರೋಮಾ 14:14. **5**

**9:5** *"ಕರ್ತನ ತಮ್ಮಂದಿರು"*– ಅಪೊ 1:14.

*"ಕೇಫ"*– ಪೇತ್ರ (ಯೋಹಾನ 1:42). ಅವನು ಮದುವೆ ಮಾಡಿಕೊಂಡಿದ್ದನು (ಮತ್ತಾಯ 8:14), ಮತ್ತು ಅವನ ಹೆಂಡತಿ ಅವನ ಪ್ರಯಾಣಗಳಲ್ಲಿ ಯಾವಾಗಲೂ ಜೊತೆಯಲ್ಲಿ ಹೋಗುತ್ತಾ ಇದ್ದಳು. **6**

**- 9:6** ಅಪೊ 18:3; 20:34. **7**

**9:7** ಸಭೆಗಳಲ್ಲಿದ್ದು ಯೇಸು ಕ್ರಿಸ್ತನ ಸೇವೆ ಮಾಡುವವರಿಗೆ ಸಭೆಗಳು ಸಹಾಯ ಮಾಡುವದು ಎಷ್ಟು ಸಹಜ ಎಂಬದನ್ನು ತೋರಿಸಲು ಆತನು ಈ ನಿದರ್ಶನಗಳನ್ನು ಉಪಯೋಗಿಸಿದ್ದಾನೆ. **8-9**

**- 9:8-9** ಧರ್ಮೋ 25:4; 1 ತಿಮೊ 5:17-18. **11**

**9:11** ನಿದರ್ಶನಗಳ ಅಳವಡಿಸುವಿಕೆಯನ್ನು ನಾವು ಇಲ್ಲಿ ನೋಡಬಹುದು.

*"ಆತ್ಮ ಸಂಬಂಧವಾದ ಬೀಜ"*– ಅಪೊಸ್ತಲರು, ಸೌವಾರ್ತಿಕರು, ಸಭಾಪಾಲಕರು ಮತ್ತು ಬೋಧಕರು ದೇವರ ವಾಕ್ಯವೆಂಬ ಬೀಜವನ್ನು ಬಿತ್ತುತ್ತಾರೆ (ಲೂಕ 8:11).

*"ಶರೀರ ಸಂಬಂಧವಾದ ಪೈರನ್ನು ಕೊಯ್ಯುತ್ತಾರೆ"*– ತಮ್ಮ ಬೆಂಬಲಕ್ಕೆ ಅವಶ್ಯವಾಗಿರುವಂಥವುಗಳು. **12**

**9:12** ಪೌಲನ ಹೃದಯದಲ್ಲಿ ಕಾರ್ಯಮಾಡಿದ ತತ್ವವನ್ನು ನೋಡಿರಿ. ಯೇಸು ಕ್ರಿಸ್ತನ ಸುವಾರ್ತೆಯ ನಿಮಿತ್ತ ಆತನು ಎಲ್ಲಾ ರೀತಿಯ ಹಕ್ಕುಗಳನ್ನು ತ್ಯಾಗಮಾಡಲು, ಇತರರಿಗೆ ನೋವಾಗುವಂಥ ಕಾರ್ಯಗಳಿಂದ ದೂರವಿರಲು, ಎಲ್ಲಾ ವಿಷಯಗಳನ್ನು ಎದುರಿಸಲು ಆತನುನು ಸಿದ್ಧನಾಗಿದ್ದನು. 2 ತಿಮೊ 2:10 ನೋಡಿರಿ. ಆತನು ನಮ್ಮೆಲ್ಲರಿಗೂ ಮಾದರಿಯಾಗಿದ್ದಾನೆ (4:16; 11:1). **13**

**- 9:13** ಯಾಜಕ 7:6,8-10,14,28-36 ನೋಡಿರಿ. **14**

**9:14** ವಚನ 11; ಮತ್ತಾಯ 10:9-10; ಲೂಕ 10:7-8. ತಮ್ಮ ಮಧ್ಯದಲ್ಲಿ ಸೇವೆ

ಮಾಡುವ ಯೇಸು ಕ್ರಿಸ್ತನ ಸೇವಕರಿಗೆ ತಮ್ಮ ಸಾಮರ್ಥ್ಯದನುಸಾರ ಉತ್ತಮವಾಗಿ ಸಹಾಯ ಮಾಡುವದು ಎಲ್ಲಾ ಸಭೆಗಳು ಅಥವಾ ಕ್ರೈಸ್ತ ಗುಂಪುಗಳು ಜವಾಬ್ದಾರಿಕೆಯಾಗಿದೆ. ಯಾವುದಾದರು ಗುಂಪು ಈ ಕಾರ್ಯವನ್ನು ಮಾಡದೆ ಹೋದರೆ ಅವರು ಕರ್ತನಿಗೆ ಅವಿಧೇಯರಾಗುವವರಾಗಿದ್ದಾರೆ. **15-18**

**9:15-18** ಪೌಲನಿಗೆ ದೇವರ ರಹಸ್ಯವಾದ ಸತ್ಯಗಳನ್ನು ತಿಳಿಸಲಾಗಿತ್ತು (4:1-2) ಮತ್ತು ಅವುಗಳನ್ನು ಪ್ರಕಟಿಸುವದಕ್ಕಾಗಿಯೇ ಯೇಸು ಕ್ರಿಸ್ತನು ಅವನನ್ನು ಕಳುಹಿಸಿದ್ದನು (ಅಪೊ 20:24; ಗಲಾ 2:7; ಎಫೆ 3:8). ಅವನಿಗೆ ಅವನು ಮಾಡುವ ಇಷ್ಟವಿದ್ದರೂ ಅಥವಾ ಇಷ್ಟವಿಲ್ಲದಿದ್ದರೂ, ಅವನು ಅದನ್ನು ಮಾಡಲೇ ಬೇಕಾಗಿತ್ತು. ಒಂದುವೇಳೆ ಅದನ್ನು ಅವನು ಮಾಡಲಿಲ್ಲವೆಂದರೆ "ಅವನ ಗತಿ ಊಹಿಸಿಕೊಳ್ಳಲು ಆಗುವದಿಲ್ಲ" (ವ 16. ಇದು ಯಾವುದಾದರು ರೀತಿಯ ನಷ್ಟ ಅಥವಾ ಶಿಕ್ಷೆಯನ್ನು ಸೂಚಿಸುತ್ತದೆ). ಆದ್ದರಿಂದ ಸುವಾರ್ತೆ ಸಾರುವ ವಿಷಯದಲ್ಲಿ ಹೆಚ್ಚಳಪಡಲು ಏನೂ ಇಲ್ಲ. ಆದರೆ ಅವನಿಗೆ ಹೆಚ್ಚಳಪಡಲು ಆಧಾರವಿತ್ತು. ಅದೇನೆಂದರೆ: ಅವನು ಯಾವುದೇ ಸಂಭಾವನೆಯಿಲ್ಲದೆ ಸುವಾರ್ತೆ ಸಾರುತ್ತಾ ಇದ್ದನು. ಈ ಮೂಲಕ ಅವನು ತನ್ನ ಉದ್ದೇಶಗಳು ಸರಿಯಾಗಿವೆ, ತಾನು ಸಂಬಳಕ್ಕೆ ದುಡಿಯುವವರ ಹಾಗೆ ಅಲ್ಲದೆ "ಸ್ವೇಚ್ಛೆಯಿಂದಲೇ" ಸುವಾರ್ತೆ ಸಾರುತ್ತಿರುವದಾಗಿ ಸಾಬೀತುಪಡಿಸಿದನು. ಅವನು ತನ್ನ ಸ್ವಂತ ಖರ್ಚಿನಲ್ಲಿ ಸೇವೆ ಮಾಡುವ ಸಿಪಾಯಿಯಂತಿದ್ದನು (ವ 7), ಕರ್ತನಾದ ಯೇಸು ಕ್ರಿಸ್ತನಂಥ ಒಳ್ಳೆಯ ಯಜಮಾನನಿಗೆ ಸಂತೋಷವಾಗಿ ಸೇವೆ ಮಾಡುತ್ತಾ ಇದ್ದನು. 18ನೇ ವಚನದಲ್ಲಿ ಅವನು ತನ್ನ ಸಂಬಳದ ಬಗ್ಗೆ ಮಾತನಾಡುತ್ತಾ ಇದ್ದಾನೆ. ಅವನ ಸಂಬಳವು ಸಂಬಳವಿಲ್ಲದೆ ಸೇವೆ ಮಾಡುವದು ಮತ್ತು ತನ್ನ ಯಥಾರ್ಥತೆ ಹಾಗೂ ಪ್ರೀತಿಯನ್ನು ಸಾಬೀತುಪಡಿಸುವದಾಗಿತ್ತು. **19**

**9:19** 8-9 ಅಧ್ಯಾಯಗಳು ಆತ್ಮೀಕ ಸ್ವಾತಂತ್ರ್ಯದ ಕ್ರೈಸ್ತೀಯ ಬಿಡುಗಡೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ವಿಷಯದ ಬಗ್ಗೆ ಮಾತನಾಡುತ್ತವೆ. ಇತರರನ್ನು ಕ್ರಿಸ್ತನ ಕಡೆಗೆ ನಡೆಸಲು ಸಹಾಯ ಮಾಡುವದಾದರೆ ತಾನು ಎಲ್ಲವನ್ನೂ ತ್ಯಜಿಸಲು ಸಿದ್ಧ ಎಂಬದಾಗಿ ಇಲ್ಲಿ ಪೌಲನು ಹೇಳುತ್ತಾ ಇದ್ದಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವನು ತನ್ನ ಸ್ವಂತ ಸ್ವಾತಂತ್ರ್ಯಕ್ಕಿಂತ ಹೆಚ್ಚಾಗಿ ಜನರನ್ನು ಪ್ರೀತಿಸುವವನಾಗಿದ್ದನು. ಇತರರಿಗೆ ಒಳ್ಳೆಯದನ್ನು ಮಾಡಬೇಕು ಎಂಬ ಅವನ ಬಯಕೆ ಹೋಲಿಸಿದರೆ ಅವನ ವೈಯಕ್ತಿಕ ಬಯಕೆಗಳು ಮತ್ತು ಇಷ್ಟವಿಲ್ಲದ ವಿಷಯಗಳು ಯಾವುದೇ ಪ್ರಾಮುಖ್ಯತೆಯಿಲ್ಲದವುಗಳಾಗಿದ್ದವು. ತನಗೆ ಇಷ್ಟವಾಗುವ ಕಾರ್ಯಗಳನ್ನು ಮಾಡುವದಕ್ಕಿಂತ ಹೆಚ್ಚಾಗಿ ಅವನು ಅವರನ್ನು ಗೆಲ್ಲಬೇಕೆಂದು ಬಯಸುತ್ತಾ ಇದ್ದನು. ಮುಂದಿನ ವಚನಗಳಲ್ಲಿ ತನ್ನನ್ನು ಎಲ್ಲರ "ಸೇವಕನನ್ನಾಗಿ" (ಅಥವಾ ಗ್ರೀಕ್ ಪದ – "ದಾಸನನ್ನಾಗಿ") ಮಾಡಿಕೊಂಡಿದ್ದೇನೆ ಎಂಬದಾಗಿ ಹೇಳಿರುವದರ ಅರ್ಥವೇನೆಂದು ವಿವರಿಸಿದ್ದಾನೆ. ಅವನು ಮೂರು ತರಹದ ಜನರ ಬಗ್ಗೆ

ಮಾತನಾಡಿದ್ದಾನೆ – ಯೆಹೂದ್ಯರು, ಅನ್ಯರು ಮತ್ತು ಮನಸ್ಸು ಹಾಗೂ ನಂಬಿಕೆಯಲ್ಲಿ ದುರ್ಬಲರಾಗಿರುವವರು. **20**

**9:20** ಅವನು ಯೆಹೂದ್ಯರು ತನ್ನ ಬೋಧನೆಯನ್ನು ಅಂಗೀಕರಿಸಿಕೊಳ್ಳುವಂತೆ ಮಾಡುವ ಕಾರ್ಯಗಳನ್ನು ಹೆಚ್ಚಾಗಿ ಮಾಡಿದನು – ಆದರೆ ಅವುಗಳು ಕ್ರೈಸ್ತೀಯ ನಂಬಿಕೆ ಮತ್ತು ಜೀವನದ ಮಾರ್ಗಗಳಿಗೆ ಎಂದಿಗೂ ವಿರುದ್ಧವಾಗಿರಲಿಲ್ಲ. ಇದರ ಉದಾಹರಣೆಗಳು ಅಪೊ 16:3; 18:18; 21:20-26 ರಲ್ಲಿ ಬರೆಯಲ್ಪಟ್ಟಿವೆ. **21**

**9:21** *"ನಿಯಮವಿಲ್ಲದವನಲ್ಲ"*– ರೋಮಾ 12:2. ಯೆಹೂದ್ಯರಲ್ಲದವರ ನಡುವೆ ಸೇವೆಮಾಡುವಾಗ ಅವನು ಯೆಹೂದ್ಯರ ನಿಯಮಗಳು ಮತ್ತು ಆಚರಣೆಗಳನ್ನು ಬದಿಗಿಟ್ಟನು. ಇದರ ಅರ್ಥ ಅವನು ದೇವರ ನಿಯಮಗಳ ನೈತಿಕ ಅವಶ್ಯಕತೆಗಳನ್ನು ಬದಿಗಿಟ್ಟನು ಎಂಬದಾಗಿ ಅಲ್ಲ (ರೋಮಾ 8:4 ನೋಡಿರಿ). ಆಗಲೂ ದೇವರಿಗೆ ವಿಧೇಯನಾಗಬೇಕು ಮತ್ತು ಯೇಸು ಕ್ರಿಸ್ತನು ಕಲಿಸಿರುವ ಆತ್ಮೀಕ ನಿಯಮಗಳನ್ನು ಪಾಲಿಸಬೇಕು ಎಂಬದನ್ನು ಅವನು ಬಲ್ಲವನಾಗಿದ್ದನು. **22**

**9:22** *"ಬಲವಿಲ್ಲದವರು"*– 8:7; ರೋಮಾ 14:1. ಅವರನ್ನು ನೋಯಿಸದಂತೆ ಅಥವಾ ದುಃಖಕ್ಕೆ ಒಳಪಡಿಸದಂತೆ ಅವನು ಎಚ್ಚರವಹಿಸಿದನು. ಅವರನ್ನು ಅಧಿಕವಾದ ಆತ್ಮೀಕ ಸಂಗತಿಗಳಿಗೆ ಗೆಲ್ಲುವ ಸಲುವಾಗಿ ಅವನು ತನ್ನ ಸ್ವಾತಂತ್ರ್ಯ ಹಾಗೂ ಹಕ್ಕುಗಳನ್ನು ಕಡೆಗಣಿಸಿದನು. ತನ್ನನ್ನು ಮೆಚ್ಚಿಸಿಕೊಳ್ಳುವದಲ್ಲ ಬದಲಾಗಿ ಎಲ್ಲಾ ಜನರ ನಡುವೆ ಇತರರ ಹಿತಕ್ಕಾಗಿ ದುಡಿಯುವುದೇ ಅವರ ಗುರಿಯಾಗಿತ್ತು. ರೋಮಾ 15:1-3 ನೋಡಿರಿ. **23**

**9:23** ಪೌಲನಿಗೆ ತನ್ನ ಆದ್ಯತೆಗಳು, ಹಸಿವು ಅಥವಾ "ಹಕ್ಕುಗಳು" ಮುಖ್ಯವಾಗಿರಲಿಲ್ಲ ಬದಲಾಗಿ ಸುವಾರ್ತೆ ಮಾತ್ರವೇ ಬಹಳ ಮುಖ್ಯವಾಗಿತ್ತು. "ಪಾಲು" ಎಂದರೆ ಸುವಾರ್ತೆಯ ಆಶೀರ್ವಾದಗಳಲ್ಲಿ ಇತರರೊಂದಿಗೆ ಪಾಲು ತೆಗೆದುಕೊಳ್ಳುವದೇ ಹೊರತು ಸುಮ್ಮನೇ ತಮ್ಮಲ್ಲಿಯೇ ಇಟ್ಟುಕೊಳ್ಳುವದಲ್ಲ. **24-27**

**9:24-27** ದೇವರು ನಂಬಿಗಸ್ತ ಸೇವೆಗೆ ಕೊಡುವ ಬಹುಮಾನಗಳನ್ನು ಗೆಲ್ಲಬೇಕೆಂಬ ಬಯಕೆ ನಮಗಿದೆಯೇ? ಅದಕ್ಕೆ ಇರುವದು ಒಂದೇ ಒಂದು ಮಾರ್ಗ, ಪೌಲನು ಆ ಮಾರ್ಗವನ್ನು ಅನುಸರಿಸಿದನು. ಅದು ಸುವಾರ್ತೆಯ ನಿಮಿತ್ತ ಸ್ವನಿರಾಕರಣೆ ಮತ್ತು ಕ್ರಮಶಿಕ್ಷಣದ ಮಾರ್ಗವಾಗಿದೆ. ಮತ್ತಾಯ 10:38; 16:24; ಲೂಕ 9:23 ನೋಡಿರಿ. **24**

**9:24** ಹೀಗಿರುವಾಗ ಯೇಸು ಕ್ರಿಸ್ತನ ಸೇವೆಯು, ಓಟದ ಸ್ಪರ್ಧೆಯಾಗಿದೆಯೇ? ಕೆಲವು ವಿಷಯಗಳಲ್ಲಿ, ಹೌದು. ಅಪೊ 20:24; 2 ತಿಮೊ 4:7; ಇಬ್ರಿ 12:1 ನೋಡಿರಿ. ಮತ್ತು ಓಡುವವರೆಲ್ಲರೂ ಬಹುಮಾನವನ್ನು ಗೆಲ್ಲುವದಿಲ್ಲ. ಪೌಲನು ಮಾತನಾಡುತ್ತಾ ಇರುವ ವಿಷಯ ರಕ್ಷಣೆಯಲ್ಲ (ಇದು ವರವಾಗಿದೆ ಮತ್ತು ಎಲ್ಲಾ ವಿಶ್ವಾಸಿಗಳು ಇದನ್ನು ಹೊಂದಿದ್ದಾರೆ, ಆದ್ದರಿಂದ ಅನೇಕರ ನಡುವೆ ಇದು ಒಂದಲ್ಲ – ಎಫೆ 2:8-9). ಬಹುಮಾನವು

ಕ್ರಿಸ್ತನ ನಿಮಿತ್ತ ಮಾಡುವ ಸೇವೆಗೆ ದೊರೆಯುವ ಸನ್ಮಾನವಾಗಿದೆ. **25**

**9:25** *"ಜಯಮಾಲಿಕೆ"*– 2 ತಿಮೊ 4:8 ರ ನೋಟ್ಸ್ ನೋಡಿರಿ. ಹೊಸ ಒಡಂಬಡಿಕೆಯು ಯೇಸು ಕ್ರಿಸ್ತನ ಸೇವಕರು ಗೆಲ್ಲಬಹುದಾದ ಅನೇಕ ಜಯಮಾಲಿಕೆಗಳ ಬಗ್ಗೆ ಮಾತನಾಡುತ್ತದೆ – 1 ಥೆಸ 2:19; 2 ತಿಮೊ 4:8; ಯಾಕೋಬ 1:12; 1 ಪೇತ್ರ 5:4. ಕ್ರೀಡಾಪಟುಗಳು ಭೂಲೋಕದಲ್ಲಿ ದೊರೆಯುವ ತಾತ್ಕಾಲಿಕವಾದ ಬಹುಮಾನಗಳಿಗಾಗಿ ಕಷ್ಟಗಳನ್ನು ಅನುಭವಿಸುತ್ತಾರೆ ಮತ್ತು ಕಠಿಣ ಪರಿಶ್ರಮ ನಡೆಸುತ್ತಾರೆ ಹಾಗೂ ಕ್ರಮಶಿಕ್ಷಣಕ್ಕೆ ಒಳಗಾಗುತ್ತಾರೆ. ಯೇಸು ಕ್ರಿಸ್ತನ ಸೇವಕರು ಜ್ಞಾನವುಳ್ಳವರು ಮತ್ತು ಅವರಂತೆ ಸಮರ್ಪಣೆಯುಳ್ಳವರು ಆಗಿರಲು ಆಗುವದಿಲ್ಲವೇ? ನಾವು ಗೆಲ್ಲಬಹುದಾದ ಬಹುಮಾನಗಳು ಶಾಶ್ವತವಾದವುಗಳಾಗಿವೆ. **26**

**9:26** ಪೌಲನು ತನ್ನ ಮನಸ್ಸಿನೊಳಗೆ ಗುರಿಯನ್ನು ಇಟ್ಟುಕೊಂಡವನಾಗಿ ಓಡಿದನು – ಫಿಲಿಪ್ಪಿ 3:13-14. ಆತನು ಹೋರಾಡುತ್ತಿರುವವನ ಹಾಗೆ ನಟಿಸಲಿಲ್ಲ. ಅವನು ನಿಜವಾಗಿಯೂ ಹೋರಾಡಿದನು ಮತ್ತು ಗೆಲ್ಲಬೇಕೆಂದು ಹೋರಾಡಿದನು – 2 ತಿಮೊ 4:7. **27**

**9:27** *"ಜಜ್ಜಿ ಸ್ವಾಧೀನಪಡಿಸಿಕೊಳ್ಳುವದು"*– ಇದು ಗ್ರೀಕ್ ಪದವಾಗಿದ್ದು ಇದರ ಅರ್ಥ "ಕಣ್ಣ ಕೆಳಗೆ ಹೊಡೆಯುವದು" ಮತ್ತು ಮೇಲಿನ ಭಾಷಾಂತರದಲ್ಲಿ ಇದನ್ನು ಅಲಂಕಾರಿಕವಾಗಿ ಉಪಯೋಗಿಸಲಾಗಿದೆ. ಇದನ್ನು "ಗುದ್ದುವಿಕೆ" ಅಥವಾ "ಜಜ್ಜುವಿಕೆ" –ಎಂಬದಾಗಿಯೂ ಭಾಷಾಂತರ ಮಾಡಲಾಗಿದೆ ಆದರೆ ಅವನು ತನ್ನ ದೇಹವನ್ನು ಶಾರೀರಿಕವಾಗಿ ಗಾಯಮಾಡಿಕೊಂಡನು ಎಂದು ನಾವು ಯೋಚಿಸಬಾರದು. ಅವನು ಶಮೆದಮೆಯ ಬಗ್ಗೆ ಮಾತನಾಡುತ್ತಾ ಇದ್ದಾನೆ. ಅವನು ತನ್ನ ದೇಹವನ್ನು ಸುಕೋಮಲದಿಂದ ನೋಡಿಕೊಳ್ಳಲಿಲ್ಲ ಬದಲಾಗಿ ಅದು ತನಗೆ ವಿಧೇಯವಾಗುವಂತೆ ಒತ್ತಾಯಪಡಿಸಿದನು. ಅವನು ತನ್ನ ದೇಹವನ್ನು ಅಪಾಯದ ಸೂಚನೆಯಾಗಿ, ಅದು ತಮ್ಮ ಹಿಡಿತಕ್ಕೆ ಬಾರದೆ ಮೇಲುಗೈ ಸಾಧಿಸುವದಾಗಿ ನೆನೆಸಿರಬಹುದು ಆದ್ದರಿಂದ ಬಲವಾದ ಹೋರಾಟದಿಂದ ಅದನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾದಂತೆ ಅನ್ನಿಸುತ್ತದೆ (ರೋಮಾ 7:24 ರೊಂದಿಗೆ ಹೋಲಿಸಿ ನೋಡಿರಿ). ಅವನು ತನ್ನ ದೇಹಕ್ಕೆ ಗುಲಾಮನಾಗಿರಲು ನಿರಾಕರಿಸಿದನು, ಆದರೆ ಕ್ರಮಶಿಕ್ಷಣ ಮತ್ತು ಸ್ವನಿರಾಕರಣೆಯ ಮೂಲಕ ತನ್ನ ದೇಹವು ತನಗೆ ಸ್ವಧೀನವಾಗಬೇಕೆಂದು ಬಯಸಿದನು. ದೇವರ ಸಮ್ಮತಿಯ ಭವಿಷ್ಯದ ನಿತ್ಯವಾದ ಬಹುಮಾನವನ್ನು ಅವನು ಬಯಸಿದನು. ಈ ಕಾರಣದಿಂದ ಅವನು ದೇಹದ ಪ್ರಸ್ತುತ ಸವಲತ್ತುಗಳು ಮತ್ತು ಆಸೆಗಳನ್ನು ಕಡೆಗಣಿಸಲು ಮುಂದಾದನು. ಪರಿಶುದ್ಧವಾಗಿ, ಆತ್ಮೀಕವಾಗಿ, ಫಲಭರಿತವಾಗಿ ಕ್ರೈಸ್ತೀಯ ಜೀವಿತವನ್ನು ಜೀವಿಸಲು ಸುಲಭವಾದ ಯಾವ ಮಾರ್ಗವೂ ಇಲ್ಲ ಎಂಬದನ್ನು ಪೌಲನು ತಿಳಿದುಕೊಂಡಿದ್ದನು. ದೇವರ ಆತ್ಮನ ಮೂಲಕ ದೇಹವನ್ನು ಸ್ವಾಧೀನಪಡಿಸಿಕೊಳ್ಳಲು ನಿಜವಾದ ಹೋರಾಟ ಮತ್ತು ದೃಢತೆಯಿಂದ ಮಾತ್ರವೇ ಸಾಧ್ಯ ಎಂಬದು ಅವನಿಗೆ

ಮನವರಿಕೆಯಾಗಿತ್ತು.

*"ನಾನೇ ಅಯೋಗ್ಯನೆನಿಸಿಕೊಂಡೇನೋ"*– (ತಪ್ಪಾದ ತಿಳುವಳಿಕೆಯನ್ನು ಕೊಡುವ) "ತಳ್ಳಲ್ಪಡುವೆನೇನೋ" ಎಂಬ ಪದಕ್ಕಿಂತ ಇದು ಹೆಚ್ಚು ನಿಖರವಾದ ಭಾಷಾಂತರವಾಗಿದೆ. ಸತ್ಯವೇದದ ಅನೇಕ ಆವೃತ್ತಿಗಳನ್ನು "ಅನರ್ಹಗೊಳಿಸಲಾಗಿದೆ." ನಾನು ನನ್ನ ರಕ್ಷಣೆಯನ್ನು ಕಳೆದುಕೊಳ್ಳುವೆನೇನೋ ಎಂದು ಭಯಪಡುತ್ತಾ ಇದ್ದೇನೆ ಎಂದು ಅವನು ಹೇಳಿಲ್ಲ ಬದಲಾಗಿ ಬಹುಮಾನಗಳನ್ನು ಕಳೆದುಕೊಳ್ಳುವೆನೇನೋ ಎಂದು ಹೇಳುತ್ತಾ ಇದ್ದಾನೆ (3:12-15; 2 ತಿಮೊ 2:5 ರೊಂದಿಗೆ ಹೋಲಿಸಿ ನೋಡಿರಿ). ಮಾನವನಲ್ಲಿರುವ ಪಾಪದ ಸ್ವಭಾವಕ್ಕೆ ದೇಹವೇ ನಿವಾಸವಾಗಿದೆ. ತನ್ನ ಬಯಕೆಗಳು ಮತ್ತು ಇಚ್ಛೆಗಳನ್ನು ತೃಪ್ತಿಪಡಿಸಿಕೊಳ್ಳುವದು ಮಾತ್ರವೇ ಅದಕ್ಕೆ ಬೇಕಾಗಿರುವದು. ಒಬ್ಬನು ತನ್ನ ದೇಹವನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿಲ್ಲವೆಂದರೆ, ಅವನ ದೇಹವೇ ಅವನನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳುತ್ತದೆ. ಇದು ಹೊಟ್ಟೆಬಾಕತನ, ಮದ್ಯಪಾನ, ಅನೈತಿಕ ಕಾರ್ಯಗಳು ಮತ್ತು ಶರೀರದ ಇತರೆ ಪಾಪಗಳಿಗೆ ನಡೆಸುತ್ತದೆ.

# 10 1

**10:1** *"ಮತ್ತು"*– 9ನೇ ಅಧ್ಯಾಯದ ಕಡೆಯ ವಚನಗಳಲ್ಲಿ ಪೌಲನು ಸ್ವನಿರಾಕರಣೆ ಮತ್ತು ಕ್ರಮಶಿಕ್ಷಣದ ಅವಶ್ಯಕತೆಯ ಬಗ್ಗೆ ಮಾತನಾಡಿದ್ದಾನೆ ಹಾಗೂ ಅದನ್ನು ಅಭ್ಯಾಸಿಸುವ ವಿಷಯದಲ್ಲಿ ತನ್ನನ್ನೇ ಮಾದರಿಯಾಗಿ ವ್ಯಕ್ತಪಡಿಸಿದ್ದಾನೆ. ಈಗ ಅವುಗಳನ್ನು ಅಭ್ಯಾಸ ಮಾಡದ ಇಸ್ರಾಯೇಲ್ಯರ ಚರಿತ್ರೆಯ (ವ 6,11) ಉದಾಹರಣೆಗಳನ್ನು ಮತ್ತು ಕೆಟ್ಟ ಬಯಕೆಗಳಿಗೆ ತಮ್ಮನ್ನು ಒಪ್ಪಿಸಿಕೊಡುವದರಿಂದ ಆಗುವ ದುಷ್ಪರಿಣಾಮಗಳನ್ನು ತಿಳಿಸಿದ್ದಾನೆ.

*"ಮೇಘ"*– ವಿಮೋ 13:21-22.

*"ಸಮುದ್ರ"*– ವಿಮೋ 14:21-22,29. ಪೌಲನು ಹೇಳುತ್ತಾ ಇರುವದೇನೆಂದರೆ ಇಸ್ರಾಯೇಲ್ ಜನರೆಲ್ಲರೂ ಐಗುಪ್ತದೇಶದಿಂದ ಹೊರಗೆ ಬಂದರು ಮತ್ತು ಕಾನಾನ್ ದೇಶದ ಕಡೆಗೆ ತಮ್ಮ ಪ್ರಯಾಣವನ್ನು ಪ್ರಾರಂಭಿಸಿದರು. **2**

**10:2** *"ದೀಕ್ಷಾಸ್ನಾನವನ್ನು ಹೊಂದಿದರು"*– ಅವರು ಸಮುದ್ರವನ್ನು ದಾಟಿ ಹೋದದ್ದು ದೀಕ್ಷಾಸ್ನಾನವನ್ನು ಹೊಂದುವದಕ್ಕೆ ಸಮಾನವಾಗಿತ್ತು. ಅವರು ಐಗುಪ್ತ ದೇಶದಲ್ಲಿ ಜೀವಿಸಿದ ಹಳೆಯ ಜೀವವನ್ನು ಸಂಪೂರ್ಣವಾಗಿ ತೊರೆಯುವದಕ್ಕೆ ಇದು ಚಿತ್ರಣವಾಗಿತ್ತು. ಅವರು "ಮೋಶೆಯ ಶಿಷ್ಯರಾಗುವದಕ್ಕಾಗಿ" –ದೀಕ್ಷಾಸ್ನಾನ ಹೊಂದಿದರು. ಇದರ ಅರ್ಥವೇನೆಂದರೆ ಅವರು ಮೋಶೆಯ ನಾಯಕತ್ವಕ್ಕೆ ಒಳಪಟ್ಟರು ಎಂಬದಾಗಿದೆ. ಕಾನಾನ್ ದೇಶದ ಕಡೆಗೆ ಪ್ರಯಾಣಿಸುತ್ತಿದ್ದ ಐಕ್ಯತೆಯ ಜನರಿಗೆ ಅವನು ಮುಖ್ಯಸ್ಥನಾಗಿದ್ದನು. ಕ್ರೈಸ್ತೀಯ

ದೀಕ್ಷಾಸ್ನಾನವು ಬಹುತೇಕ ಇದೇ ಅರ್ಥವನ್ನು ಹೊಂದಿದೆ. ಅದು ಯೇಸು ಕ್ರಿಸ್ತನ ಒಡೆತನದಲ್ಲಿ ಜೀವಿಸುವ ಹೊಸ ಜೀವವನ್ನು, ಸಭೆಯ ಶಿರಸ್ಸಾಗಿರುವ ಅವನಿಗೆ ಐಕ್ಯವಾಗಿರುವದನ್ನು ಸೂಚಿಸುತ್ತದೆ. **3**

**10:3** ಆ ಆಹಾರವು ಮನ್ನಾ. ವಿಮೋ 16:14-15 ನೋಡಿರಿ. **4**

**10:4** ವಿಮೋ 17:5-6 ನೋಡಿರಿ. ಮನ್ನಾ ಮತ್ತು ನೀರನ್ನು ದೈವೀಕ ಎಂದು ಕರೆಯಲಾಗಿದೆ ಯಾಕಂದರೆ ದೇವರಾತ್ಮನು ಅದ್ಭುತ ರೀತಿಯಲ್ಲಿ ಅವುಗಳನ್ನು ಒದಗಿಸಿದನು. ಬಂಡೆಯೊಳಗಿಂದ ಬಂದ ನೀರು ನಮಗೆ "ಜೀವಕರ ನೀರನ್ನು" ಕೊಡುವ ಯೇಸು ಕ್ರಿಸ್ತನ ಚಿತ್ರಣವಾಗಿದೆ (ಯೋಹಾನ 4:10,14; 7:38-39; 19:34). ಇಸ್ರಾಯೇಲ್ಯರ ಅರಣ್ಯ ಪ್ರಯಾಣದುದ್ದಕ್ಕೂ ಬಂಡೆಯು ಅವರ ಹಿಂದೆ ಹೊರಳುತ್ತಾ ಸಾಗಿತು ಎಂದು ಹಳೆಯ ಒಡಂಬಡಿಕೆಯಲ್ಲಿ ಎಲ್ಲಿಯೂ ಹೇಳಲಾಗಿಲ್ಲ (ಬಂಡೆಯೊಳಗಿನ ನೀರು ಮಾರ್ಗಮಾಡಿಕೊಂಡು ಅವರನ್ನು ಹಿಂಬಾಲಿಸುವದು ಅಸಾಧ್ಯ ಎಂಬದಾಗಿಯೂ ಯೋಚಿಸುವಂತಿಲ್ಲ – ಕೀರ್ತನೆ 105:41). ಆದರೆ ಯೇಸು ಕ್ರಿಸ್ತನೇ ಅವರೊಂದಿಗೆ ಹೋದನು ಮತ್ತು ಅವರಿಗೆ ಬೇಕಾದ ಎಲ್ಲವುಗಳನ್ನು ಒದಗಿಸಿದನು. ಅವರ ಜೊತೆಗಿದ್ದು ಅವರ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿದ ಬಂಡೆ ಯೇಸು ಕ್ರಿಸ್ತನೇ ಆಗಿದ್ದಾನೆ ಎಂಬದಾಗಿ ಪೌಲನು ಹೇಳಿದ್ದಾನೆ. ಹಳೆಯ ಒಡಂಬಡಿಕೆಯಲ್ಲಿ "ಬಂಡೆಯು" ಒಬ್ಬನೇ ನಿಜದೇವರಾಗಿರುವ ಯೆಹೋವನ ಸಂಕೇತವಾಗಿದೆ (ಧರ್ಮೋ 32:4 ರಲ್ಲಿ ನೋಟ್ಸ್ ನೋಡಿರಿ). ಯೇಸು ಕ್ರಿಸ್ತನೇ ಯೆಹೋವನು ಎಂಬದನ್ನು ಪೌಲನು ಈ ರೀತಿಯಾಗಿ ಹೇಳಿದ್ದಾನೆ. (ಹಾಗೆಯೇ ವ 9; ಆದಿ 16:7; ವಿಮೋ 3:2; 32:34; ಯೋಹಾನ 8:24,58; 12:41; ಇತರೆ ವಿಷಯಗಳನ್ನು ಲೂಕ 2:11ರಲ್ಲಿ ನೋಡಿರಿ). **5**

**10:5** ಅವರು ದೇವರಿಂದ ಎಲ್ಲಾ ರೀತಿಯ ಕೃಪೆಗಳನ್ನು ಅನುಭವಿಸಿದ್ದರು, ದೇವಜನರಾಗಿ ವಿಶೇಷ ಸವಲತ್ತುಗಳನ್ನು ಅನುಭವಿಸಿದರೂ, ಅವರಲ್ಲಿ ಬಹುತೇಕ ಜನರು ಕಾನಾನ್ ದೇಶವನ್ನು ತಲುಪಲಿಲ್ಲ. ಅವರು "ಬಹುಮಾನ ಪಡೆಯಲು ಯೋಗ್ಯರಾಗಿರಲಿಲ್ಲ" (9:27). ದೇವರ ಶಿಕ್ಷೆಯು ಅವರ ಮೇಲೆ ಬಂದಿತು ಮತ್ತು ಅವರು ಸಾಯುವ ತನಕ ಅರಣ್ಯದಲ್ಲಿ ಗುರಿಯಿಲ್ಲದೆ ಅಲೆದಾಡುತ್ತಾ ಇದ್ದರು. **6-10**

**10:6-10** ಅವರು ಯಾಕೆ ಸೋತುಹೋದರು ಮತ್ತು ಅರಣ್ಯದಲ್ಲಿ ಸತ್ತುಹೋದರು ಎಂಬದಕ್ಕೆ ಕಾರಣವನ್ನು ಇಲ್ಲಿ ಕೊಡಲಾಗಿದೆ. ಪೌಲನು ಅವರು ಮಾಡಿದ ಐದು ಪಾಪಗಳನ್ನು ಇಲ್ಲಿ ವಿವರಿಸಿದ್ದಾನೆ – ತಮ್ಮ ಹೃದಯಗಳನ್ನು ಕೆಟ್ಟ ಕಾರ್ಯಗಳ ಮೇಲೆ ನೆಲೆಗೊಳಿಸಿದರು, ವಿಗ್ರಹಾರಾಧನೆ ಮಾಡಿದರು, ಅನೈತಿಕ ಕಾರ್ಯಗಳನ್ನು ಮಾಡಿದರು, ದೇವರನ್ನು ಪರೀಕ್ಷಿಸಿದರು ಮತ್ತು ಗುಣಗುಟ್ಟಿದರು. ಇವೆಲ್ಲವು ಸಾಮಾನ್ಯವಾದ ಪಾಪಗಳ ಉದಾಹರಣೆಗಳಾಗಿದ್ದು ಕ್ರೈಸ್ತರೆಲ್ಲರೂ ಇವುಗಳಿಂದ ದೂರವಿರಬೇಕು. ಒಂದುವೇಳೆ ನಾವು

ಇವುಗಳಿಂದ ದೂರವಿರದೆ ಹೋದರೆ, ನಮ್ಮ ಅಂತ್ಯವು ಅವರಿಗಿಂತ ಉತ್ತಮವಾಗಿರುವದು ಎಂಬದಾಗಿ ನಿರೀಕ್ಷಿಸಲು ನಮಗೆ ಏನಾದರೂ ಹಕ್ಕು ಇದೆಯೇ? **6**

**10:6** ಕರ್ತನ ಮೇಲೆ ಮಾತ್ರವೇ ಮನಸ್ಸಿಡದೆ ಕೆಟ್ಟ ಕಾರ್ಯಗಳ ಮೇಲೆ ಮನಸ್ಸಿಡುವದೇ ಎಲ್ಲಾ ರೀತಿಯ ಪಾಪಗಳಿಗೆ ಮೂಲ ಕಾರಣವಾಗಿದೆ. ಪೌಲನು ಕೆಟ್ಟ ಬಯಕೆಗಳನ್ನೆಲ್ಲಾ ಸಾಯಿಸಿರಿ ಎಂಬದಾಗಿ ಹೇಳಿದ್ದಾನೆ (ಕೊಲೊ 3:5). ಒಂದುವೇಳೆ ನಮ್ಮ ಹೃದಯಗಳಲ್ಲಿ ಉಳಿಯಲು ನಾವು ಅವುಗಳಿಗೆ ಅನುಮತಿಸುವದಾದರೆ, ಅಂತಿಮವಾಗಿ ಅವುಗಳೇ ನಮ್ಮನ್ನು ವಿಷಭರಿತ ಹಾವುಗಳಾಗಿ ಕಡಿಯುತ್ತವೆ. **7**

**10:7** ವಿಮೋ 32:6. ಇದಾದ ನಂತರ ಇಸ್ರಾಯೇಲ್ಯರು ಮತ್ತೆಮತ್ತೆ ವಿಗ್ರಹಾರಾಧನೆಗೆ ಒಳಗಾದರು. ದೇವರು ತನ್ನ ವಾಕ್ಯಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ವಿಗ್ರಹಾರಾಧನೆಯನ್ನು ಖಂಡಿಸಿದ್ದಾನೆ (ವ 14; ವಿಮೋ 20:3-4). **8**

**10:8** ಸಂಖ್ಯಾ 25:1-9. ಅರಣ್ಯಕಾಂಡ ಪುಸ್ತಕ ಹೇಳುವದೇನೆಂದರೆ ದೇವರು ಬರಮಾಡಿದ ಅನಾರೋಗ್ಯದ ನಿಮಿತ್ತ 24,000 ಜನ ಸತ್ತು ಹೋದರು. ಒಂದೇ ದಿನದಲ್ಲಿ 23,000 ಜನ ಸತ್ತರು ಎಂದು ಪೌಲನು ಹೇಳಿದ್ದಾನೆ. ಉಳಿದ 1000 ಜನ ನಂತರದಲ್ಲಿ ಸತ್ತಿರಬಹುದು. ದೇವರು ಜಾರತ್ವವನ್ನು ದ್ವೇಷಿಸುತ್ತಾನೆ ಮತ್ತು ಅತ್ಯಂತ ಸ್ಪಷ್ಟವಾದ ರೀತಿಯಲ್ಲಿ ಅದನ್ನು ಖಂಡಿಸಿದ್ದಾನೆ (ವಿಮೋ 20:14). **9**

**10:9** ಸಂಖ್ಯಾ 21:4-9. ಇದು ಮತ್ತೊಂದು ಗಂಭೀರವಾದ ಪಾಪವಾಗಿದ್ದು ಕ್ರೈಸ್ತರ ನಡುವೆ ಸಹಜವಾಗಿ ಕಾಣಬಹುದಾಗಿದೆ. **10**

**10:10** ಸಂಖ್ಯಾ 14:1-4,37; 16:41-49. ಸಂಹಾರಕ ದೂತನು ಅವರ ಮೇಲೆ ವ್ಯಾಧಿಯನ್ನು ಬರಮಾಡಿದ್ದರಿಂದ ಅವರು ಸತ್ತು ಹೋದರು. ಒಬ್ಬನು ಮತ್ತೊಬ್ಬನ ಮೇಲೆ ಗುಣಗುಟ್ಟುವದು ಕ್ರೈಸ್ತರ ಜೀವಿತದಲ್ಲಿರುವ ಸಾಮಾನ್ಯವಾದ ಪಾಪವಾಗಿದೆ. ದೇವರು ಇದನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಾನೆ. **11**

**10:11** *"ನಿದರ್ಶನಗಳು"*– ದೇವರು ಆಗ ತನ್ನ ಜನರ ನಡುವೆಯಿದ್ದ ಯಾವ ಕಾರ್ಯವನ್ನು ದ್ವೇಷಿಸುತ್ತಾ ಇದ್ದನೋ ಅದನ್ನು ಈಗಲೂ ದ್ವೇಷಿಸುತ್ತಾನೆ ಎಂದು ನಾವು ತಿಳಿಯಬೇಕು ಮತ್ತು ಹಗಲು ಕಳೆದ ನಂತರ ರಾತ್ರಿ ಬರುವ ಹಾಗೆಯೇ ಪಾಪ ಮಾಡಿದ ನಂತರ ಶಿಕ್ಷೆ ಖಂಡಿತವಾಗಿಯೂ ಆಗುತ್ತದೆ.

*"ಯುಗಾಂತ್ಯ"*– ಇಬ್ರಿ 9:26. ಯೇಸು ಕ್ರಿಸ್ತನ ಮೊದಲನೆಯ ಆಗಮನ ಹಿಂದಿನ ಎಲ್ಲಾ ಯುಗಗಳನ್ನು ಅಂತ್ಯಗೊಳಿಸಿತು ಮತ್ತು ಹೊಸ ಯುಗವನ್ನು ಪ್ರಾರಂಭಿಸಿತು. ಹಿಂದಿನ ಯುಗಗಳಲ್ಲಿ ದೇವರು ಕಲಿಸಿರುವ ಪಾಠಗಳನ್ನು ನಾವು ಕಲಿತುಕೊಳ್ಳಬೇಕು. **12**

**10:12** ಬೇರೆ ಮಾತುಗಳಲ್ಲಿ ಹೇಳುವದಾದರೆ, ಅತಿಯಾದ ಆತ್ಮವಿಶ್ವಾಸವು ಅಪಾಯಕಾರಿಯಾಗಿದೆ. ನಮಗಿರುವ ಸೌಕರ್ಯಗಳು ಉನ್ನತವಾಗಿರಬಹುದು ಮತ್ತು ನಮ್ಮ

ಪರಿಸ್ಥಿತಿಗಳು ನಮಗೆ ಅನುಕೂಲಕರವಾಗಿರಬಹುದು, ನಮಗೆ ಬಹಳ ವಿಷಯಗಳು ಗೊತ್ತಿರಬಹುದು ಮತ್ತು ವಿಪರೀತ ಅನುಭವವಿರಬಹುದು, ಆದರೂ ಘೋರವಾದ ಪಾಪದಲ್ಲಿ ಬೀಳುವ ಸಾಧ್ಯತೆಯನ್ನು ತಳ್ಳಿಹಾಕಲು ಆಗುವದಿಲ್ಲ. ನಾವು ಯಾವಾಗಲೂ ನಮ್ಮ ಬಲಹೀನತೆಗಳನ್ನು ತಿಳಿದುಕೊಳ್ಳಬೇಕು ಮತ್ತು ಕರ್ತನಲ್ಲಿ ಬಲಗೊಳ್ಳಬೇಕು. ಮತ್ತು 9:27 ರಲ್ಲಿ ಹೇಳಲಾಗಿರುವ ಪೌಲನ ಮಾದರಿಯನ್ನು ಅನುಸರಿಸಬೇಕು. **13**

**10:13** ಶೋಧನೆಗಳು ಇತರರಿಗೆ ಎದುರಾಗುವ ಹಾಗೆಯೇ ವಿಶ್ವಾಸಿಗಳಿಗೂ ಎದುರಾಗುತ್ತವೆ. ಆದರೆ ಇತರರಿಗೆ ಇಲ್ಲದಂಥ ವಾಗ್ದನ ವಿಶ್ವಾಸಿಗಳಿಗೆ ಕೊಡಲಾಗಿದೆ, ಅದು ಮಹದಾದ ವಾಗ್ದಾನವಾಗಿದೆ. ವಿಶ್ವಾಸಿಯಿಂದ ಸಹಿಸಿಕೊಳ್ಳಲು ಆಗದಂಥ ಬಲಿಷ್ಠವಾದ, ಆಕರ್ಷಕವಾದ ಶೋಧನೆಯನ್ನು ದೇವರು ಎಂದಿಗೂ ಬರಗೊಡಿಸುವದಿಲ್ಲ. ಅದರಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಆತನು ಯಾವಾಗಲೂ ಸಿದ್ಧಮಾಡಿರುತ್ತಾನೆ. ಆತನು ಸಂಪೂರ್ಣವಾಗಿ ನಂಬಿಗಸ್ತನಾಗಿದ್ದಾನೆ. ಖಂಡಿತವಾಗಿಯೂ, ನಾವು ಆ ಮಾರ್ಗವನ್ನು ಬಯಸುತ್ತೇವೆ ಮತ್ತು ಅದನ್ನು ಎದುರುನೋಡುತ್ತೇವೆ. ನಮ್ಮಲ್ಲಿ ಬಯಕೆಯಿಲ್ಲವೆಂದರೆ ಅದನ್ನು ನೋಡಲು ತಿಳಿಯಲು ಆಗುವದಿಲ್ಲ. ನಮಗೆದುರಾಗುವ ಶೋಧನೆ, ನಮಗೇ ಪ್ರಿಯವಾಗಿದ್ದರೆ, ಅದಕ್ಕೆ ಒಳಗಾಗುವ ಅಪಾಯ ನಮಗೆದುರಾಗುತ್ತದೆ. ಒಂದುವೇಳೆ ನಾವೇನಾದರೂ ಪಾಪಕ್ಕೆ ಒಳಗಾದರೆ, ದೇವರೇ ನಮ್ಮಿಂದ ಎದುರಿಸಲು ಆಗದ ಶೋಧನೆಯನ್ನು ನಮ್ಮ ಮೇಲೆ ಬರಮಾಡಿದ್ದಾನೆ ಎಂದು ನಾವು ಆತನ ಮೇಲೆ ಆರೋಪ ಮಾಡಬಾರದು. ಹಾಗೆಯೇ ಮತ್ತಾಯ 6:13 ನೋಡಿರಿ. **14-22**

**10:14-22** ಪೌಲನು ಕರ್ತನ ಭೋಜನ ಮತ್ತು ವಿಗ್ರಹಗಳ ಮುಂದೆ ಮಾಡುವ ಆರಾಧನೆಯ ಬಗ್ಗೆ ಮಾತನಾಡಿದ್ದಾನೆ. ಮೊದಲನೆಯದರಲ್ಲಿ ಭಾಗಿಯಾಗುವವರು ಎರಡನೆಯದರಿಂದ ಸಂಪೂರ್ಣವಾಗಿ ದೂರವಿರಬೇಕು. ವಿಗ್ರಹದ ಮುಂದೆ ನಡೆಯುವ ಹಬ್ಬದಲ್ಲಿ ಅಥವಾ ವಿಗ್ರಹವಿರುವ ದೇವಾಲಯದೊಳಗೆ ಭಾಗಿಯಾಗುವದು, ವಿಗ್ರಹಾರಾಧನೆಗೆ ಸಮಾನವಾಗಿದೆ; ಅದು ದೆವ್ವಗಳೊಂದಿಗೆ ಬೆರೆಯುವದಾಗಿದೆ. **14**

**10:14** ವಚನ 7; 1 ಯೋಹಾನ 5:21. ಕೆಲವು ವಿಷಯಗಳಿಂದ ವಿಶ್ವಾಸಿಗಳು ಓಡಬೇಕು ಮತ್ತು ಸಾಧ್ಯವಾದಷ್ಟು ದೂರವಿರಬೇಕು. 6:18 ರೊಂದಿಗೆ ಹೋಲಿಸಿ ನೋಡಿರಿ. **16**

**10:16** ನಾವು ಮತ್ತಾಯ 26:26-28ರ ಬೆಳಕಿನಲ್ಲಿ ಈ ವಾಕ್ಯವನ್ನು ವ್ಯಾಖ್ಯಾನಿಸಬೇಕು. ಹಾಗೆಯೇ ಯೋಹಾನ 6:53-58,63ರೊಂದಿಗೆ ಹೋಲಿಸಿ ನೋಡಿರಿ. “ಕರ್ತನ ಭೋಜನ” ಎಂದರೆ ನಿಜವಾಗಿಯೂ ಯೇಸು ಕ್ರಿಸ್ತನ ದೇಹವನ್ನು ತಿನ್ನುವದು ಮತ್ತು ರಕ್ತವನ್ನು ಕುಡಿಯುವದು ಎಂದಲ್ಲ. ಬದಲಾಗಿ ಆತ್ಮೀಕವಾಗಿ ಪಾಲುತೆಗೆದುಕೊಳ್ಳುವದು ಮತ್ತು ಭಾಗವಹಿಸುವದಾಗಿದೆ. ಆತನು ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತೆಗೆದುಕೊಳ್ಳುತ್ತೇವೆ, ಆದರೆ ಕ್ರಿಸ್ತನೊಂದಿಗೆ ಆತ್ಮನಲ್ಲಿ ಪಾಲು ತೆಗೆದುಕೊಳ್ಳುತ್ತೇವೆ. ಕರ್ತನ ಭೋಜನದ ರೊಟ್ಟಿ ಮತ್ತು

ದ್ರಾಕ್ಷಾರಸವು ವಿಶ್ವಾಸಿಗಳಿಗೆ ಕರ್ತನೊಂದಿಗೆ ಇರುವ ಸಂಬಂಧಕ್ಕೆ ಸಂಕೇತವಾಗಿದೆ (ವ. 18 ರೊಂದಿಗೆ ಹೋಲಿಸಿ ನೋಡಿರಿ). ಅವರು ನಂಬಿಕೆಯಿಂದ ಇದರಲ್ಲಿ ಪಾಲುತೆಗೆದುಕೊಳ್ಳುತ್ತಾರೆ ಮತ್ತು ತಮಗಾಗಿ ಆತನು ಪ್ರಾಣಕೊಟ್ಟದ್ದನ್ನು ನೆನಪು ಮಾಡಿಕೊಳ್ಳುತ್ತಾರೆ. ಕರ್ತನ ಭೋಜನವು ನಮಗಾಗಿ ಪ್ರಾಣ ಕೊಟ್ಟ ಯೇಸು ಕ್ರಿಸ್ತನೊಂದಿಗೆ ಅನ್ಯೋನ್ಯತೆಯ ಕೂಟವಾಗಿದೆ, ಆತನಿಗೆ ಕೃತಜ್ಞೆಯನ್ನು ಅರ್ಪಿಸುವ ಆರಾಧನೆಯಾಗಿದೆ ಯಾಕಂದರೆ ಆತನು ನಮ್ಮನ್ನು ವಿಮೋಚಿಸಿದ್ದಾನೆ. **17**

**10:17** ಸಹಜವಾಗಿ ಕರ್ತನ ಭೋಜನದ ಆಚರಣೆಯ ಸಮಯದಲ್ಲಿ ಒಂದು ರೊಟ್ಟಿಯನ್ನು ಉಪಯೋಗಿಸಲಾಗುತ್ತದೆ. ವಿಶ್ವಾಸಿಗಳು ರೊಟ್ಟಿಯಲ್ಲಿ ಪಾಲುತೆಗೆದುಕೊಳ್ಳುವಾಗ ತಾವು ಒಂದೇ ದೇಹವಾಗಿ ಐಕ್ಯವಾಗಿದ್ದೇವೆಂಬದನ್ನು ತೋರಿಸುತ್ತಾರೆ (12:12-13). **18**

**10:18** ಯಾಜಕ 7:15; 8:31; ಧರ್ಮೋ 12:18. ಯಜ್ಞಮಾಡಿದ್ದನ್ನು ತಿನ್ನುವದು ಎಂದರೆ "ಯಜ್ಞವೇದಿಯೊಡನೆ ಭಾಗಿಯಾಗುವದಾಗಿದೆ." ಯೇಸು ಕ್ರಿಸ್ತನ ದೇಹ ಮತ್ತು ರಕ್ತದಲ್ಲಿ ಪಾಲುತೆಗೆದುಕೊಳ್ಳುವದು ಎಂದರೆ ಏನು ಎಂಬದನ್ನು ತಿಳಿಯಲು ಈ ಮಾತುಗಳು ಸಹಾಯ ಮಾಡುತ್ತವೆ (ವ 16). ಯಜ್ಞವೇದಿಯೊಡನೆ ಭಾಗಿಯಾಗುವದು ಎಂದರೆ ಯಜ್ಞವೇದಿಯ ಮೇಲೆ ಕೂತು ತಿನ್ನುವದು ಎಂಬದಲ್ಲ. ಬದಲಾಗಿ ಯಜವೇದಿ ಮತ್ತು ಯಜ್ಞದೊಂದಿಗೆ ಆಳವಾದ ಸಂಬಂಧವಿದೆ ಎಂಬದನ್ನು ಇದು ಸೂಚಿಸುತ್ತದೆ. ಅದರಲ್ಲಿ ಭಾಗಿಯಾಗುವ ಎಲ್ಲರೊಂದಿಗೆ ಮತ್ತು ಯಾರಿಗಾಗಿ ಯಜ್ಞವೇದಿ ಇಡಲಾಗಿದೆಯೋ ಅವರೊಂದಿಗೆ ಅನ್ಯೋನ್ಯತೆಯಿರುವದನ್ನು ಸೂಚಿಸುತ್ತದೆ. **19-21**

**10:19-21** ಪೌಲನು 16-18 ವಚನಗಳಲ್ಲಿ ಕೊಟ್ಟಿರುವ ಎರಡು ನಿದರ್ಶನಗಳ ಮೂಲಕ ಈ ಅಂಶವನ್ನು ತಿಳಿಸಲು ಬಯಸಿದನು. ಯೇಸು ಕ್ರಿಸ್ತನಲ್ಲಿ ಭಾಗಿಯಾಗುವದು ಅದರಲ್ಲಿ ಭಾಗಿಯಾಗುವವರೆಲ್ಲರೊಂದಿಗೆ ಇರುವ ಅನ್ಯೋನ್ಯತೆಯನ್ನು ಸೂಚಿಸುತ್ತದೆ ಮತ್ತು ಯೇಸು ಕ್ರಿಸ್ತನ ಯಜ್ಞದಿಂದ ಉಂಟಾದ ಕಾರ್ಯಗಳನ್ನೆಲ್ಲಾ ಅಂಗೀಕರಿಸಿಕೊಳ್ಳುವದನ್ನು ವ್ಯಕ್ತಪಡಿಸುತ್ತದೆ. ಇದೇ ಪ್ರಕಾರ ವಿಗ್ರಹದ ಮುಂದೆ ಮಾಡಿದ ನೈವೇದ್ಯದಲ್ಲಿ ಅಥವಾ ವಿಗ್ರಹದ ದೇವಾಲಯದಲ್ಲಿ ಭಾಗಿಯಾಗುವದು ತಪ್ಪಾದ ಆರಾಧನೆಗೆ ಒಳಗಾದಂತೆಯೇ ಆಗುತ್ತದೆ. ಅದು ದೆವ್ವಗಳೊಂದಿಗೆ ಭಾಗಿಯಾಗುವ ಕಾರ್ಯವಾಗಿದೆ. **19**

**10:19** 8:4 ನೋಡಿರಿ. **20**

**10:20** ವಿಗ್ರಹಗಳು ತಾವಾಗಿಯೇ ಏನೂ ಅಲ್ಲ. ಆದರೆ ವಿಗ್ರಹಗಳ ಹಿಂದೆ ದೆವ್ವಗಳಿವೆ (8:5ರಲ್ಲಿ ಹೇಳಲಾಗಿರುವ "ದೇವರುಗಳು" ಮತ್ತು "ಕರ್ತರುಗಳೂ" ಅವುಗಳೇ. ಅವುಗಳನ್ನು ಆರಾಧನೆ ಮಾಡುವವರು ನಾವು ದೇವರಿಗೆ ಕಾಣಿಕೆಗಳನ್ನು ಸಲ್ಲಿಸುತ್ತಿದ್ದೇವೆ ಎಂಬದಾಗಿ ಅಂದುಕೊಳ್ಳಬಹುದು (ಅಥವಾ ಅಂದುಕೊಳ್ಳದೆ ಇರಬಹುದು), ಆದರೆ ನಿಜವಾಗಿಯೂ ಅವರು ಆ ಕಾರ್ಯವನ್ನು ಮಾಡುತ್ತಾ ಇಲ್ಲ. ಲೋಕದಲ್ಲಿ ಇಂದು ಆರಾಧನೆ ಮಾಡುತ್ತಿರುವ

ಜನರ ಕುರಿತು ಇದು ಬಹಳ ಪ್ರಾಮುಖ್ಯವಾದ ಹೇಳಿಕೆಯಾಗಿದೆ. ಹಾಗೆಯೇ ಧರ್ಮೋ 32:17 ನೋಡಿರಿ. ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವದೆಂದರೆ ಅವುಗಳ ಹಿಂದೆ ಇರುವ ದೆವ್ವಗಳೊಂದಿಗೆ ಭಾಗಿಯಾಗುವದಾಗಿದೆ. ಅವುಗಳಿಗೆ ಮಾಡಲಾದ ಆರಾಧನೆಯೊಂದಿಗೆ ನಾವು ಯಾವ ಅಳತೆಯಲ್ಲಿ ಒಪ್ಪಂದ ಮಾಡಿಕೊಳ್ಳುತ್ತೇವೆ ಎಂಬದನ್ನು ಅದು ತೋರಿಸುತ್ತದೆ. **21**

**10:21** *"ಕರ್ತನ ಪಂಕ್ತಿ"*– ಕರ್ತನ ಭೋಜನದ ಔತಣವನ್ನು ಸೂಚಿಸುತ್ತದೆ. ಅಲ್ಲಿ ಆತನೇ ನಿರೂಪಕನಾಗಿದ್ದಾನೆ ಮತ್ತು ಅದರಲ್ಲಿ ಪಾಲುತೆಗೆದುಕೊಳ್ಳುವ ವಿಶ್ವಾಸಿಗಳು ಅತಿಥಿಗಳಾಗಿದ್ದಾರೆ. "ದೆವ್ವಗಳ ಪಂಕ್ತಿ" –ಎಂದರೆ ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ಸೂಚಿಸುತ್ತದೆ. ಅಲ್ಲಿ ದೆವ್ವಗಳು ನಿರೂಪಕರು ಮತ್ತು ಅದರಲ್ಲಿ ಪಾಲುತೆಗೆದುಕೊಳ್ಳುವವರು ಅವರ ಅತಿಥಿಗಳಾಗಿದ್ದಾರೆ. ಈ ಭಾಷೆಯನ್ನು ಉಪಯೋಗಿಸುವ ಮೂಲಕ ಪೌಲನು ಈ ಎರಡೂ ಕಾರ್ಯಗಳನ್ನು ಒಟ್ಟುಗೂಡಿಸುವದು ಅಥವಾ ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ಸೇವಿಸುವದರಿಂದ ಏನೂ ಆಗುವದಿಲ್ಲ ಎಂಬದಾಗಿ ಯೋಚಿಸುವದು ವಿಶ್ವಾಸಿಗಳಿಗೆ ಅಸಾದ್ಯ ಎಂಬದನ್ನು ತೋರಿಸುತ್ತಾ ಇದ್ದಾನೆ. **22**

**10:22** ವಿಮೋ 20:5; ಧರ್ಮೋ 32:21; ಕೀರ್ತನೆ 78:58 ನೋಡಿರಿ. ಆತನು ನಿಷೇಧಿಸಿರುವದನ್ನು ಮಾಡುವಷ್ಟು ನಾವು ಬಲಿಷ್ಠರು ಎಂದು ಯೋಚಿಸಬಹುದೇ ಅಥವಾ ಆತನು ಕೋಪಿಸಿಕೊಳ್ಳುವಾಗ ಅದನ್ನು ಎದುರಿಸಲು ಸಾಧ್ಯವೇ? **23**

**10:23** 6:12 ನೋಡಿರಿ. **24**

**10:24** ಆತನು ಪ್ರಾಮುಖ್ಯವಾದ ತತ್ವಕ್ಕೆ ಮತ್ತೆ ಬರುತ್ತಾನೆ – 6:9,13; 8:1; ರೋಮಾ 14:19; 15:1-3. ಯೋಹಾನ 13:34 ನೋಡಿರಿ. **25**

**10:25** ಕಟುಕರ ಅಂಗಡಿಯಲ್ಲಿ ಮಾರುವ ಬಹುತೇಕ ಮಾಂಸವನ್ನು ಮಾರುವ ಮೊದಲು ವಿಗ್ರಹಗಳಿಗೆ ಅರ್ಪಿಸಲಾಗುತ್ತಾ ಇತ್ತು. ಆದರೆ ಕಟುಕನ ಅಂಗಡಿಯಿಂದ ಅದನ್ನು ತಂದು ಮನೆಯಲ್ಲಿ ತಿನ್ನಬಹುದು. **26**

**10:26** ಕೀರ್ತನೆ 24:1. ಕಟುಕನ ಅಂಗಡಿಯಲ್ಲಿರುವ ಮಾಂಸವು ವಿಗ್ರಹಗಳಿಗೆ ಅರ್ಪಿಸಿದ್ದಾದರೂ, ಕೆಲವು ಕಾರಣಗಳ ಮೇರೆಗೆ ದೇವರಿಗೆ ಸೇರಿದ್ದಾಗಿದೆ, ಆದ್ದರಿಂದ ಆತನ ಜನರು ಅವುಗಳನ್ನು ತಿನ್ನಬಹುದು. **27**

**10:27** ಇದು ಮನೆಯಲ್ಲಿ ಮಾಡುವ ಅಡುಗೆಯನ್ನು ಸೂಚಿಸುತ್ತದೆಯೇ ಹೊರತು ದೇವಸ್ಥಾನದಲ್ಲಿ ನೈವೇದ್ಯ ಮಾಡಿದ್ದೆಂದು ಸೂಚಿಸುವದಿಲ್ಲ. ಯೇಸು ಕ್ರಿಸ್ತನ ವಿಶ್ವಾಸಿಗಳು ದೇವಾಲಯದಲ್ಲಿ ಅರ್ಪಿಸಲಾಗುವ ಪದಾರ್ಥಗಳನ್ನು ತಿನ್ನಬಾರದೆಂದು ಪೌಲನು ಈಗಾಗಲೇ ಹೇಳಿದ್ದಾನೆ (ವ 20,21). **28**

**10:28** ಒಂದುವೇಳೆ ಅಂಥದ್ದನ್ನು ಒಬ್ಬ ವಿಶ್ವಾಸಿಯು ತಿಂದರೆ ವಿಗ್ರಹಾರಾಧನೆಯು

ಮುಖ್ಯವಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾನೆ, ಅವನು ಹೀಗೆ ಎಂದಿಗೂ ಮಾಡಬಾರದು. ಇದಲ್ಲದೆ ಯಾವುದೇ ಸ್ಥಳದಲ್ಲಿ ವಿಗ್ರಹಗಳಿಗೆ ಅರ್ಪಿಸಲಾಗಿರುವ ಯಾವುದೇ ಮಾಂಸವನ್ನು ತಿನ್ನುವದು ತಪ್ಪು (8:7) ಎಂಬದಾಗಿ ಯೋಚಿಸುವ ತನ್ನ ಜೊತೆಯಲ್ಲಿರುವ ವಿಶ್ವಾಸಿಯ ಮನಸ್ಸಿನಲ್ಲಿಯೂ ಅವನು ತೊಂದರೆಯನ್ನು ಉಂಟುಮಾಡುತ್ತಾನೆ. **29-30**

**10:29-30** ಯಾವುದೇ ಪರಿಸ್ಥಿತಿಯಲ್ಲಿ ಮತ್ತು ಯಾವುದೇ ಸ್ಥಳದಲ್ಲಿ ವಿಗ್ರಹಗಳಿಗೆ ಬಲಿಕೊಟ್ಟಿರುವ ಮಾಂಸವನ್ನು ತಿನ್ನುವದು ತಪ್ಪು ಎಂಬದಾಗಿ ಯೋಚಿಸುವ ವಿಶ್ವಾಸಿಯು, ಅದನ್ನು ತಿನ್ನುವ ಸ್ವಾತಂತ್ರ್ಯ ನನಗಿದೆ ಎಂದು ಯೋಚಿಸುವ ವಿಶ್ವಾಸಿಯ ವಿಷಯದಲ್ಲಿ ತೀರ್ಪು ಮಾಡುತ್ತಾನೆ. ಒಂದುವೇಳೆ ತೀರ್ಪಿಗೆ ಗುರಿಯಾಗುವ ಫಲಿತಾಂಶ ಎದುರಾಗುವದಾದರೆ ಆ ಸ್ವಾತಂತ್ರ್ಯವನ್ನು ಉಪಯೋಗಿಸದೆ ಇರುವದೇ ಉತ್ತಮ ಎಂದು ಪೌಲನು ಹೇಳಿದ್ದಾನೆ. **31**

**10:31** ಈಗ ಪೌಲನು ವಿಶ್ವಾಸಿಯ ಪ್ರತಿಯೊಂದು ಕಾರ್ಯದ ಮೇಲೆಯೂ ಆಡಳಿತ ನಡೆಸುವಂಥ ದೊಡ್ಡ ತತ್ವವನ್ನು ತಿಳಿಸಿದ್ದಾನೆ. ಯಾರಿಗಾದರೂ ಸಾಧ್ಯವಾಗುವ ದೊಡ್ಡ ಪ್ರೇರಣೆಯನ್ನು ಇಲ್ಲಿ ತಿಳಿಸಲಾಗಿದೆ. ಒಂದುವೇಳೆ ವಿಶ್ವಾಸಿಗಳೆಲ್ಲರೂ ಇದಕ್ಕನುಸಾರವಾಗಿ ಜೀವಿಸಿದರೆ ಸಭೆಯಲ್ಲಿ ಯಾವುದೇ ಗುಂಪುಗಳು ಮತ್ತು ಕಿತ್ತಾಟಗಳು ಇರುವದಿಲ್ಲ, ಯಾರೂ ಅನೈತಿಕ ಕಾರ್ಯಗಳಲ್ಲಿ ಭಾಗಿಯಾಗುವದಿಲ್ಲ, ಇತರೆ ವಿಶ್ವಾಸಿಗಳ ವಿಷಯದಲ್ಲಿ ತೀರ್ಪು ಮಾಡುವದಿಲ್ಲ, ಯಾವುದೇ ಕ್ರಿಯೆಗಳಿಂದ ಇತರರಿಗೆ ನೋವಾಗುವದೂ ಇಲ್ಲ. ಒಂದುವೇಳೆ ನಮ್ಮ ಅನುದಿನದ ಕಾರ್ಯಗಳು ಈ ವಾಕ್ಯದ ಬೆಳಕಿನಲ್ಲಿ ನಡೆಯುವದಾದರೆ ಅಪಾಯವಿಲ್ಲ ಅಥವಾ ವ್ಯತ್ಯಾಸವಾದದ್ದು ಎಂಬದಾಗಿ ಅಂದುಕೊಂಡಿದ್ದ ಅನೇಕ ಕಾರ್ಯಗಳು ಇಲ್ಲವಾಗುತ್ತವೆ. **32**

**10:32** 8:9,13; ರೋಮಾ 14:13,20,21 ನೋಡಿರಿ. ಒಂದುವೇಳೆ ನಾವು 31ನೇ ವಚನದನುಸಾರ ಜೀವಿಸಿದರೆ ಇದನ್ನೂ ನೆರವೇರಿಸುತ್ತೇವೆ.

"*ಸಭೆ*"– ಮತ್ತಾಯ 16:18ರ ನೋಟ್ಸ್ ನೋಡಿರಿ. **33**

**10:33** 9:19-23; 2 ತಿಮೊ 2:10 ನೋಡಿರಿ. ತನಗೆ ಅನುಸರಿಸಲು ಮನಸ್ಸಿಲ್ಲದ ಜೀವಿತದ ಮಾರ್ಗಗಳನ್ನು ಅವನು ಅವರಿಗೆ ತಿಳಿಸಲಿಲ್ಲ. ಸ್ವಾರ್ಥರು ಮತ್ತು ಸ್ವಾರ್ಥಚಿಂತಕರಾಗಿರುವ ಜನರು ಅಂಥ ಮಾರ್ಗವು ಯಾರಿಗೂ ಇಷ್ಟವಾಗುವದಿಲ್ಲ ಎಂದು ಯೋಚಿಸುತ್ತಾರೆ. ಆದರೆ ಇದುವೇ ಜೀವನದ ಉನ್ನತವಾದ ಮಾರ್ಗವಾಗಿದ್ದು, ಹೃದಯದಕ್ಕೆ ಸಮಾಧಾನ ದೇವರಿಂದ ದೊರೆಯುವ ಸಂತೋಷ ಹಾಗೂ ನಿತ್ಯವಾದ ಬಹುಮಾನಗಳ ಕಡೆಗೆ ನಮ್ಮನ್ನು ನಡೆಸುತ್ತದೆ.

# 11 1

**11:1** 4:16; ಫಿಲಿಪ್ಪಿ 3:17; 1 ಥೆಸ 1:6 ನೋಡಿರಿ. ತನ್ನ ಉದಾಹರಣೆಗಳನ್ನು ಅನುಸರಿಸುವದು ಯಾಕೆ ಉತ್ತಮವಾಗಿದೆ ಎಂಬದಕ್ಕೆ ಪೌಲನು ಇಲ್ಲಿ ಕಾರಣವನ್ನು

ಕೊಟ್ಟಿದ್ದಾನೆ ಅದೇನೆಂದರೆ ಯೇಸು ಕ್ರಿಸ್ತನು ಜೀವಿಸಿದ ಹಾಗೆಯೇ ಜೀವಿಸಲು ದೇವರು ಅವನನ್ನು ಬಲಪಡಿಸಿದ್ದನು. ನಿಜವಾಗಿ ಹೇಳುವದಾದರೆ, ಯೇಸು ಕ್ರಿಸ್ತನು ಅವನೊಳಗೆ ಜೀವಿಸುತ್ತಾ ಇದ್ದನು (ಗಲಾ 2:20). ಪೌಲನ ಉದಾಹರಣೆಯನ್ನು ಅನುಸರಿಸುವ ಶಕ್ತಿ ಅವರಿಗಾಗಲಿ ಅಥವಾ ಬೇರೆ ಯಾರಿಗೇ ಆಗಲಿ ಬೇಕೆಂದರೆ ಅದಕ್ಕಿರುವ ಒಂದೇ ಮಾರ್ಗ ಇದು ಮಾತ್ರವೇ ಆಗಿದೆ. **2**

**11:2** *"ಕಟ್ಟಳೆಗಳು"*– ಅಥವಾ "ಸೂಚನೆಗಳು". ಇವುಗಳು ಕ್ರೈಸ್ತೀಯ ನಂಬಿಕೆಗೆ ಸಂಬಂಧಿಸಿದ ಬೋಧನೆಗಳಾಗಿದ್ದು ಅಪೊಸ್ತಲರೆಲ್ಲರೂ ಇವುಗಳನ್ನು ಕಲಿಸುತ್ತಾ ಇದ್ದರು. ಈಗ ಪೌಲನು ಸಾರ್ವಜನಿಕ ಆರಾಧನೆಯ ವಿಷಯದ ಕಡೆಗೆ ತಿರುಗಿಕೊಳ್ಳುತ್ತಾ ಇದ್ದಾನೆ ಮತ್ತು ವಿಶ್ವಾಸಿಗಳು ಕೆಲವು ಸಮಯಗಳಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ತಿಳಿಸುತ್ತಾ ಇದ್ದಾನೆ. 14 ಅಧ್ಯಾಯದ ಮುಕ್ತಾಯದ ತನಕ ಅವನು ಈ ವಿಷಯದ ಬಗ್ಗೆಯೇ ಮಾತನಾಡುತ್ತಾ ಇದ್ದಾನೆ. **3**

**11:3** *"ತಲೆ"*– ಅಂದರೆ ಅಧಿಕಾರದಲ್ಲಿರುವವನು. ಪುರುಷನು ಯೇಸು ಕ್ರಿಸ್ತನಿಗೆ ಅಧೀನನಾಗಿರಬೇಕು. ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗಿರಬೇಕು (ಎಫೆ 5:24; 1 ತಿಮೊ 2:11-12; 1 ಪೇತ್ರ 3:1,5,6). ಹೆಂಡತಿಯು ಯಾವುದೇ ರೀತಿಯಲ್ಲಾದರೂ ತನ್ನ ಗಂಡನ ಮೇಲೆ ಆಳ್ವಿಕೆ ಮಾಡಲು ಪ್ರಯತ್ನಿಸಿದರೆ ಆಕೆ ದೇವರ ಕ್ರಮವನ್ನು ತಪ್ಪಿಸುವವಳಾಗಿದ್ದಾಳೆ ಮತ್ತು ಅದರ ಪರಿಣಾಮಗಳು ಖಂಡಿತವಾಗಿಯೂ ದುಃಖಕರವಾಗಿರುತ್ತವೆ. ಗಂಡನಾದವನು ತನ್ನ ಅಧಿಕಾರವನ್ನು ಹೇಗೆ ಉಪಯೋಗ ಮಾಡಬೇಕು ಎಂಬದನ್ನು ಪೌಲನು ಇಲ್ಲಿ ಹೇಳಿಲ್ಲ, ಆದರೆ ಎಫೆ 5:25,28,33 ರಲ್ಲಿ ಹೇಳಿದ್ದಾನೆ. ಯೇಸು ಕ್ರಿಸ್ತನ ಮೇಲೆ ದೇವರು ಅಧಿಕಾರಿಯಾಗಿದ್ದಾನೆ ಎಂದು ಪೌಲನು ಹೇಳುವಾಗ, ಯೇಸು ಕ್ರಿಸ್ತನು ದೇವರ ಸ್ವಭಾವದಲ್ಲಿ ಭಾಗಿಯಿಲ್ಲ ಎಂಬದಾಗಿ ಹೇಳುತ್ತಾ ಇಲ್ಲ (ತನ್ನ ಗಂಡನಿಗೆ ಅಧೀನಳಾಗಿ ಜೀವಿಸಬೇಕಾದ ಹೆಂಡತಿ ಅವನೊಂದಿಗೆ ಮಾನವ ಸ್ವಭಾವದಲ್ಲಿ ಭಾಗಿಯಾಗಿದ್ದಾಳೆ. ಹಾಗೆಯೇ ಯೇಸು ಕ್ರಿಸ್ತನು, ತನ್ನ ತಂದೆಗೆ ಅಧೀನನಾಗಿದ್ದರೂ, ದೇವರ ಸ್ವಭಾವಗಳನ್ನು ಹೊಂದಿದ್ದಾನೆ). ಯೇಸು ಕ್ರಿಸ್ತನೇ ಕಲಿಸಿದ ವಿಷಯಗಳನ್ನೇ ಪೌಲನೂ ಹೇಳುತ್ತಾ ಇದ್ದಾನೆ. ಯೋಹಾನ 14:28; 5:19-23 ನೋಡಿರಿ. **4-10**

**11:4-10** ಪೌಲನು ಸಾರ್ವಜನಿಕ ಆರಾಧನೆಯ ಬಗ್ಗೆ ಮಾತನಾಡುತ್ತಾ ಇದ್ದಾನೆ. ಕೆಲವು ಸಮಯಗಳಲ್ಲಿ ಎಲ್ಲಾ ಕಾರ್ಯಗಳನ್ನು "ಸರಿಯಾಗಿಯೂ, ಕ್ರಮವಾಗಿಯೂ" ಮಾಡಬೇಕು. ಪುರಷರಿಗೆ ಯಾವುದು ಸರಿಯಾದದ್ದು ಮತ್ತು ಸ್ತ್ರೀಯರಿಗೆ ಯಾವುದು ಸರಿಯಾದದ್ದು ಎಂಬದನ್ನು ಪೌಲನು ತಿಳಿಸಿದ್ದಾನೆ. ಆಗಿನ ಕಾಲದ ಸಂಪ್ರದಾಯಗಳ ಆಧಾರದ ಮೇಲೆ ಅವನು ಇದನ್ನು ಹೇಳಿಲ್ಲ ಬದಲಾಗಿ ದೇವರು ತಾನೇ ಪ್ರಕಟಪಡಿಸಿರುವ (ವ 3,7-9) ಸ್ತ್ರೀ ಮತ್ತು ಪುರುಷನ ನಡುವೆಯು ಮೂಲಭೂತ ಸಂಬಂಧದ ಆಧಾರದ ಮೇರೆಗೆ ಅದನ್ನು ಹೇಳಿದ್ದಾನೆ. **4**

**11:4** ಈ ವಚನದಲ್ಲಿ "ತಲೆ" ಎಂಬದಾಗಿ ಎರಡನೆ ಸಲ ಹೇಳಲಾಗಿರುವದು ಯೇಸು ಕ್ರಿಸ್ತನನ್ನು ಸೂಚಿಸುತ್ತದೆ (ವ 3) ಎಂಬದಾಗಿ ಕೆಲವರು ಹೇಳುತ್ತಾರೆ. ಪೌಲನು ಈ ವಚನದಲ್ಲಿ ಈ ಪದವನ್ನು ಎರಡು ವಿವಿಧ ಅರ್ಥದಲ್ಲಿ ಉಪಯೋಗಿಸಿದ್ದಾನೆ ಎಂಬದರ ಇದರ ಅರ್ಥವಾಗಿದೆ. ಆದರೆ ಇದು ಹಾಗಿರುವ ಸಾಧ್ಯತೆಯಿಲ್ಲ. ತನ್ನ ತಲೆಯನ್ನು ಅವಮಾನಪಡಿಸುವನು ಎಂದರೆ ತನ್ನನ್ನು ತಾನೇ ಅವಮಾನಪಡಿಸಿಕೊಳ್ಳುವದು ಎಂಬದಾಗಿದೆ.

**5-6**

**11:5-6** ಸ್ತ್ರೀಯರೂ ಪುರುಷರೂ ಇಬ್ಬರೂ ಇರುವ ಸಾರ್ವಜನಿಕ ಕೂಟಗಳಲ್ಲಿ ಸ್ತ್ರೀಯರು ಪ್ರಾರ್ಥನೆ ಮಾಡುವದು ಮತ್ತು ಪ್ರವಾದನೆ ಹೇಳುವದು ಸರಿಯೇ? ಪೌಲನು ಆ ಪ್ರಶ್ನೆಯನ್ನು ಇಲ್ಲಿ ತೆಗೆದುಕೊಂಡಿಲ್ಲ. 14:34 ರಲ್ಲಿ ಅವನು ಹೇಳಿರುವದೇನೆಂದರೆ "ಸ್ತ್ರೀಯರು ಸಭೆಯಲ್ಲಿ ಮೌನವಾಗಿರಬೇಕು." ಇಲ್ಲಿ ವಿಷಯ ಪ್ರವಾದಿಸುವದಾಗಿದೆಯೇ ಹೊರತು ಪ್ರಾರ್ಥನೆ ಮಾಡುವದಲ್ಲ. ಸಾರ್ವಜನಿಕ ಕೂಟಗಳ ಆರಾಧನೆಯ ಸಮಯದಲ್ಲಿ ಆಕೆ ಗಟ್ಟಿಯಾಗಿ ಪ್ರಾರ್ಥನೆ ಮಾಡಬಾರದು ಎಂದು ಅವನು ನಿರ್ದಿಷ್ಟವಾಗಿ ಹೇಳಿಲ್ಲ. ಹೊಸ ಒಡಂಬಡಿಕೆಯಲ್ಲಿ ಕೆಲವು ಸ್ತ್ರೀಯರಿಗೆ ಪ್ರವಾದನೆ ಹೇಳುವ ವರವಿತ್ತು ಎಂಬದನ್ನು ನಾವು ನೋಡುತ್ತೇವೆ – ಅಪೊ 2:18; 21:9. ಸ್ತ್ರೀಯರು ಮತ್ತು ಪುರುಷರು ಭಾಗಿಯಾಗಿರುವ ಸಾರ್ವಜನಿಕ ಕೂಟಗಳಲ್ಲಿ ಅವರು ತಮ್ಮ ಈ ವರವನ್ನು ಉಪಯೋಗಿಸಬಾರದು ಬದಲಾಗಿ ಬೇರೆ ಸಮಯಗಳಲ್ಲಿ ಉಪಯೋಗಿಸಬಹುದೆಂದು (14:34-35; 1 ತಿಮೊ 2:11-12) ಪೌಲನು ಕಲಿಸಿದ್ದಾನೆ ಎಂಬದಾಗಿ ಅನ್ನಿಸುತ್ತದೆ. 5 ನೇ ವಚನದಲ್ಲಿಯೂ ಒಬ್ಬ ಸ್ತ್ರೀ (ಪುರುಷರು ಭಾಗಿಯಾಗಿರುವಾಗ ಸಾರ್ವಜನಿಕವಾಗಿ) ಪ್ರಾರ್ಥನೆ ಮಾಡಿದರೆ ಅಥವಾ (ಬೇರೆ ಯಾವುದಾದರು ಸಮಯಗಳಲ್ಲಿ) ಪ್ರವಾದನೆ ಹೇಳಿದರೆ ಆಕೆ ತನ್ನ ತಲೆಯ ಮೇಲೆ ಮುಸುಕನ್ನು ಹಾಕಿಕೊಳ್ಳಬೇಕು. ಒಂದುವೇಳೆ ಸ್ತ್ರೀ ಏನಾದರೂ ತನ್ನ ತಲೆ ಬೋಳಿಸಿಕೊಂಡರೆ ಅದು ಆಕೆಗೆ ಅವಮಾನದ ಗುರುತಾಗಿದೆ. ಆದ್ದರಿಂದ ಆಕೆ ತನ್ನ ತಲೆಯ ಮೇಲೆ ಮುಸುಕು ಹಾಕಿಕೊಳ್ಳದೆ ಪ್ರಾರ್ಥನೆ ಮಾಡಿದರೆ ಅಥವಾ ಪ್ರವಾದನೆ ಹೇಳಿದರೆ, ಅದು ತಲೆಬೋಳಿಸಿಕೊಳ್ಳುವದಕ್ಕೆ ಸಮಾನವಾಗಿದೆ ಎಂದು ಪೌಲನು ಹೇಳಿದ್ದಾನೆ. ಗಟ್ಟಿಯಾಗಿ ಪ್ರಾರ್ಥನೆ ಮಾಡದೆ ಇರುವಾಗಲೂ ಅಥವಾ ಪ್ರವಾದನೆ ಹೇಳದೆ ಇರುವಾಗಲೂ ತಲೆಯ ಮೇಲೆ ಮುಸುಕು ಹಾಕಿಕೊಳ್ಳುವದು ಅವಶ್ಯ ಎಂದು ಅವನು ಹೇಳುತ್ತಾ ಇಲ್ಲ. ತಲೆಯ ಮೇಲೆ ಮುಸುಕು ಹಾಕಿಕೊಳ್ಳುವದು (ಅಥವಾ ಉದ್ದ ಅಥವಾ ತುಂಡು ಕೂದಲು – ವ 14,15) ಪ್ರಾಮುಖ್ಯವಲ್ಲ ಅವುಗಳು ಕೇವಲ ಗುರುತುಗಳಷ್ಟೇ ಎಂದು ಕೆಲವರು ಹೇಳಬಹುದು. ಅವುಗಳು ಗುರುತುಗಳಾಗಿವೆ ಎಂಬದು ಸತ್ಯಸಂಗತಿಯಾಗಿದೆ ಆದರೆ ದೇವರು ನೇಮಿಸಿರುವ ಗುರುತುಗಳಿಗೆ ಅವುಗಳದೇ ಆದ ಪ್ರಾಮುಖ್ಯತೆಯಿದೆ ಮತ್ತು ಯಾರೆಲ್ಲಾ ಗುರುತುಗಳನ್ನು ಕಡೆಗಣಿಸಲು ಸಿದ್ಧರಾಗಿರುತ್ತಾರೋ ಅವರು ಗುರುತುಗಳು ಸೂಚಿಸುವ ವಿಷಯಗಳನ್ನೂ

ಕಡೆಗಣಿಸಲು ಸಿದ್ಧರಾಗಿರುವದನ್ನು ಸೂಚಿಸುತ್ತಾರೆ. ಆದರೆ, ಕೆಲವರು ಇವೆಲ್ಲಾ ಸಣ್ಣ ವಿಚಾರಗಳಲ್ಲವೇ ಎಂದು ಹೇಳಬಹುದು? ಕಡೆಗಣಿಸಿದರೆ ಏನಾಗುವದು ಎಂದು ಕೇಳಬಹುದು? ವಿಶ್ವಾಸಿಗಳು ಸಣ್ಣ ವಿಷಯಗಳು ಎಂಬದಾಗಿ ಆಲೋಚಿಸುವಂಥ ವಿಷಯಗಳಲ್ಲಿಯೂ ತಮ್ಮನ್ನು ಮೆಚ್ಚಿಸಿಕೊಳ್ಳಲು ಪ್ರಯತ್ನಿಸಬಾರದು (10:29,33; 11:1). ಆದರೆ ಕ್ರೈಸ್ತರಿಗೆ ಸ್ವಾತಂತ್ರ್ಯವಿಲ್ಲವೇ? ಅವರಿಗೆ ಸ್ವಾತಂತ್ರ್ಯವಿದೆ, ಆದರೆ ಅವರು ತಕ್ಕದಾದ ಕಾರ್ಯಗಳನ್ನು ಮಾಡಲು ಮಾತ್ರವೇ ತಮ್ಮ ಸ್ವಾತಂತ್ರ್ಯವನ್ನು ಬಳಸಿಕೊಳ್ಳಬೇಕು ಮತ್ತು ತಕ್ಕದಾದವುಗಳಿಗೆ ವಿರುದ್ಧವಾಗಿ ಯಾವುದೇ ಕಾರ್ಯಗಳನ್ನು ಮಾಡಬಾರದು. **7-10**

**11:7-10** ಸ್ಥಳೀಯ ಸಂಪ್ರದಾಯಗಳ ಆಧಾರದ ಮೇರೆಗೆ ಆತನು ಯಾವುದು ಗೌರವವಾದದ್ದು ಅಥವಾ ಅಗೌರವವಾದದ್ದು ಎಂದು ಹೇಳುತ್ತಾ ಇಲ್ಲ ಬದಲಾಗಿ ಸ್ತ್ರೀಯರನ್ನು ಮತ್ತು ಪುರುಷರನ್ನು ಉಂಟುಮಾಡಿರುವ ದೇವರ ಉದ್ದೇಶದ ಮೇರೆಗೆ ಹೇಳಿದ್ದಾನೆ. ಆತನು ಮೊದಲ ಸ್ತ್ರೀ ಮತ್ತು ಪುರುಷನ ಸೃಷ್ಟಿಯ ಬಗ್ಗೆ ಮಾತನಾಡುತ್ತಾ ಇದ್ದಾನೆ (ಆದಿಕಾಂಡ 1 ಮತ್ತು 2 ಅಧ್ಯಾಯಗಳು). **7**

**11:7** ಪುರಷನು ಸಾರ್ವಜನಿಕ ಆರಾಧನೆಯ ಸಮಯದಲ್ಲಿ ತನ್ನ ತಲೆಯನ್ನು ಮುಚ್ಚಿಕೊಳ್ಳಬಾರದು ಎಂಬದಕ್ಕೆ ಇಲ್ಲಿ ಕಾರಣವನ್ನು ಕೊಡಲಾಗಿದೆ. ಮುಚ್ಚಲ್ಪಡದ ತಲೆ ಅಧಿಕಾರದ ಗುರುತಾಗಿದೆ ಮತ್ತು ದೇವರು ಸ್ತ್ರೀಯನ್ನೂ ಸೇರಿ ಭೂಲೋಕದ ಮೇಲೆ ಸೃಷ್ಟಿಸಲ್ಪಟ್ಟಿರುವ ಎಲ್ಲಾ ಕಾರ್ಯಗಳ ಮೇಲೆ ಪುರುಷನಿಗೆ ಅಧಿಕಾರವನ್ನು ಕೊಟ್ಟಿದ್ದಾನೆ. ಈ ರೀತಿ ಪುರುಷನು ಎಲ್ಲರ ಮೇಲೆ ಪರಮಾಧಿಕಾರಿಯಾಗಿರುವ ದೇವರ ಪ್ರಭಾವವನ್ನು ಪ್ರತಿಬಿಂಬಿಸುತ್ತಾನೆ. **8-9**

**11:8-9** ಆದಿ 2:20-23 ನೋಡಿರಿ. ಸ್ತ್ರೀ ಪುರುಷನಿಗೆ ಅಧೀನಳಾಗಿರಬೇಕೆಂಬ ಕಾರಣಕ್ಕಾಗಿಯೇ ದೇವರು ಮೊದಲು ಪುರುಷನನ್ನು ಸೃಷ್ಟಿ ಮಾಡಿದನು ಎಂಬದಾಗಿ ಆತನು ಹೇಳಿದ್ದಾನೆ (ಸ್ತ್ರೀ ಪುರುಷನಿಗಾಗಿ ಸೃಷ್ಟಿಸಲ್ಪಟ್ಟಳೇ ಹೊರತು ಪುರುಷನು ಸ್ತ್ರೀಗಾಗಿ ಸೃಷ್ಟಿಸಲ್ಪಡಲಿಲ್ಲ). **10**

**11:10** ಸ್ತ್ರೀಯರು ಪ್ರಾರ್ಥನೆ ಮಾಡುವಾಗ ಅಥವಾ ಪ್ರವಾದನೆ ಹೇಳುವಾಗ ಯಾಕೆ ತಮ್ಮ ತಲೆಯ ಮೇಲೆ ಮುಸುಕು ಹಾಕಿಕೊಳ್ಳಬೇಕು ಎಂಬದಕ್ಕೆ ಇಲ್ಲಿ ಮತ್ತೊಂದು ಕಾರಣವನ್ನು ಕೊಡಲಾಗಿದೆ, ಮತ್ತು ಈ ಕಾರಣಕ್ಕೂ ಕೊರಿಂಥದಲ್ಲಿದ್ದ ಸಂಪ್ರದಾಯಗಳಿಗೂ ಯಾವುದೇ ಸಂಬಂಧವಿಲ್ಲ. ದೇವದೂತರು ವಿಶ್ವಾಸಿಗಳು ಸೇರಿ ಬರುವದನ್ನು ಗಮನಿಸುತ್ತಾ ಇದ್ದಾರೆ ಮತ್ತು ಅವರಿಗೆ ಯಾವುದು ಸರಿ ಹಾಗೂ ಯಾವುದು ಸರಿಯಲ್ಲ ಎಂಬದು ಚೆನ್ನಾಗಿ ಗೊತ್ತಿದೆ. ವಿಶ್ವಾಸಿಗಳ ಸೇವೆಗಾಗಿ ದೇವರಿಂದ ಕಳುಹಿಸಲ್ಪಡುವ ಈ ಸಂದೇಶಕರಿಗೆ ವಿರುದ್ಧವಾಗಿ ಕ್ರೈಸ್ತೀಯ ಸ್ತ್ರೀಯರು ಎಂದಿಗೂ ನಡೆದುಕೊಳ್ಳಬಾರದು (ಇಬ್ರಿ 1:14). **11-12**

**11:11-12** ಪೌಲನು ಪುರುಷರನ್ನು ಹೊಗಳುತ್ತಾ ಇದ್ದಾನೆ ಮತ್ತು ಎಲ್ಲಾ

ವಿಷಯಗಳಲ್ಲಿಯೂ ಸ್ತ್ರೀಯರನ್ನು ಪುರುಷರಿಗಿಂತ ಕಡಿಮೆ ಎಂದು ಹೇಳುತ್ತಾನೆ ಎಂಬದಾಗಿ ಓದುಗರು ಆಲೋಚಿಸಬಾರದೆಂದು ಅವನು ಬಯಸಿದನು. ಅಧಿಕಾರದ ವಿಷಯಕ್ಕೆ ಬಂದರೆ ಪುರುಷನು ಶಿರಸ್ಸಾಗಿದ್ದಾನೆ ಆದರೆ ಉಳಿದ ಎಲ್ಲಾ ವಿಷಯಗಳಲ್ಲಿ ಪರಸ್ಪರ ಆತುಕೊಳ್ಳುವಿಕೆ ಇದ್ದೇ ಇರುತ್ತದೆ. ಪುರುಷನು ಮತ್ತು ಸ್ತ್ರೀ ಸೇರಿದರೆ ಮಾತ್ರವೇ ಅವರು ಸಂಪೂರ್ಣರಾಗುವರು ಎಂದು ದೇವರೇ ನೇಮಿಸಿದ್ದಾನೆ. **13**

**11:13** ಈ ವಿಷಯವು ಅತ್ಯಂತ ಸರಳವಾಗಿರುವದರಿಂದ ತನ್ನಿಂದ ಯಾವುದೇ ಸೂಚನೆಯಿಲ್ಲದಿದ್ದರೂ ವಿಶ್ವಾಸಿಗಳು ಸತ್ಯವನ್ನು ತಿಳಿದುಕೊಳ್ಳುವವರಾಗಿರಬೇಕು ಎಂಬದಾಗಿ ಪೌಲನು ಆಲೋಚಿಸುತ್ತಾ ಇದ್ದಾನೆ. **14-15**

**11:14-15** ತಲೆ ಕೂದಲನ್ನು ಬೆಳೆಸುವದು ಪುರುಷನಿಗೆ ಅವಮಾನವಾಗಿದೆ ಆದರೆ ಸ್ತ್ರೀಗೆ ಗೌರವವಾಗಿದೆ ಎಂದು ಪೌಲನು ಹೇಳಿದ್ದಾನಾದರೂ, ತಾನು ಹೇಳದಿದ್ದರೂ ಈ ವಿಷಯ ಅವರಿಗೆ ಗೊತ್ತಿರಬೇಕು ಎಂಬದು ಅವನ ಬಯಕೆಯಾಗಿದೆ. ಆದರೆ ಈಗಿನ ಕಾಲದಲ್ಲಿ (ವಿಶೇಷವಾಗಿ ಪಾಶ್ಚಾತ್ಯ ದೇಶಗಳಲ್ಲಿ) ಅನೇಕ ಸ್ತ್ರೀಯರು ತಮ್ಮ "ಗೌರವವನ್ನು" ಅಲಕ್ಷ್ಯ ಮಾಡಿರುವದು ಮತ್ತು ಅನೇಕ ಪುರುಷರು ತಮ್ಮ "ಅವಮಾನದಲ್ಲಿಯೇ" ಹೆಚ್ಚಳಪಡುವದನ್ನು ನೋಡಿದರೆ ಅವನು ಏನು ಹೇಳುವನು? ಪೌಲನು "ಉದ್ದ" ಪದವನ್ನು ವ್ಯಾಖ್ಯಾನಿಸಿಲ್ಲ ಬದಲಾಗಿ ಪುರುಷರಿಗಿಂತ ಸ್ತ್ರೀಯರಿಗೆ ಉದ್ದ ಕೂದಲು ಇರಬೇಕು ಎಂದು ಹೇಳಿದ್ದಾನೆ. 15ನೇ ವಚನದಲ್ಲಿ ಹೇಳಲಾಗಿರುವ ಮುಸುಕು ಎಂಬ ಪದ ಆತನು 5,6 ವಾಕ್ಯಗಳಲ್ಲಿ ಹೇಳಿರುವ ಪದಕ್ಕೆ ಸಮವಲ್ಲ. **16**

**11:16** ತಾನು ಹೇಳುವ ಮಾತುಗಳಿಗೆ ವಿರುದ್ಧವಾಗಿ ಕೆಲವರು ವಾಗ್ವಾದ ನಡೆಸುವರು ಎಂಬದು ಪೌಲನಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಅವರು ವಾಗ್ವಾದ ಮಾಡುವದಿಲ್ಲ. ತಾನು ಸತ್ಯವನ್ನು ತಿಳಿಯಪಡಿಸಿದ್ದೇನೆ ಎಂಬದು ಮಾತ್ರವೇ ಆತನಿಗೆ ಸಾಕಾಗಿತ್ತು – ಅವನ ಕಾಲದ ಸಭೆಗಳಲ್ಲಿ ಈ ಸತ್ಯವನ್ನು ಎಲ್ಲಾ ಸಭೆಗಳಲ್ಲಿಯೂ ಅನುಸರಿಸುತ್ತಾ ಇದ್ದರು. **17**

**11:17** ವಚನಗಳು 22,34. **18**

**11:18** 1:10-12; 3:3-4 ನೋಡಿರಿ. ಅವರು ತಮ್ಮ ಭಿನ್ನಾಭಿಪ್ರಾಯಗಳು ಮತ್ತು ಜಗಳಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳದೆ, ಸಭೆಗೆ ತೆಗೆದುಕೊಂಡು ಬಂದರು ಎಂಬದಾಗಿ ಅನ್ನಿಸುತ್ತದೆ. **19**

**11:19** *"ಭಿನ್ನಾಭಿಪ್ರಾಯಗಳು"*– ಅವರ ನಡುವೆಯಿದ್ದ ಜಗಳಗಳು ಮತ್ತು ಭಿನ್ನಾಭಿಪ್ರಾಯಗಳು, ಆಶ್ಚರ್ಯವೆನಿಸಿದರೂ ಉತ್ತಮವಾದ ಉದ್ದೇಶಕ್ಕೆ ಸಹಕಾರಿಯಾಗಿದ್ದವು.

*"ಯೋಗ್ಯರು"*– ಈ ಗ್ರೀಕ್ ಪದ ಸೂಚಿಸುವದೇನೆಂದರೆ ಯಾವುದೋ ಒಂದು ಅಥವಾ ಇನ್ನೊಂದು ರೀತಿಯ ಪರೀಕ್ಷೆ ಅಥವಾ ಶೋಧನೆಯ ನಂತರ ಯೋಗ್ಯರೆಂದು ಸಾಬೀತಾದವರು

ಎಂಬದನ್ನು ಸೂಚಿಸುತ್ತದೆ. ಒಳ್ಳೆಯ ಕಾರಣಗಳು ವ್ಯಕ್ತವಾಗುವ ಸಲುವಾಗಿ ದೇವರು ಕ್ರೈಸ್ತರ ನಡುವೆ ಭಿನ್ನಾಭಿಪ್ರಾಯಗಳು ಮತ್ತು ವ್ಯತ್ಯಾಸಗಳನ್ನು ಬರಮಾಡುತ್ತಾನೆ. ಅಂಥ ಕಾರ್ಯಗಳೆಲ್ಲವೂ ಪರೀಕ್ಷೆಗಳಾಗಿವೆ. ದೇವರಿಗೆ ಯಾರು ಯೋಗ್ಯರಾಗಿದ್ದಾರೆಂದು ತಿಳಿಯಲು ಅವುಗಳು ಸಹಾಯ ಮಾಡುತ್ತವೆ. ಆತ್ಮೀಕನು ಯಾರು, ದೇವರ ಮಾರ್ಗಗಳಿಗೆ ನಂಬಿಗಸ್ತನು ಯಾರು ಮತ್ತು ಪೌಲನು ಈಗಾಗಲೇ ಈ ಪತ್ರಿಕೆಯಲ್ಲಿ ತಿಳಿಸಿರುವ ತತ್ವಗಳನ್ನು ಕಾರ್ಯರೂಪಕ್ಕೆ ತರುವ ಮನಸ್ಸುಳ್ಳವನು ಯಾರು ಎಂಬದನ್ನು ಇವು ತೋರಿಸುತ್ತವೆ. ಪರೀಕ್ಷೆ ಎದುರಾಗದೆ ಹೋದರೆ ಪರೀಕ್ಷೆಯನ್ನು ಗೆಲ್ಲಲು ಯಾರಿಂದಲೂ ಆಗುವದಿಲ್ಲ ಮತ್ತು ಒಂದೂ ನಡೆಯಲಿಲ್ಲವೆಂದರೆ ಸ್ಪಷ್ಟವಾದ ಯಾವ ಪ್ರಕಟನೆಯೂ ಇರುವದಿಲ್ಲ. **20-22**

**11:20-22** ನಾವು ಕರ್ತನ ಭೋಜನವನ್ನು ಆಚರಿಸುತ್ತಾ ಇದ್ದೇವೆ ಎಂದು ಅವರು ಹೇಳಿದರು. ಅದರೆ ಅವರು ಆ ಸಂದರ್ಭವನ್ನು ಎಷ್ಟು ಕೆಟ್ಟದಾಗಿ ನಡೆಸುತ್ತಾ ಇದ್ದರೆಂದರೆ ನೀವು ಇದನ್ನು ಕರ್ತನ ಭೋಜನವೆಂದು ಕರೆಯಲೇಬಾರದು ಎಂಬದಾಗಿ ಪೌಲನು ಹೇಳಿದ್ದಾನೆ. ಆ ಸಮಯದಲ್ಲಿ ಕೆಲವು ಸಭೆಗಳು ಕರ್ತನ ಭೋಜನಕ್ಕೆ ಸಂಬಂಧವಾಗಿ ಸಾಮಾನ್ಯವಾಗಿ ಊಟವನ್ನೂ ಮಾಡುತ್ತಾ ಇದ್ದರು. ಯಾಕಂದರೆ ಅದರ ಮುಖ್ಯ ಉದ್ದೇಶ ಅವರು ಒಬ್ಬರ ಮೇಲೊಬ್ಬರಿಗೆ ತಮಗಿರುವ ಪ್ರೀತಿಯನ್ನು ತೋರಿಸುವದಾಗಿತ್ತು, ಆದ್ದರಿಂದ ಅದನ್ನು "ಪ್ರೇಮ ಭೋಜನ" ಎಂದು ಕರೆಯುತ್ತಾ ಇದ್ದರು (ಯೂದ 12). ಆದರೆ ಕೊರಿಂಥದಲ್ಲಿ ಅದನ್ನು ಹಾಗೆ ಕರೆಯಲು ಆಗುತ್ತಾ ಇರಲಿಲ್ಲ, ಯಾಕಂದರೆ ಅಲ್ಲಿದ್ದ ಕ್ರೈಸ್ತರು ಇತರರ ಬಗ್ಗೆ ಯೋಚಿಸದೆ ಕೇವಲ ತಮ್ಮ ಬಗ್ಗೆ ಮತ್ತು ತಮ್ಮ ಕಾರ್ಯಗಳ ಬಗ್ಗೆ ಮಾತ್ರವೇ ಯೋಚಿಸುತ್ತಾ ಇದ್ದರು. ಸಭೆಯಲ್ಲಿ ಅವರ ನಡವಳಿಕೆಯು ಸಭೆಯನ್ನು ಅಸಡ್ಡೆ ಮಾಡುವ ರೀತಿಯಲ್ಲಿತ್ತು (ವ 22). ಕರ್ತನ ಭೋಜನವು ಯೇಸು ಕ್ರಿಸ್ತನೊಂದಿಗೆ ಮತ್ತು ಪರಸ್ಪರ ಇತರರೊಂದಿಗೆ ಇರುವ ಐಕ್ಯತೆಯ ಬಗ್ಗೆ ಮಾತನಾಡುತ್ತದೆ ಎಂಬದನ್ನು ಅವರು ಮರೆತುಹೋಗಿದ್ದರು (10:16-17). **23**

**11:23** ಈಗ ಅವನು ಮತ್ತೊಮ್ಮೆ ಕರ್ತನ ಭೋಜನ ಎಂದರೆ ಏನು ಮತ್ತು ಅದನ್ನು ಯಾವ ರೀತಿ ಆಚರಿಸಬೇಕು ಎಂಬದನ್ನು ಪ್ರಕಟಿಸಲು ಪ್ರಾರಂಭಿಸುತ್ತಾ ಇದ್ದಾನೆ. ಅವನು ಮೊದಲು ಒಮ್ಮೆ ಈ ಸತ್ಯವನ್ನು ಅವರಿಗೆ ತಿಳಿಸಿದ್ದನು ಆದರೆ ಅವರು ಅದನ್ನು ಬಿಟ್ಟುಬಿಟ್ಟಿದ್ದರು. ಅವನು ಅವರಿಗೆ ತಿಳಿಸಿದ ಉಪದೇಶವನ್ನು ಕರ್ತನಿಂದ ಹೊಂದಿದ್ದನು. ಸುವಾರ್ತೆಗಳಲ್ಲಿ ಬರೆಯಲಾಗಿರುವ ವಿಷಯಗಳೊಂದಿಗೆ ಇದು ಹೊಂದಿಕೆಯಾಗುತ್ತದೆ. ಮತ್ತಾಯ 26:26-28; ಮಾರ್ಕ 14:22-24; ಲೂಕ 22:19-22 ನೋಡಿರಿ. **24**

**11:24** *"ನನ್ನ ದೇಹ"*– ರೊಟ್ಟಿ (ವ 28) ಕರ್ತನ ಭೋಜನದಲ್ಲಿ ಯೇಸು ಕ್ರಿಸ್ತನ ದೇಹಕ್ಕೆ ಗುರುತಾಗಿದೆ. ಹೊಸ ಒಡಂಬಡಿಕೆಯಲ್ಲಿ ಗುರುತುಗಳ ಉಪಯೋಗದ ಬಗ್ಗೆ ತಿಳಿಯಲು ಯೋಹಾನ 6:53-58,63 ರ ನೋಟ್ಸ್ ನೋಡಿರಿ.

“*ನಿಮಗಾಗಿ*”– ಇದರ ಅರ್ಥ ಯೇಸು ಕ್ರಿಸ್ತನು ವಿಶ್ವಾಸಿಗಳಿಗಾಗಿ ಶಿಲುಬೆಯ ಮೇಲೆ ತನ್ನ ದೇಹವನ್ನು ಯಜ್ಞವಾಗಿ ಅರ್ಪಿಸಿದನು.

“*ಇದನ್ನು ಮಾಡಿರಿ*”– ಇದು ಕರ್ತನಾದ ಯೇಸು ಕ್ರಿಸ್ತನ ಆಜ್ಞೆಯಾಗಿದೆ. ಆದ್ದರಿಂದ ವಿಧೇಯನಾಗಬೇಕೆಂದು ಬಯಸುವ ವಿಶ್ವಾಸಿಯು ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳಬೇಕು.

“*ನನ್ನನು ನೆನಸಿಕೊಳ್ಳುವದಕ್ಕೋಸ್ಕರ*”– ಕರ್ತನ ಭೋಜನದ ಸಮಯದಲ್ಲಿ ನಾವು ಮೇಲೆ ನೋಡಬೇಕು ಮತ್ತು ಹಿಂದೆ ನೋಡಬೇಕು (ಮತ್ತು ನಮ್ಮೊಳಗೆ ನೋಡಿಕೊಳ್ಳಬೇಕು – ವ 28). ನಮ್ಮ ಆಲೋಚನೆಗಳು ಮೇಲಿರುವ ಯೇಸು ಕ್ರಿಸ್ತನ ಮೇಲೆ ಮತ್ತು ಅನೇಕ ವರ್ಷಗಳ ಹಿಂದೆ ಈ ಲೋಕದಲ್ಲಿ ತನ್ನ ಮರಣದ ಮೂಲಕ ನಮಗಾಗಿ ಏನು ಮಾಡಿದ್ದಾನೆ ಎಂಬದರ ಮೇಲಿರಬೇಕು. **25**

**11:25** ಪಾತ್ರೆಯಲ್ಲಿ, ದ್ರಾಕ್ಷಾರಸವಿತ್ತು ಮತ್ತಾಯ 26:28 ರ ಪ್ರಕಾರ ಅದು ಯೇಸು ಕ್ರಿಸ್ತನ ರಕ್ತದ ಗುರುತಾಗಿದೆ. ಹೊಸ ಒಡಂಬಡಿಕೆಯನ್ನು ಸ್ಥಾಪಿಸಲು ಅದನ್ನು ಸುರಿಸಲಾಗಿದೆ (ಅಲ್ಲಿನ ನೋಟ್ಸ್ ನೋಡಿರಿ). ಇಲ್ಲಿನ ಪದಗಳ ಜೋಡಣೆಯನ್ನು ಗಮನಿಸಿರಿ: “ಈ ಪಾತ್ರೆಯು ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ.” ಪಾತ್ರೆ ಹೊಸ ಒಡಂಬಡಿಕೆಯಲ್ಲ ಎಂಬದು ಇಲ್ಲಿ ದೃಢವಾದ ಸಂಗತಿಯಾಗಿದೆ. ಪಾತ್ರೆ ಕೇವಲ ಪಾತ್ರೆಯಾಗಿದೆ, ಆದರೆ ಯೇಸು ಕ್ರಿಸ್ತನ ರಕ್ತದಿಂದ ಅದು ಹೊಸ ಒಡಂಬಡಿಕೆಯ ಗುರುತಾಗಿದೆ. 24ನೇ ವಚನದಲ್ಲಿ ಬರೆಯಲ್ಪಟ್ಟಿರುವ ರೊಟ್ಟಿಯು ಯೇಸು ಕ್ರಿಸ್ತನ ದೇಹದ ಬಗ್ಗೆ ಮಾತನಾಡುತ್ತದೆ ಎಂಬದನ್ನು ನಾವು ಹೀಗೆಯೇ ಅರ್ಥಮಾಡಿಕೊಳ್ಳಬೇಕು. ಅದು ನಿಜವಾಗಿಯೂ ಆತನ ದೇಹವಲ್ಲ ಬದಲಾಗಿ ದೇಹದ ಗುರುತಾಗಿದೆ. ಪೌಲನು ಅವರಿಗೆ ಪಾತ್ರೆಯಿಂದ ಕುಡಿಯಿರಿ ಮತ್ತು ರೊಟ್ಟಿಯನ್ನು ತಕ್ಕೊಂಡು ತಿನ್ನಿರಿ ಕಲಿಸುತ್ತಾ ಇರುವದನ್ನು ಗಮನಿಸಿರಿ. ಕರ್ತನ ಭೋಜನವನ್ನು ಸರಿಯಾಗಿ ಆಚರಿಸಬೇಕಾದರೆ ಈ ಎರಡೂ ಕಾರ್ಯಗಳನ್ನು ಮಾಡಬೇಕು. **26**

**11:26** “*ಎಷ್ಟು ಸಾರಿ*”– ಎಷ್ಟು ಸಾರಿ ವಿಶ್ವಾಸಿಗಳು ಕರ್ತನ ಭೋಜನವನ್ನು ಆಚರಿಸಬೇಕೆಂದು ಪೌಲನು ಹೇಳಿಲ್ಲ.

“*ಪ್ರಸಿದ್ಧಿಪಡಿಸುತ್ತೀರಿ*”– ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಸಹಜವಾಗಿ ಸುವಾರ್ತೆ ಸಾರುವ ಸಮಯದಲ್ಲಿ ಉಪಯೋಗಿಸಲಾಗುತ್ತದೆ. ವಿಶ್ವಾಸಿಗಳು ಕರ್ತನ ಭೋಜನವನ್ನು ಆಚರಿಸುವದೆಂದರೆ, ಕೇವಲ ಮಾತುಗಳಲ್ಲಿ ಮಾತ್ರವಲ್ಲ ಬದಲಾಗಿ ಕ್ರಿಯೆಗಳಲ್ಲಿ ತೋರಿಸಬೇಕಾದ ಸುವಾರ್ತಾ ಸಂದೇಶಕ್ಕೆ ಸಮಾನವಾದದ್ದಾಗಿದೆ. ಯೇಸು ಕ್ರಿಸ್ತನು ಪಾಪಿಗಳಿಗಾಗಿ ತನ್ನ ಪ್ರಾಣವನ್ನು ಕೊಟ್ಟನು ಎಂಬದೇ ಈ ಸಂದೇಶದ ವಿಷಯವಾಗಿದೆ. ಯೇಸು ಕ್ರಿಸ್ತನ ಎರಡನೇ ಬರೋಣದ ತನಕ ಇದನ್ನು ಪ್ರಸಿದ್ಧಿಪಡಿಸುವ ಕಾರ್ಯವು ಮುಂದುವರೆಯಬೇಕೆಂಬದು ದೇವರ ಉದ್ದೇಶವಾಗಿದೆ. **27**

**11:27** ಪೌಲನು ಗಂಭೀರವಾದ ಈ ಎಚ್ಚರಿಕೆಯನ್ನು ಯಾರಿಗೆ ಕೊಡುತ್ತಾ ಇದ್ದಾನೆ? "ಅಯೋಗ್ಯವಾದ ರೀತಿಯಲ್ಲಿ" ಎಂದರೆ ಏನು? ನಾನು ಇದರಲ್ಲಿ ಭಾಗಿಯಾಗಲು ಯೋಗ್ಯನಲ್ಲ ಎಂದು ಒಬ್ಬನು ತನ್ನ ಕುರಿತಾಗಿಯೇ ಯೋಚಿಸುವದಾಗಿದೆ. ಇದು ಪಾಪದ ಮನೋಭಾವನೆಯಲ್ಲಿ ಅಥವಾ ಒಬ್ಬನು ನಾನು ಪಾಪ ಮಾಡಿದ್ದೇನೆ ಎಂಬ ತಿಳುವಳಿಕೆಯಿಂದ ಪಾಲುತೆಗೆದುಕೊಳದೆ ಇರುವದಾಗಿದೆ (ಒಂದುವೇಳೆ ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವ ಮೊದಲು ಆ ಪಾಪವನ್ನು ಅರಿಕೆ ಮಾಡಿಕೊಂಡಿದ್ದರೆ ತೊಂದರೆಯಿಲ್ಲ). 18-22 ವಚನಗಳು ಅಯೋಗ್ಯವಾದ ಒಂದು ಕಾರ್ಯವನ್ನು ಪ್ರಕಟಿಸುತ್ತವೆ. ಕರ್ತನ ಭೋಜನದಲ್ಲಿ ನಿರ್ಲಕ್ಷ್ಯದಿಂದ, ಭಯಭಕ್ತಿಯಿಲ್ಲದೆ, ಅದರ ಅರ್ಥವನ್ನು ನೆನಪುಮಾಡಿಕೊಳ್ಳದೆ, ಅಳವಡಿಸಿಕೊಳ್ಳುವದು, ಅಯೋಗ್ಯವಾಗಿ ಪಾಲುತೆಗೆದುಕೊಳ್ಳುವದಾಗಿದೆ. ಮತ್ತು ಅಯೋಗ್ಯವಾದ ರೀತಿಯಲ್ಲಿ ಪಾಲು ತೆಗೆದುಕೊಳ್ಳುವದು ಯೇಸು ಕ್ರಿಸ್ತನ ದೇಹ ಹಾಗೂ ರಕ್ತಕ್ಕೆ ವಿರುದ್ಧ ಮಾಡುವ ಪಾಪವಾಗಿದೆ. ಅಂದರೆ ಆತನ ದೇಹ ಮತ್ತು ರಕ್ತದ ಗುರುತುಗಳಿಗೆ ಅಗೌರವವನ್ನು ತೋರುವದಾಗಿದೆ ಮತ್ತು ಇದೆಲ್ಲವೂ ಆತನ ದೇಹ ಹಾಗೂ ರಕ್ತಕ್ಕೆ ಅವಮಾನಿಸುವದಾಗಿದೆ. ಇದು ಸಣ್ಣ ಪಾಪವಲ್ಲ. **28**

**11:28** ಯೋಗ್ಯವಾದ ರೀತಿಯಲ್ಲಿ ಪಾಲು ತೆಗೆದುಕೊಳ್ಳಲು ಹೃದಯ ಮತ್ತು ಮನಸ್ಸು ಸಿದ್ಧವಾಗಿರಬೇಕು. ಆದ್ದರಿಂದ ವಿಶ್ವಾಸಿಗಳು ತಮ್ಮ ಹೊರಗಿನ ಜೀವಿತವನ್ನು ಮತ್ತು ಒಳಗಿನ ಪರಿಸ್ಥಿತಿಯನ್ನು ಪಾಲುತೆಗೆದುಕೊಳ್ಳುವ ಮೊದಲು ಪರೀಕ್ಷಿಸಿಕೊಳ್ಳಬೇಕು. ಎಲ್ಲಾ ರೀತಿಯ ಪಾಪ, ಭಯಭಕ್ತಿಯಿಲ್ಲದ ಕಾರ್ಯ, ಎಲ್ಲಾ ರೀತಿಯ ಕೆಟ್ಟ ಆಲೋಚನೆಗಳು ತೆಗೆದುಹಾಕಬೇಕು ಮತ್ತು ಬಿಟ್ಟುಬಿಡಬೇಕು. ಇದಲ್ಲದೆ ಅವನಾಗಲಿ ಅಥವಾ ಅವಳಾಗಲಿ ಕರ್ತನ ಭೋಜನದ ಅರ್ಥವನ್ನು ತಿಳಿದುಕೊಳ್ಳಬೇಕು ಮತ್ತು ಅದರಲ್ಲಿ ಪಾಲು ತೆಗೆದುಕೊಳ್ಳುವ ಕಾರಣವನ್ನು ಅರಿತುಕೊಳ್ಳಬೇಕು. **29**

**11:29** *"ಕರ್ತನ ದೇಹವೆಂದು ವಿವೇಚಿಸದೆ"*– ಎರಡು ರೀತಿಯ ಅರ್ಥಗಳನ್ನು ಹೊಂದಿದೆ. ಇದರ ಅರ್ಥ ಕರ್ತನ ಭೋಜನದ ಅರ್ಥವನ್ನು ತಿಳಿದುಕೊಳ್ಳದೆ ಇರುವದು, ಇದು ಇತರೆ ಭೋಜನದಂತೆ ಅಲ್ಲ ಎಂಬದನ್ನು ಅರಿತುಕೊಳ್ಳಲು ವಿಫಲರಾಗುವದು (ಕೊರಿಂಥದವರು ಈ ವಿಷಯದಲ್ಲಿ ವಿಫಲರಾಗಿದ್ದರು). ಅಥವಾ ನಿಜವಾದ ವಿಶ್ವಾಸಿಗಳೆಲ್ಲರೂ ಸೇರಿ ಕ್ರಿಸ್ತನ ದೇಹವಾಗುತ್ತಾರೆ ಎಂಬದನ್ನು ಗುರುತಿಸಿಕೊಳ್ಳದಿರುವದಾಗಿದೆ (10:17; 12:12-13. ಕೊರಿಂಥದವರು ತಮ್ಮ ಭಿನ್ನಾಭಿಪ್ರಾಯಗಳು ಮತ್ತು ಜಗಳಗಳಿಂದ ಇದರಲ್ಲಿಯೂ ಸೋಲುತ್ತಾ ಇದ್ದರು).

*"ನ್ಯಾಯತೀರ್ಪು"*– ದೇವರು ಕೊಡುವ ನಿತ್ಯಶಿಕ್ಷೆ ಈತನ ಮಾತುಗಳ ಅರ್ಥವಲ್ಲ. ಇದರ ಅರ್ಥ ದೇವರು ಸಂತೋಷಿಸದೆ ಇರುವದು ಮತ್ತು ಆತನ ಶಿಕ್ಷಾಹಸ್ತವಾಗಿದೆ, 30ನೇ ವಚನವು

ಇದನ್ನು ಸ್ಪಷ್ಟಪಡಿಸುತ್ತದೆ. **30**

**11:30** ಅವರು ತಾವಾಗಿಯೇ ಈ ನ್ಯಾಯತೀರ್ಪನ್ನು ತಮ್ಮ ಮೇಲೆ ಬರಮಾಡಿಕೊಳ್ಳುವವರಾಗಿದ್ದಾರೆ. ಅವರು ಸೇರು ಬರುವಾಗ ಆಗುತ್ತಿದ್ದ ತೊಂದರೆಗಳಲ್ಲಿ ಇದೂ ಒಂದಾಗಿದೆ (ವ 17). ತನ್ನ ಜನರು ಮರ್ಯಾದೆಯಿಂದ ಮತ್ತು ಕ್ರಮವಾಗಿ ನಡೆದುಕೊಳ್ಳಬೇಕೆಂದು ದೇವರು ಬಯಸುತ್ತಾನೆ (14:40). ಒಂದುವೇಳೆ ಅವರು ಹೀಗೆ ಜೀವಿಸುವದಿಲ್ಲವೆಂದರೆ, ದೇವರು ಅವರಿಗೆ ಯಾವುದು ಆಶೀರ್ವಾದವಾಗಿ ಇರಬೇಕೆಂದು ಬಯಸಿದನೋ ಅದು ನ್ಯಾಯತೀರ್ಪು ಹಾಗೂ ಶಿಕ್ಷೆಯಾಗಿ ಮಾರ್ಪಡುತ್ತದೆ.

"*ಅನೇಕರು ಸಾಯುತ್ತಾರೆ*"– ಹಾಗೆಯೇ 5:5 ಮತ್ತು ನೋಟ್ಸ್ ನೋಡಿರಿ. ಇಲ್ಲಿ "ಅನೇಕರು ಸಾಯುತ್ತಾರೆ" ಎಂದರೆ ಈ ಜೀವನದಿಂದ ನಿರ್ಗಮಿಸಿದ್ದಾರೆ (ಯೋಹಾನ 11:11-14 ರ ನೋಟ್ ನೋಡಿರಿ). **31**

**11:31** ವಚನ 28. ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಬೇಕು, ನನ್ನಲ್ಲಿ ಯಾವ ಅಥವಾ ನನ್ನ ಸ್ವಭಾವದಲ್ಲಿ ಯಾವ ತಪ್ಪುಗಳಿವೆ ಎಂಬದಾಗಿ ವಿಚಾರಿಸಿಕೊಳ್ಳಬೇಕು ಮತ್ತು ಅವುಗಳನ್ನು ಬಿಟ್ಟುಬಿಡಬೇಕು. ಆಗ ದೇವರು ನಮ್ಮನ್ನು ಶಿಕ್ಷಿಸುವ ಬದಲು ಕ್ಷಮಿಸುತ್ತಾನೆ. **32**

**11:32** ಇಬ್ರಿ 12:5-13. ನಾಶನದ ಮಾರ್ಗದಲ್ಲಿರುವ, ಪಾಪದಿಂದ ಲೋಕದೊಂದಿಗೆ ನಾವೂ ಶಿಕ್ಷೆಗೆ ಗುರಿಯಾಗದಂತೆ ನಮ್ಮನ್ನು ತಪ್ಪಿಸಲು ದೇವರು ಏನೇ ಕಾರ್ಯಗಳನ್ನು ಮಾಡಿದರೂ ನಾವು ಅವುಗಳನ್ನು ಸ್ವಾಗತಿಸಿಕೊಳ್ಳಬೇಕು. ಲೋಕದ ವಿಷಯದಲ್ಲಿ ನೋಟ್ಸ್‌ಗಾಗಿ ಯೋಹಾನ 15:18-19; ರೋಮಾ 12:2; ಯಾಕೋಬ 4:4; 1 ಯೋಹಾನ 2:16 ನೋಡಿರಿ. **33-34**

**11:33-34** ಪೌಲನು 29 ನೇ ವಚನದಲ್ಲಿ ಹೇಳಿರುವ ವಿಷಯವನ್ನು ಅರ್ಥಮಾಡಿಕೊಳ್ಳಲು ಈ ವಚನಗಳು ನಮಗೆ ಸಹಾಯ ಮಾಡುತ್ತವೆ. ಕರ್ತನ ಭೋಜನದ ಉದ್ದೇಶ ಮತ್ತು ಸಭೆಯ ಐಕ್ಯತೆಯನ್ನು ಯುಕ್ತವಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು.

# 12 1

**12:1** "*ಆತ್ಮೀಕ ವರಗಳು*"–ಎಂಬ ಒಂದೇ ವಿಷಯದಲ್ಲಿ ಮೂರು ಅಧ್ಯಾಯಗಳು ಇಲ್ಲಿಂದ ಪ್ರಾರಂಭವಾಗುತ್ತವೆ. ಈ ವರಗಳು ವಿಶ್ವಾಸಿಗಳು ತಾವಾಗಿಯೇ ಮಾಡಲು ಆಗದ ಕಾರ್ಯಗಳನ್ನು ಮಾಡಲು ಬೇಕಾದ ಸಾಮರ್ಥ್ಯಗಳನ್ನು ಕೊಡುತ್ತವೆ. ಆತ್ಮೀಕ ವರಗಳು ವಿಶ್ವಾಸಿಗಳನ್ನು ಆತ್ಮೀಕರನ್ನಾಗಿ ಮಾಡುವದಿಲ್ಲ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು. ಕೊರಿಂಥದಲ್ಲಿದ್ದ ವಿಶ್ವಾಸಿಗಳಲ್ಲಿ ಆತ್ಮೀಕ ವರಗಳಿದ್ದವು ಆದರೆ ಅವರು ಆತ್ಮೀಕತೆಯಿಲ್ಲದವರ ಹಾಗೆ ನಡೆದುಕೊಳ್ಳುತ್ತಾ ಇದ್ದರು ಮತ್ತು ಲೋಕದ ಜನರ ಹಾಗೆ ವರ್ತಿಸುತ್ತಾ ಇದ್ದರು (3:1-4). ಲೌಕಿಕರಾಗಿ, ಲೋಕದ ಮಾರ್ಗದಲ್ಲಿ ಜೀವಿಸುತ್ತಾ

ನನಗೆ ಆತ್ಮೀಕ ವರಗಳಿಗೆ ಅಥವಾ ಸಾಮರ್ಥ್ಯಗಳಿವೆ ಎಂದು ಹೆಚ್ಚಳಪಡುವದು ಎಂಥಾ ದುಃಖದ ವಿಷಯವಾಗಿದೆ! 12-14 ಅಧ್ಯಾಯಗಳಲ್ಲಿ ಪೌಲನು ಈ ವರಗಳ ಕುರಿತು ಕೆಳಗೆ ಕೊಡಲಾಗಿರುವ ಹನ್ನೊಂದು ವಿಷಯಗಳನ್ನು ಕಲಿಸಿದ್ದಾನೆ. ದೇವರಾತ್ಮನು ಅವರಿಗೆ ಕೊಡುತ್ತಾನೆ (12:4,7,11). ಅವುಗಳನ್ನು ಕೊಡಲಾಗುವದು ಮತ್ತು ಯೇಸು ಕ್ರಿಸ್ತನ ನಾಯಕತ್ವದಡಿಯಲ್ಲಿ ಅವುಗಳನ್ನು ಉಪಯೋಗಿಸಬೇಕು (12:3-5). ಪ್ರತಿಯೊಬ್ಬ ವಿಶ್ವಾಸಿಗೆ ಯಾವುದಾದರೊಂದು ವರ ಇದ್ದೇ ಇರುತ್ತದೆ (12:7,11). ವಿಶ್ವಾಸಿಗಳೆಲ್ಲರೂ ನಿರ್ದಿಷ್ಟವಾದ ಯಾವುದೋ ಒಂದು ವರವನ್ನು ಮಾತ್ರವೇ ಹೊಂದಿರುವದಿಲ್ಲ (12:29-30). ಎಲ್ಲಾ ವರಗಳು ಎಲ್ಲರ ಹಿತಕ್ಕಾಗಿ ಕೊಡಲ್ಪಟ್ಟಿವೆಯೇ ಹೊರತು ವೈಯಕ್ತಿಕ ಲಾಭಕ್ಕಾಗಿಯಲ್ಲ (12:25). ದೇವರ ಪ್ರೀತಿಯು ವಿಶ್ವಾಸಿಗಳಲ್ಲಿ ಕಾರ್ಯಮಾಡುವದು ಯಾವುದೇ ಒಂದು ವರಕ್ಕಿಂತಲೂ ಅಥವಾ ಎಲ್ಲಾ ವರಗಳಿಗಿಂತಲೂ ದೊಡ್ಡದಾಗಿದೆ (13:1-13). ವಿಶ್ವಾಸಿಗಳು ಆತ್ಮೀಕ ವರಗಳನ್ನು ಬಯಸುವವರಾಗಿರಬೇಕು (12:31; 14:1). ಪ್ರವಾದನಾ ವರವು ಎಲ್ಲಾ ವರಗಳಲ್ಲಿ ಪ್ರಮುಖವಾಗಿದೆ (14:1). ನನಗೆ ಇಂಥ ವರವಿದೆ ಎಂಬ ಕಾರಣಕ್ಕೆ ಯಾವನೂ ತನ್ನನ್ನು ಇತರರಿಗಿಂತ ಶ್ರೇಷ್ಠನೆಂದು ಭಾವಿಸಬಾರದು (4:7; 13:4; 12:21,25). ವರಗಳನ್ನು ಉಪಯೋಗಿಸುವದರಲ್ಲಿ ವಿಶ್ವಾಸಿಗಳು ಮರ್ಯಾದೆಯಿಂದ ಕ್ರಮವಾಗಿ ನಡೆದುಕೊಳ್ಳಬೇಕು (14:40). ಒಂದುವೇಳೆ ಪ್ರತಿಯೊಬ್ಬ ವಿಶ್ವಾಸಿಯು ಈ ಸತ್ಯಗಳನ್ನೆಲ್ಲಾ ತನ್ನ ಹೃದಯಕ್ಕೆ ತೆಗೆದುಕೊಳ್ಳುವದಾದರೆ, ಆತ್ಮೀಕ ವಿಷಯವಾಗಿ ಸಭೆಗಳನ್ನು ಬಾಧಿಸುತ್ತಿರುವ ಜಗಳಗಳು ಮತ್ತು ಭಿನ್ನಾಭಿಪ್ರಾಯಗಳು ಇರುತ್ತಾ ಇರಲಿಲ್ಲ. **2**

**12:2** ಅವರು ಕ್ರೈಸ್ತರಾಗುವ ಮೊದಲು ಕುರುಡರಾಗಿ, ಅಜ್ಞಾನಿಗಳ ಹಾಗೆ ವಿಗ್ರಹಗಳ ಬಳಿಗೆ ಹೋಗುತ್ತಾ ಇದ್ದರು. ಅವರಿಗೆ ಅವರೇನು ಮಾಡುತ್ತಾ ಇದ್ದಾರೆ ಅಥವಾ ಯಾಕೆ ಮಾಡುತ್ತಾ ಇದ್ದಾರೆ ಎಂಬದೇ ಗೊತ್ತಿರಲಿಲ್ಲ. ಕೆಲವು ಶಕ್ತಿಗಳು ಮತ್ತು ಪ್ರಭಾವಗಳು ಕಾರ್ಯಮಾಡುತ್ತಾ ಇದ್ದವು ಅದು ಅವರಿಗೆ ಗೊತ್ತಿರಲಿಲ್ಲ ಅಥವಾ ಅವುಗಳನ್ನು ಅವರು ಎದುರಿಸಲೂ ಇಲ್ಲ.

"*ಮೂಕ ವಿಗ್ರಹಗಳು*"– ಕೀರ್ತನೆ 115:4-7; ಹಬಕ್ಕೂಕ 2:18-19. **3**

**12:3** "*ಶಾಪಗ್ರಸ್ತನು*"– ಕೆಲವು ಯೆಹೂದ್ಯರು ಹೇಳುತ್ತಾ ಇದ್ದರು. ಯೇಸು ಕ್ರಿಸ್ತನು ದೇವದೂಷಕನು ಶಿಲುಬೆಯ ಮರಣ ಅವನಿಗೆ ತಕ್ಕ ಶಿಕ್ಷೆ ಎಂದು ಅವರು ಹೇಳುತ್ತಾ ಇದ್ದರು. ಅಂಥ ಜನರಲ್ಲಿ ದೇವರಾತ್ಮನು ಇರುವದಿಲ್ಲ ಎಂಬದಾಗಿ ಪೌಲನು ಹೇಳಿದ್ದಾನೆ. ಯೇಸುವೇ "ಕರ್ತನೆಂದು" –ಹೇಳುವದು ಯೆಹೋವಾ ದೇವರೇ ಮಾನವನಾಗಿ ಬಂದನು ಎಂಬದಾಗಿ ಹೇಳುವದಾಗಿದೆ. ಲೂಕ 2:11; ಫಿಲಿಪ್ಪಿ 2:10-11 ನೋಡಿರಿ. ಒಬ್ಬನೊಳಗೆ ದೇವರಾತ್ಮನು ಕಾರ್ಯ ಮಾಡುತ್ತಾ ಇದ್ದರೆ ಮಾತ್ರವೇ ಅವನು ನಂಬಿಕೆಯಿಂದ ಇದನ್ನು ಹೇಳಲು ಸಾಧ್ಯವಾಗುತ್ತದೆ. ಇತರರು ಅರ್ಥವಿಲ್ಲದ ಪದಗಳು ಮಾತ್ರವೇ ಹೇಳುವವರಾಗಿರುತ್ತಾರೆ. **4-6**

**12:4-6** ವಿಶ್ವಾಸಿಗಳೆಲ್ಲರಿಗೆ ಇರುವ ಮತ್ತು ಅವರು ದೇವರ ಸೇವೆಯಲ್ಲಿ

ಮಾಡಬಹುದಾದ ಕಾರ್ಯಗಳಿಗೆ ಕಾರಣವಾಗುವ ಒಂದು ಸಂಪನ್ಮೂಲದ ಬಗ್ಗೆ ಪೌಲನು ಹೇಳಿದ್ದಾನೆ (ಎಫೆ 4:3-7 ರೊಂದಿಗೆ ಹೋಲಿಸಿ ನೋಡಿರಿ). ತ್ರಯೇಕತ್ವದ ಮೂವರು ವ್ಯಕ್ತಿಗಳನ್ನು ನಾವು ಇಲ್ಲಿ ನೋಡಬಹುದು (ಮತ್ತಾಯ 3:16-17ರಲ್ಲಿ ತ್ರಯೇಕತ್ವದ ಕುರಿತಾದ ನೋಟ್ಸ್ ನೋಡಿರಿ). **7-11**

**12:7-11** ಯಾವುದೇ ಆತ್ಮೀಕ ವರವಾದರೂ (ಮತ್ತು ಕೇವಲ ಒಂದು ಮಾತ್ರವಲ್ಲ ಅಂದರೆ ಅದ್ಭುತಗಳನ್ನು ಮಾಡುವ ಶಕ್ತಿ ಅಥವಾ ಅನ್ಯಭಾಷೆಗಳನ್ನಾಡುವದು) ದೇವರಾತ್ಮನು ಒಬ್ಬ ವ್ಯಕ್ತಿಯಲ್ಲಿ ಕಾರ್ಯಮಾಡುತ್ತಾ ಇದ್ದಾನೆ ಎಂಬದಕ್ಕೆ ಪುರಾವೆಯಾಗಿದೆ. **7**

**12:7** ಎಲ್ಲಾ ವಿಶ್ವಾಸಿಗಳ ಹುದುವಾದ ಹಿತ ಪೌಲನ ಸತತವಾದ ಧ್ಯೇಯವಾಗಿದೆ (10:24,33; 14:5,26; ರೋಮಾ 14:19; 2 ಕೊರಿಂಥ 8:13-14).

"*ತೋರಿಬರುವ*"– ಅಂದರೆ ವಿಶ್ವಾಸಿಗಳ ದೇಹದೊಳಗಿರುವ ಪವಿತ್ರಾತ್ಮನು (6:19) ಆತ್ಮೀಕ ವರಗಳ ಮೂಲಕ ತನ್ನ ಪ್ರಸನ್ನತೆಯನ್ನು ಪ್ರಕಟಪಡಿಸುತ್ತಾನೆ. **8-10**

**12:8-10** ಈ ಪಟ್ಟಿಯಲ್ಲಿ ಎಲ್ಲಾ ಆತ್ಮೀಕ ವರಗಳನ್ನು ತಿಳಿಸಲಾಗಿಲ್ಲ. ಪೌಲನು ಇನ್ನೂ ಕೆಲವು ವರಗಳನ್ನು ವ 28 ಮತ್ತು ರೋಮಾ 12:6-8 ರಲ್ಲಿ ತಿಳಿಸಿದ್ದಾನೆ. **8**

**12:8** "*ಜ್ಞಾನವಾಕ್ಯ*"– ಇದರ ಅರ್ಥ ಇತರರೊಂದಿಗೆ ಜ್ಞಾನದಿಂದ ಸಹಾಯವಾಗುವ ರೀತಿಯಲ್ಲಿ ಮಾತನಾಡುವದು. ಪೌಲನು ಕೊರಿಂಥದವರಿಗೆ ಬರೆದಿರುವ ಪತ್ರಿಕೆಯ ವಿವಿಧ ಭಾಗಗಳಲ್ಲಿ "ಜ್ಞಾನ" ಮತ್ತು "ತಿಳುವಳಿಕೆ" –ಪದಗಳನ್ನು ಉಪಯೋಗಿಸಿರುವದನ್ನು ನಾವು ಅರ್ಥಮಾಡಿಕೊಳ್ಳಬೇಕು. ಜ್ಞಾನ ಎಂದರೆ ಮಾನುಷಿಕ ಜ್ಞಾನವಲ್ಲ, ಬದಲಾಗಿ ಯೇಸು ಕ್ರಿಸ್ತನು ಮತ್ತು ಆತನ ಶಿಲುಬೆಯ ಜ್ಞಾನವಾಗಿದೆ (1:17-24). ಅದು ಸುವಾರ್ತೆಯ ವಿಷಯದಲ್ಲಿ ದೇವರು ಕೊಟ್ಟಿರುವ ಪ್ರಕಟನೆಯಾಗಿದೆ ಮತ್ತು ಆಳವಾದ ಸತ್ಯಗಳು ಅದಕ್ಕೆ ಹೊಂದಿಕೊಂಡಿವೆ (2:6). ದೇವರಾತ್ಮನು ಕೆಲವರಿಗೆ (ಅಪೊಸ್ತಲರು ಇದನ್ನು ಸಂಪೂರ್ಣವಾಗಿ ಹೊಂದಿದ್ದರು) ಈ ಜ್ಞಾನವನ್ನು ಅರ್ಥಮಾಡಿಕೊಳ್ಳುವ ಮತ್ತು ಅದನ್ನು ಇತರರಿಗೆ ತಿಳಿಯಪಡಿಸುವ ಸಾಮರ್ಥ್ಯವನ್ನು ಕೊಡುತ್ತಾನೆ. "ತಿಳುವಳಿಕೆಯು" ಬಹುತೇಕ ಸಮಾನವಾಗಿದೆ, ಆದರೆ ನಿಖರವಾದ ಅರ್ಥವನ್ನು ಕೊಡುವದಿಲ್ಲ. ಇಲ್ಲಿ ಇದು ಜನರನ್ನು ಮತ್ತು ಪರಿಸ್ಥಿತಿಗಳನ್ನು ಅರ್ಥಮಾಡಿಕೊಂಡು, ಇತರರನ್ನು ಯೇಸು ಕ್ರಿಸ್ತನ ಹಾಗೂ ಆತನ ಸತ್ಯಗಳ ಪೂರ್ಣವಾದ ತಿಳುವಳಿಕೆಗೆ ನಡೆಸಲು ಬೇಕಾದ ಸಾಮರ್ಥ್ಯವನ್ನು ಕೊಡುತ್ತದೆ ಎಂಬದನ್ನೂ ಸೇರಿಸಿಕೊಳ್ಳಬಹುದು. ನಿಸ್ಸಂದೇಹವಾಗಿ, ಇಂಥ ವರವಿದೆ, ಆದರೆ ಇದನ್ನೇ ಇಲ್ಲಿ "ತಿಳುವಳಿಕೆಯ ಸಂದೇಶ" ಎಂಬದಾಗಿ ಕರೆಯಲಾಗಿದೆಯೋ ಎಂಬದು ಗೊತ್ತಿಲ್ಲ. ಇತರೆ ಜನರು ತಮ್ಮ ವೈಯಕ್ತಿಕ ಜೀವಿತದಲ್ಲಿ ಏನು ಮಾಡಬೇಕು ಎಂಬ ವಿಷಯದಲ್ಲಿ ದೇವರ ಪ್ರಕಟನೆಯನ್ನು ತಿಳಿಯಲು ಇದು ವಿಶೇಷ ಸಾಮರ್ಥ್ಯವಾಗಿದೆ ಎಂದು ನಾವು ಖಂಡಿತವಾಗಿಯೂ ತಿಳಿಯಬಾರದು (ಆದರೆ ಕೆಲವರು ಇಂದಿನ ದಿನಗಳಲ್ಲಿ ನಮಗೆ ಅಂಥ

ಸಾಮರ್ಥ್ಯವಿದೆ ಎಂದು ಹೇಳುತ್ತಾರೆ). ಜೀವನದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವ ವಿಷಯಕ್ಕೆ ಬರುವಾಗ, ದೇವರ ವಾಕ್ಯಗಳಲ್ಲಿ ಕೊಡಲಾಗಿರುವ ತತ್ವಗಳನ್ನು ಅರ್ಥಮಾಡಿಕೊಳ್ಳಲು ಪ್ರತಿಯೊಬ್ಬ ವಿಶ್ವಾಸಿಯೂ ಪ್ರಯತ್ನಿಸಬೇಕು, ಮಾರ್ಗದರ್ಶನಕ್ಕಾಗಿ ದೇವರನ್ನು ಮಾತ್ರವೇ ಆತುಕೊಳ್ಳಬೇಕು ಮತ್ತು (ಒಂದುವೇಳೆ ತನಗೆ ಬೇಕಿದ್ದರೆ, ತನ್ನ ಸ್ನೇಹಿತರ ಸಲಹೆಗಳನ್ನು ಕೇಳಿದ ತರುವಾಯ) ಆ ಮಾರ್ಗದರ್ಶನಕ್ಕಾಗಿ ನೇರವಾಗಿ ದೇವರ ಬಳಿಗೇ ಹೋಗಬೇಕು. "ತಿಳುವಳಿಕೆಯ" ವಿಷಯವಾಗಿ 1:5; 13:2,8; 14:6; 2 ಕೊರಿಂಥ 4:6; ಎಫೆ 4:13; ಫಿಲಿಪ್ಪಿ 1:9; 3:8; ಕೊಲೊ 1:9-10; 2:3; 3:10; 2 ಪೇತ್ರ 3:18 ನೋಡಿರಿ. **9**

**12:9** ಪ್ರತಿಯೊಬ್ಬ ವಿಶ್ವಾಸಿಯಲ್ಲಿರುವ ನಂಬಿಕೆಯು ದೇವರಿಂದ ದೊರಕಿರುವ ವರವಾಗಿದೆ (ಎಫೆ 2:8-9; ಫಿಲಿಪ್ಪಿ 1:29). ಆದರೆ ಪವಿತ್ರಾತ್ಮನು ವಿಶೇಷವಾದ ನಂಬಿಕೆಯನ್ನು ಕೊಡುತ್ತಾನೆ ಅಥವಾ ಕೆಲವು ವಿಶ್ವಾಸಿಗಳಿಗೆ ಬಹಳ ನಂಬಿಕೆಯನ್ನು ಕೊಡುತ್ತಾನೆ (ರೋಮಾ 12:3 ರೊಂದಿಗೆ ಹೋಲಿಸಿ ನೋಡಿರಿ). ನಂಬಿಕೆಯಿಲ್ಲದೆ ಹೋದರೆ ಮಾಡಲು ಸಾಧ್ಯವಾಗದ ಕಾರ್ಯಗಳನ್ನು ಅವರು ಮಾಡುವಂತೆ ಅದು ಅವರನ್ನು ಬಲಪಡಿಸುತ್ತದೆ.

"*ನಾನಾ ರೋಗಗಳನ್ನು ವಾಸಿಮಾಡುವ ವರ*"– ದೇವರ ಶಕ್ತಿಯಿಂದ ಜನರನ್ನು ಗುಣಪಡಿಸುವ ಸಾಮರ್ಥ್ಯ. "ವರಗಳು" – ಬಹುವಚನವನ್ನು ಗಮನಿಸಿರಿ. ಎಲ್ಲಾ ರೀತಿಯ ರೋಗಗಳನ್ನು ಒಂದೇ ತರಹದ ವರದಿಂದ ವಾಸಿ ಮಾಡಲು ಆಗುವದಿಲ್ಲ ಎಂಬದಾಗಿ ಅನ್ನಿಸುತ್ತದೆ. **10**

**12:10** "*ಮಹತ್ತುಗಳನ್ನು ಮಾಡುವದು*"– ರೋಗಗಳನ್ನು ವಾಸಿ ಮಾಡುವದನ್ನು ಬಿಟ್ಟು ಇತರೆ ಮಹತ್ತುಗಳನ್ನು ಮಾಡುವ ಸಾಮರ್ಥ್ಯವನ್ನು ತಿಳಿದುಕೊಳ್ಳಬೇಕು, ಯಾಕಂದರೆ ಈ ಶಕ್ತಿಗಳನ್ನು "ಬೇರೆಯವರಿಗೆ" –ಕೊಡಲಾಗಿದೆ. ಅವುಗಳು ಯಾವ ಮಹತ್ತುಗಳು ಎಂಬದನ್ನು ಪೌಲನು ವಿವರಿಸಿಲ್ಲ. ಆದರೆ ಅವುಗಳು ವಿಶ್ವಾಸಿಗಳೆಲ್ಲರ ಹಿತಕ್ಕಾಗಿ ಕೊಡಲಾಗಿವೆ ಎಂಬ ದೃಢತೆ ನಮಗಿರಬೇಕು (ವ 7), ಯಾಕಂದರೆ ಈ ವರವಿರುವ ವ್ಯಕ್ತಿಯು ಪ್ರಖ್ಯಾತನಾಗಲು ಕೊಡಲ್ಪಡುವದಿಲ್ಲ.

"*ಪ್ರವಾದನೆ*"– ದೇವರಿಂದ ಸಂದೇಶವನ್ನು ತಿಳಿದುಕೊಂಡು ಪವಿತ್ರಾತ್ಮನ ಸಹಾಯದಿಂದ ತಿಳಿಯಪಡಿಸುವ ಸಾಮರ್ಥ್ಯ. ಸಂದೇಶವು ಭವಿಷ್ಯಕ್ಕೆ ಸಂಬಂಧಪಟ್ಟಿರಬಹುದು ಅಥವಾ ಸಂಬಂಧಪಡದೆ ಇರಬಹುದು. ಸತ್ಯಾಸತ್ಯಗಳನ್ನು ವಿವೇಚಿಸುವ ವರವು ಮಾತನಾಡುತ್ತಿರುವವನು ಅಥವಾ ಪ್ರವಾದಿಸುತ್ತಾ ಇರುವವನು ಅದನ್ನು ದೇವರ ಸಹಾಯದಿಂದ ಮಾಡುತ್ತಾ ಇದ್ದಾನೋ ಅಥವಾ ಇಲ್ಲವೋ ಎಂಬದನ್ನು ತಿಳಿದುಕೊಳ್ಳುವ ಸಾಮರ್ಥ್ಯವಾಗಿದೆ. ಪ್ರತಿಯೊಬ್ಬರೂ ದೇವರಿಂದ ಪ್ರೇರಣೆ ಹೊಂದಿರುವದಿಲ್ಲ. ಅವನು ಅಥವಾ ಅವಳು ದುರಾತ್ಮನಿಂದ ಪ್ರೇರಣೆ ಹೊಂದಿರಬಹುದು ಅಥವಾ ತಮ್ಮ ಸ್ವಂತ

ಆತ್ಮದಿಂದಲೇ ಪ್ರೇರಣೆಯನ್ನು ಹೊಂದಿರಬಹುದು. 14:29; 1 ಯೋಹಾನ 4:1; 1 ಥೆಸ 5:20-21; ಯೆರೆ 14:14 ನೋಡಿರಿ. "ಭಾಷೆ" ಅಥವಾ "ವಾಣಿಗಳನ್ನಾಡುವದು" (ಗ್ಲೋಸಾಯ್ ಎಂಬ) ಈ ಗ್ರೀಕ್ ಪದವು ಗ್ರೀಕ್ ಹೊಸ ಒಡಂಬಡಿಕೆಯಲ್ಲಿ 50 ಸಲ ಬರೆಯಲ್ಪಟ್ಟಿದೆ (12-14 ಅಧ್ಯಾಯಗಳಲ್ಲಿ 21 ಸಲ ಬರೆಯಲ್ಪಟ್ಟಿದೆ). ಹದಿನೆಂಟು ಸಲ ಇದು ಶಾರೀರಿಕ ನಾಲಿಗೆಯನ್ನು ಸೂಚಿಸುತ್ತದೆ. ಬೇರೆ ಸಮಯಗಳಲ್ಲಿ ಅದು ಭಾಷೆ ಅಥವಾ ಬೇರೆಯದನ್ನು ಸೂಚಿಸುತ್ತದೆ. ಅಪೊ 2ನೇ ಅಧ್ಯಾಯದಲ್ಲಿ ಅಪೊಸ್ತಲರು ಅನ್ಯಭಾಷೆಯಲ್ಲಿ ಮಾತನಾಡಿದಾಗ ಸಹಜವಾದ ಮಾನವರ ಭಾಷೆಯಲ್ಲಿಯೇ ಅವರು ಮಾತನಾಡಿದರಾದರೂ ಅದು ಅವರಿಗೆ ಗೊತ್ತಿರಲಿಲ್ಲ ಆದರೆ ಅವರ ಮಾತುಗಳನ್ನು ಕೇಳಿದವರಿಗೆ ಅದು ತಿಳಿದಿತ್ತು (ಅಪೊ 2:4,6,8,11. ಹಾಗೆಯೇ ಅಪೊ 10:46 ರ ನೋಟ್ಸ್ ನೋಡಿರಿ). ಪೌಲನು ಇಲ್ಲಿ 12-14 ಅಧ್ಯಾಯಗಳಲ್ಲಿ ವಾಣಿ ಎಂಬ ಪದವನ್ನು ವಿವಿಧ ಅರ್ಥದೊಂದಿಗೆ ಬಳಸಿದ್ದಾನೆಯೇ? ಕೆಲವರು ಹೀಗೆ ಅಂದುಕೊಳ್ಳುತ್ತಾರೆ ಮತ್ತು ಕೆಲವರು ಹೀಗೆ ಅಂದುಕೊಳ್ಳುವದಿಲ್ಲ. ಎಲ್ಲಾ ವಿಶ್ವಾಸಿಗಳ ತೃಪ್ತಿಗಾಗಿ ಈ ವಿಷಯವನ್ನು ಯಾವ ಕಡೆಗೂ ತೀರ್ಮಾನಿಸಲಾಗಿಲ್ಲ (14 ನೇ ಅಧ್ಯಾಯದಲ್ಲಿ ಪೌಲನ ಭಾಷೆಯಲ್ಲಿ ಅಸ್ಪಷ್ಟವಾದ ಭಾವನೆಗಳು ಇರುವದರಿಂದ ಅನೇಕ ವಿಷಯಗಳು ಸಂದೇಹದಲ್ಲಿಯೇ ಇವೆ). ಆದರೆ ಸತ್ಯವೇದದ ಉಳಿದ ಎಲ್ಲಾ ಭಾಗಗಳಲ್ಲಿ ಒಂದೇ ಅರ್ಥದಲ್ಲಿ "ವಾಣಿ" ಎಂಬ ಪದವನ್ನು ಉಪಯೋಗಿಸಿ 1 ಕೊರಿಂಥ ಪತ್ರಿಕೆಯ ಈ ಅಧ್ಯಾಯಗಳಲ್ಲಿ ಮಾತ್ರ ಬೇರೆ ರೀತಿಯಾಗಿ ಉಪಯೋಗಿಸಲಾಗಿದೆ ಎಂಬದಾಗಿ ಹೇಳಿದರೆ ಅದು ವಿಚಿತ್ರವೆನಿಸುವದಿಲ್ಲವೇ? ಆದರೆ ಪೌಲನು ವಾಣಿಯನ್ನಾಡುವ ವರದ ಬಗ್ಗೆ ಹೇಳಿರುವ ಅರ್ಥ ಏನೇ ಆಗಿದ್ದರೂ ವಿಶ್ವಾಸಿಗಳೆಲ್ಲರಿಗೂ ಈ ವರ ಇರುವದಿಲ್ಲ ಯಾಕಂದರೆ ರೋಗಗಳನ್ನು ವಾಸಿಮಾಡುವ ಅಥವಾ ಮಹತ್ತುಗಳನ್ನು ಮಾಡುವ ಅಥವಾ ಇತರೆ ವರಗಳು ಸಹ ಕೊಡಲ್ಪಡುವವುಗಳಾಗಿವೆ. "ಬೇರೆಯವರಿಗೆ" ಎಂಬ ಪದ ಇದನ್ನು ಸೂಚಿಸುತ್ತದೆ. ಹಾಗೆಯೇ ವ 28 ಸಹ ನೋಡಿರಿ. ವಿಶ್ವಾಸಿಯು ದೀಕ್ಷಾಸ್ನಾನ ಹೊಂದಿದ್ದಾನೆ ಅಥವಾ ದೇವರಾತ್ಮನಿಂದ ತುಂಬಿಸಲ್ಪಟ್ಟಿದ್ದಾನೆ ಎಂಬದಕ್ಕೆ ಈ ವರವು ಗುರುತಲ್ಲ ಮತ್ತು ಬೇರೆಯಾವುದೇ ಆತ್ಮೀಕ ವರಗಳಿಗಿಂತ ಇದು ಒಬ್ಬ ವ್ಯಕ್ತಿಯಲ್ಲಿ ಪ್ರಸಿದ್ಧಿಯಾಗುವ ಪವಿತ್ರಾತ್ಮನಿಗಿಂತ ಹೆಚ್ಚಿನದಲ್ಲ. "ವಾಣಿಗಳನ್ನು ವಿವರಿಸುವದು" "ಅನ್ಯಭಾಷೆಯಲ್ಲಿ" ಹೇಳಲಾಗುವದನ್ನು ಅರ್ಥಮಾಡಿಕೊಳ್ಳಲು ಮತ್ತು ಕೇಳುಗರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಯಪಡಿಸುವ ಸಾಮರ್ಥ್ಯವಾಗಿದೆ. **11**

**12:11** ವಚನ 7. ದೇವರಾತ್ಮನು ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಪ್ರತಿಯೊಬ್ಬರಿಗೆ ಯಾವ ವರ ಅಥವಾ ವರಗಳನ್ನು ಕೊಡಬೇಕು ಎಂಬದನ್ನು ಸಂಪೂರ್ಣವಾಗಿ ಬಲ್ಲವನಾಗಿದ್ದಾನೆ. ಆತನು ಈ ವರಗಳನ್ನು ತನ್ನ ಸ್ವಂತ ಜ್ಞಾನ ಹಾಗೂ ಪ್ರೀತಿಯುಳ್ಳ ಚಿತ್ತದ ಮೇರೆಗೆ ಕೊಡುತ್ತಾನೆ (ಅಥವಾ ಅವುಗಳನ್ನು ತಡೆಹಿಡಿಯುತ್ತಾನೆ). ನಮಗೆ ಇಂಥದ್ದೇ

ನಿರ್ದಿಷ್ಟವಾದ ವರವನ್ನು ಕೊಡು ಎಂದು ನಾವು ಆತನನ್ನು ಒತ್ತಾಯಪಡಿಸಲು ಆಗುವದಿಲ್ಲ. ಆತನನ್ನು ಒತ್ತಾಯಪಡಿಸಲು ನಾವು ಪ್ರಯತ್ನಿಸಬಹುದು ಮತ್ತು ಆತನು ನಮಗೆ ಕೊಟ್ಟಿದ್ದಾನೆ ಎಂಬದಾಗಿ ನಟಿಸಲೂ ಬಹುದು. ನಾವು ಆಸಕ್ತಿಯಿಂದ ಉತ್ತಮವಾದ ವರಗಳನ್ನೇ ಬಯಸಬೇಕು (ವ 31), ಆತನು ಏನನ್ನು ತೀರ್ಮಾನಿಸಿ ಕೊಡುತ್ತಾನೋ ಅದನ್ನು ಯಾವುದೇ ಆಕ್ಷೇಪಣೆಯಿಲ್ಲದೆ ಅಂಗೀಕರಿಸಿಕೊಳ್ಳಬೇಕು. **12-13**

**12:12-13** ಯೋಹಾನ 17:21-23; ಎಫೆ 1:22-23; 4:4; 5:28-30. ವಿಶ್ವಾಸಿಗಳೆಲ್ಲರೂ ಎಲ್ಲಿಯೇ ಇರಲಿ ಅಥವಾ ಹೇಗೇ ಇರಲಿ ಮತ್ತು ಅವರಿಗೆ ಯಾವುದೇ ರೀತಿಯ ಆತ್ಮೀಕ ವರಗಳು ಇರಲಿ ಅಥವಾ ಇಲ್ಲದೆ ಇರಲಿ ಅವರೆಲ್ಲರಿಂದ ಉಂಟಾಗುವ ನಿಜವಾದ ಸಭೆಯ ಬಗ್ಗೆ ಪೌಲನು ಇಲ್ಲಿ ಮಾತನಾಡುತ್ತಾ ಇದ್ದಾನೆ. 13 ನೇ ವಚನದಲ್ಲಿ ಇರುವ "ನಾವು" ಎಂದರೆ ದೇವರಾತ್ಮನಿಂದ ಹುಟ್ಟಿರುವ, ಯೇಸು ಕ್ರಿಸ್ತನ ವಿಶ್ವಾಸಿಗಳು (ಯೋಹಾನ 1:12-13; 3:3-8). **13**

**12:13** *"ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ"*– ಆತ್ಮನಲ್ಲಿ ಎಂಬದಾಗಿ ಭಾಷಾಂತರ ಮಾಡಲಾಗಿರುವ ಗ್ರೀಕ್ ಪದ ಮತ್ತಾಯ 3:11 ರಲ್ಲಿ ಮತ್ತು ಅಪೊ 1:5 ರಲ್ಲಿ ಉಪಯೋಗಿಸಲಾಗಿರುವ ಪದ ಒಂದೇ ಆಗಿದೆ. ಇದನ್ನು ಮನವರಿಕೆ ಮಾಡಿಕೊಳ್ಳುವದು ಪ್ರಾಮುಖ್ಯವಾಗಿದೆ. ಈ ಪದದ ಅರ್ಥ, "ನಲ್ಲಿ" "ನೊಂದಿಗೆ" ಅಥವಾ "ಯಿಂದ". ಆತ್ಮನಲ್ಲಿ ದೀಕ್ಷಾಸ್ನಾನವಿಲ್ಲದೆ ಹೋದರೆ, ಪೌಲನು ಹೇಳುವ ಪ್ರಕಾರ, ಪ್ರತಿಯೊಬ್ಬ ವಿಶ್ವಾಸಿಯು, ಜನರು ಹೇಳುವ ಹಾಗೆ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದು ಮತ್ತು ತಮ್ಮನ್ನು ಕ್ರೈಸ್ತರೆಂದು ಕರೆದುಕೊಂಡು, ಸ್ಥಳೀಯ ಸಭೆಯ ಸದಸ್ಯರೆಂದು ಹೇಳಿಕೊಳ್ಳಬಹುದು, ಆದರೆ ಅವರು, ಆತನ ದೇಹವಾಗಿರುವ, ಒಂದೇ ನಿಜವಾದ ಸಭೆಯ ಭಾಗವಾಗಿರಲು ಆಗುವದಿಲ್ಲ. ಪೌಲನು ಇಲ್ಲಿ ಸಂಸ್ಥೆಯ ಬಗ್ಗೆ ಮಾತನಾಡುತ್ತಾ ಇಲ್ಲ, ಬದಲಾಗಿ ದೇವರಾತ್ಮನು ಜೀವಿಸುವ ಮತ್ತು ಕಾರ್ಯ ಮಾಡುವ ಸಜೀವವಾದ ದೇಹದ ಬಗ್ಗೆ ಮಾತನಾಡುತ್ತಾ ಇದ್ದಾನೆ. ದೇವರಾತ್ಮನ ಮೂಲಕ ಮಾತ್ರವೇ ಇದರೊಳಗೆ ಪ್ರವೇಶಿಸಲು ಸಾಧ್ಯವಾಗುತ್ತದೆ. ನಂಬಿಕೆಯಿಂದ ಕರ್ತನಾದ ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ಕರ್ತನು ಹಾಗೂ ರಕ್ಷಕನೆಂದು ಅಂಗೀಕರಿಸಿಕೊಂಡಿರುವ ಪ್ರತಿಯೊಬ್ಬನೂ "ನಾನು ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದಿದ್ದೇನೆ ಎಂದು ಹೇಳುವವನಾಗಿರಬೇಕು." ಸತತವಾಗಿ ಆತ್ಮನ ಪರಿಪೂರ್ಣತೆಯನ್ನು ಹೊಂದಬೇಕು ಎಂಬದು ಪ್ರತಿಯೊಬ್ಬನ ಗುರಿಯಾಗಿರಬೇಕು (ಎಫೆ 5:18). ಹಾಗೆಯೇ ಲೂಕ 11:13 ನೋಡಿರಿ.

*"ಒಂದೇ ಆತ್ಮ ಪಾನವಾಗಿ"*– ಯೋಹಾನ 7:37-39; 4:10,13,14 ನೋಡಿರಿ. ದೇವರಾತ್ಮನು ವಿಶ್ವಾಸಿಗಳನ್ನು ಕ್ರಿಸ್ತನ ದೇಹದೊಳಗೆ ಕರೆದುಕೊಂಡು ಬರುವದು ಮಾತ್ರವಲ್ಲ, ಆತನು ಅವರೊಳಗೆ ಬರುತ್ತಾನೆ ಮತ್ತು ಅವರೊಳಗೆ ಜೀವಿಸುತ್ತಾನೆ (6:19).

ಆತನು ಅವರೊಳಗೆ "ಜೀವಜಲವಾಗಿದ್ದು" ನಿತ್ಯಜೀವವನ್ನು ಉಕ್ಕಿಸುತ್ತಾನೆ. **14-26**

**12:14-26** ಕೊರಿಂಥದಲ್ಲಿರುವವರಿಗೆ ಎರಡು ತತ್ವಾನುಸಾರವಾದ ಪಾಠಗಳನ್ನು ಕಲಿಸುವದಕ್ಕಾಗಿ ಪೌಲನು ಮಾನವ ದೇಹವನ್ನು ನಿದರ್ಶನವಾಗಿ ಉಪಯೋಗಿಸಿದ್ದಾನೆ. ನಾವು ಇಂದು ಆ ಪಾಠಗಳನ್ನು ಬಹಳವಾಗಿ ಕಲಿತುಕೊಳ್ಳಬೇಕಾಗಿದೆ. ಮೊದಲನೆಯದಾಗಿ, ಮಾನವನ ಶರೀರದೊಳಗೆ ಅನೇಕ ವಿಭಿನ್ನತೆ ಹಾಗೂ ವಿವಿಧತೆಗಳು ಇರುವ ಹಾಗೆಯೇ ಸಭೆಯಾಗಿರುವ ಕ್ರಿಸ್ತನ ದೇಹದಲ್ಲಿಯೂ ಅವೆ (ವ 14-20). ಎಲ್ಲಾ ಭಾಗಗಳೂ ಏಕ ರೀತಿಯಾಗಿರುವದಿಲ್ಲ ಮತ್ತು ಅವುಗಳು ಏಕರೀತಿಯಾಗಿರಬೇಕೆಂದು ದೇವರೂ ಬಯಸಿಲ್ಲ. ಪೌಲನು ಆತ್ಮೀಕ ವರಗಳ ಬಗ್ಗೆ ಮಾತನಾಡುತ್ತಿರುವದನ್ನು ನೆನಪು ಮಾಡಿಕೊಳ್ಳಿರಿ (ವ 1). ಎಲ್ಲರಿಗೂ ಒಂದೇ ರೀತಿಯ ವರ ಅಥವಾ ವರಗಳು ಇರುವದಿಲ್ಲ ಎಂದು ಆತನು ಹೇಳಿದ್ದಾನೆ (ವ 7-11). ಅವನು ದೇಹದ ನಿದರ್ಶನದ ಮೂಲಕ ಈ ಸತ್ಯವನ್ನು ಒತ್ತಿ ಹೇಳಿದ್ದಾನೆ. ಒಂದುವೇಳೆ ಯೇಸು ಕ್ರಿಸ್ತನ ದೇಹದ ಭಾಗಗಳಾಗಿರುವ ಕೆಲವರು ಪ್ರವಾದಿಸಲಿಲ್ಲವೆಂದರೆ ಅವರು ಆತನ ದೇಹದ ಭಾಗಗಳಲ್ಲವೇ? ಒಂದುವೇಳೆ ಮಹತ್ತುಗಳನ್ನು ಮಾಡದೆ ಹೋದರೆ ಅಥವಾ ಅನ್ಯಭಾಷೆಗಳನ್ನು ಮಾತನಾಡದೆ ಹೋದರೆ ಅವರು ಆತನ ದೇಹದ ಭಾಗಗಳಲ್ಲವೇ? ನಾವು ಆತನ ದೇಹದ ಭಾಗಗಳಲ್ಲ ಎಂದು ಯಾರೊಬ್ಬರೂ ಚಿಂತಿಸಬಾರದು ಎಂಬದಾಗಿ ಪೌಲನು ಹೇಳುತ್ತಾ ಇದ್ದಾನೆ. ನಾಲಿಗೆಯಾಗಲಿ ಅಥವಾ ದೇಹದ ಬೇರೆ ಭಾಗವಾಗಲಿ, ಇಡೀ ದೇಹವಾಗಲು ಆಗುವದಿಲ್ಲ. ಎರಡನೆಯದಾಗಿ, ಮಾನವ ಶರೀರವು ವಿವಿಧ ಭಾಗಗಳನ್ನು ಹೊಂದಿದ್ದರೂ ಒಂದೇ ದೇಹವಾಗಿರುವ ಹಾಗೆ, ಯೇಸು ಕ್ರಿಸ್ತನ ದೇಹವೂ ಒಂದೇ ದೇಹವಾಗಿದೆ. ಇತರರ ಪ್ರತಿಯೊಂದು ಭಾಗದ ಮೇಲೆಯೂ ಆತುಕೊಳ್ಳುವಿಕೆಯಿರುತ್ತದೆ (ವ 21-26). **18**

**12:18** ಮಾನವನ ದೇಹ ಮತ್ತು ಸಭೆಯಾಗಿರುವ ಯೇಸು ಕ್ರಿಸ್ತನ ದೇಹಕ್ಕೆ ಅನ್ವಯವಾಗುವ ಸತ್ಯವನ್ನು ನಾವು ಇಲ್ಲಿ ನೋಡಬಹುದು. ಪ್ರತಿಯೊಬ್ಬ ವಿಶ್ವಾಸಿಯು ದೇವರು ತನ್ನನ್ನು ಯಾವ ಸ್ಥಾನದಲ್ಲಿ ಇಟ್ಟಿದ್ದಾನೋ ಅದರಲ್ಲಿ ತೃಪ್ತನಾಗಿರಲಿ ಮತ್ತು ದೇವರು ಯಾವ "ಭಾಗವಾಗಿರಬೇಕೆಂದು" ಹೇಳಿದ್ದಾನೋ ಹಾಗಿರಲಿ. ಒಂದುವೇಳೆ ಅವನು "ಕಣ್ಣಾಗಿದ್ದರೆ" ಅವನು ಕಣ್ಣಿನ ಕಾರ್ಯವನ್ನು ಮಾಡಲಿ; ಒಂದುವೇಳೆ "ನಾಲಿಗೆಯಾಗಿದ್ದರೆ" ನಾಲಿಗೆಯಾಗಿ; ಒಂದು "ಪಾದವಾಗಿದ್ದರೆ" ಪಾದದ ಕಾರ್ಯವನ್ನು ಮಾಡಲಿ. **21**

**12:21** ವಿವಿಧವಾದ ಆತ್ಮೀಕ ವರಗಳನ್ನು ಹೊಂದಿರುವ ವಿಶ್ವಾಸಿಗಳ ಬಗ್ಗೆ ಆತನು ಮಾತನಾಡುತ್ತಾ ಇದ್ದಾನೆ. ದೇಹದೊಳಗಿರುವ ಅನ್ಯೋನ್ಯತೆಯಿಂದ ಮತ್ತೊಬ್ಬನನ್ನು ತೆಗೆದುಹಾಕಲು ಯಾರೂ ಪ್ರಯತ್ನಿಸಬಾರದು. ಯಾರೊಬ್ಬರೂ ತಮ್ಮನ್ನು ಇತರರಿಂತ ಹೆಚ್ಚು ಎಂದು ಭಾವಿಸಿಕೊಳ್ಳಬಾರದು. ಯಾರೊಬ್ಬರೂ ಅಹಂಕಾರಿಗಳಾಗಿರಬಾರದು ಮತ್ತು ಕ್ರಿಸ್ತನ ದೇಹದೊಳಗೆ ಇತರರು ಅವಶ್ಯವಿಲ್ಲ ಎಂಬದಾಗಿ ಯೋಚಿಸುವವರಾಗಿರಬಾರದು. **25**

**12:25** *"ದೇಹದಲ್ಲಿ ಬೇಧವೇನೂ ಇಲ್ಲ . . . ಹಿತವನ್ನು ಚಿಂತಿಸಬೇಕು"*– ಈ ಮಾತುಗಳು

ಎಲ್ಲಾ ವಿಶ್ವಾಸಿಗಳ ಹೃದಯದಲ್ಲಿ ಬರೆಯಲ್ಪಡಬೇಕು (1:10,13; ಯೋಹಾನ 13:34; ಅಪೊ 4:32; ರೋಮಾ 12:10; 14:19; 15:1-3; ಎಫೆ 4:2-3). ಇಲ್ಲಿ ವಿಫಲರಾಗಿರುವದು ದುಃಖದ ವಿಷಯವಾಗಿದೆ ಮತ್ತು ಇಂದು ಎಲ್ಲಾ ಕಡೆಗಳಲ್ಲಿಯೂ ನಾವು ಇದನ್ನು ನೋಡಬಹುದಾಗಿದೆ. **27-30**

**12:27-30** ಪೌಲನು ಈಗ 14-26 ವಚನಗಳ ನಿದರ್ಶನವನ್ನು ಅತ್ಮೀಕ ವರಗಳ ವಿಷಯಕ್ಕೆ ಅಳವಡಿಸಿದ್ದಾನೆ. **28**

**12:28** *"ದೇವರು ಇಟ್ಟಿದ್ದಾನೆ"*– ವ 18. ದೇವರು ನೇಮಿಸಿರುವವರೊಂದಿಗೆ ಸಭೆಯಲ್ಲಿರುವ ಯಾರೊಬ್ಬರೂ ಜಗಳವಾಡಬಾರದು ಅಥವಾ ಬೇರೊಬ್ಬರ ಸ್ಥಾನವನ್ನು ಬಯಸಬಾರದು ಅಥವಾ ದೇವರು ತನಗೆ ಅಥವಾ ಬೇರೆಯವರಿಗೆ ನಿರ್ದಿಷ್ಟವಾದ ಬೇರೆ ವರ ಕೊಟ್ಟಿದ್ದಾನೆ ಎಂದು ಹೇಳಲು ಮುಂದಾಗಬಾರದು. ಈ ವಚನದಲ್ಲಿ, "ಮೊದಲನೇದಾಗಿ," "ಎರಡನೇದಾಗಿ," "ಮೂರನೇದಾಗಿ," ಮತ್ತು "ಆಮೇಲೆ" –ಎಂಬದಾಗಿ ಉಪಯೋಗಿಸಿರುವ ಪದಗಳು ಪೌಲನು ಪಾಮುಖ್ಯತೆಯ ಕ್ರಮವನ್ನು ತೋರಿಸಿದ್ದಾನೆ ಎಂಬದನ್ನು ಸೂಚಿಸುತ್ತವೆ. ಸಮಯದನುಸಾರ ಈ ಕ್ರಮವನ್ನು ಕೊಡಲಾಗಿದೆ ಎಂಬದು ಇವುಗಳ ಅರ್ಥವಲ್ಲ. ಅಪೊಸ್ತಲರನ್ನು ಅಪೊಸ್ತಲತನಕ್ಕೆ ಕರೆದ ಸಮಯದಲ್ಲಿಯೇ ನಾನಾ ರೋಗಗಳನ್ನು ವಾಸಿ ಮಾಡುವ ಮತ್ತು ಮಹತ್ತುಗಳನ್ನು ಮಾಡುವ ಸಾಮರ್ಥ್ಯವನ್ನು ಕೊಡಲಾಗಿತ್ತು (ಮತ್ತಾಯ 10:1-2). ಅಪೊಸ್ತಲರು ಯಾವುದೇ ದೋಷವಿಲ್ಲದ ಬೋಧಕರಾಗಿದ್ದರು ಮತ್ತು ಯೇಸು ಕ್ರಿಸ್ತನ ಸುವಾರ್ತೆಯನ್ನು ಕಾಪಾಡುವವರಾಗಿದ್ದು, ಸಭೆಗೆ ಅಡಿಪಾಯವನ್ನು ಹಾಕಿದರು. ಪ್ರವಾದಿಗಳು ಪ್ರೇರಣೆಯುಳ್ಳ ಸಂವಹನಗಾರರಾಗಿದ್ದರು (ವ 10).

*"ಸಹಾಯ ಮಾಡುವ ಗುಣ"*– ಪ್ರತಿಯೊಬ್ಬ ವಿಶ್ವಾಸಿಯು ಇತರರಿಗೆ ಸಹಾಯ ಮಾಡಲು ಪ್ರಯತ್ನಿಸಬೇಕು ಆದರೆ ಕೆಲವರಿಗೆ ಸಹಾಯ ಮಾಡುವ ವಿಶೇಷವಾದ ಆತ್ಮೀಕ ಸಾಮರ್ಥ್ಯವಿರುತ್ತದೆ – 16:15. **29-30**

**12:29-30** ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ "ಇಲ್ಲ" ಎಂಬದು ಅತ್ಯಂತ ಸ್ಪಷ್ಟವಾಗಿದೆ. ಆತನು ಈ ಅಧ್ಯಾಯದಲ್ಲಿ ಹೇಳಿರುವ ವಿಷಯಗಳೆಲ್ಲವೂ ಈ ಉತ್ತರವನ್ನು ಬೇಡುತ್ತವೆ. ದೇವರು ತನ್ನ ಜನರಿಗೆ ತನ್ನ ಬಯಕೆಗನುಸಾರ ಮತ್ತು ತಾನು ಬಯಸಿದಾಗ ಆತ್ಮೀಕ ವರಗಳನ್ನು ಕೊಡುತ್ತಾನೆ ಅಥವಾ ಕೊಡದೆ ಇರುತ್ತಾನೆ ಮತ್ತು ಪ್ರತಿಯೊಬ್ಬ ವಿಶ್ವಾಸಿಯೂ ಈ ವರಗಳಲ್ಲಿ ಯಾವುದಾದರು ಒಂದನ್ನು ಹೊಂದಿರಲೇಬೇಕು ಅಥವಾ ಬೇರೆ ಯಾವುದನ್ನಾದರೂ ಹೊಂದಿರಬೇಕು ಅಥವಾ ದೇವರಾತ್ಮನ ಪ್ರಕಟನೆಯನ್ನಾದರೂ ಹೊಂದಿರಬೇಕು ಎಂಬದಾಗಿ ಹೇಳುವದು ತಪ್ಪಾಗಿದೆ. ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಹೊಂದಿರುವ ಪ್ರತಿಯೊಬ್ಬನು ಯಾವುದಾದರೊಂದು ನಿರ್ದಿಷ್ಟವಾದ ವರವನ್ನು ಹೊಂದಿರಬೇಕು ಎಂಬದಾಗಿ ಹೇಳುವವನು ದೇವರ ವಾಕ್ಯದ ಬೋಧನೆಗೆ ವಿರುದ್ಧವಾಗಿ

ನಡೆದುಕೊಳ್ಳುವವನು ಮತ್ತು ವಿಭಾಗಗಳನ್ನು ತರುವವನಾಗಿದ್ದಾನೆ. **31**

**12:31** 14:1 ನೋಡಿರಿ. ಒಬ್ಬ ವಿಶ್ವಾಸಿಗೆ ಆತ್ಮೀಕ ವರಗಳು ಯಾಕೆ ಬೇಕು? ತನ್ನ ವೈಯಕ್ತಿಕ ತೃಪ್ತಿಗಾಗಿಯಲ್ಲ, ಇತರರು ಆತನನ್ನು ಅಂಗೀಕರಿಸಿಕೊಳ್ಳಲು ಅಲ್ಲ, ತನ್ನ ಹೆಸರನ್ನು ಪ್ರಸಿದ್ಧಿಪಡಿಸಿಕೊಳ್ಳಲು ಅಲ್ಲ, ಬದಲಾಗಿ 14:12 ರ ಮಾತುಗಳನ್ನು ನೆರವೇರಿಸುವದಕ್ಕಾಗಿ ಆಗಿದೆ. ಪ್ರತಿಯೊಬ್ಬ ವಿಶ್ವಾಸಿಯು ಮೊದಲು ಇತರರ ಹಿತವನ್ನು ಚಿಂತಿಸಬೇಕೇ ಹೊರತು ತಮ್ಮ ಹಿತವನ್ನಲ್ಲ (10:24). ಶ್ರೇಷ್ಠವಾದ ವರಗಳು ಯಾವುವು? ಇತರರಿಗೆ ಅತಿಯಾದ ಹಿತವನ್ನು ಮಾಡುವಂತೆ ನಮ್ಮನ್ನು ಬಲಪಡಿಸುವವುಗಳು (14:3,5,12).

"*ಆಸಕ್ತಿಯಿಂದ ಶ್ರೇಷ್ಠ ವರಗಳನ್ನು ಅಪೇಕ್ಷಿಸಿರಿ*"– 14:1. ಪೌಲನು 28 ನೇ ವಚನದಲ್ಲಿ ತಿಳಿಸಿರುವ ದೊಡ್ಡ ವರಗಳಿಗಿಂತ ಚಿಕ್ಕ ವರಗಳನ್ನು ಕೆಲವು ಕ್ರೈಸ್ತರು ಬಯಸುವವರಾಗಿದ್ದರು ಎಂಬದು ಸ್ಪಷ್ಟವಾಗಿ ತಿಳಿಯುತ್ತದೆ.

"*ಉತ್ಕೃಷ್ಟವಾದ ಮಾರ್ಗ*"– ನಮಗಿರುವ ಆತ್ಮೀಕ ವರಗಳಿಗಿಂತ ಅತ್ಯಂತ ಪ್ರಾಮುಖ್ಯವಾಗಿರುವ ವಿಷಯದ ಬಗ್ಗೆ ಪೌಲನು ಈಗ ಮಾತನಾಡುತ್ತಾ ಇದ್ದಾನೆ – ಅದೇನೆಂದರೆ, ಎಲ್ಲಾ ವರಗಳಲ್ಲಿ ದೊಡ್ಡ ವರವಾದ, ದೇವರ ಪ್ರೀತಿಯಂಥ, ಪ್ರೀತಿ. ಇಲ್ಲದೆ ಹೋದರೆ ಉಳಿದೆಲ್ಲಾ ವರಗಳು ವ್ಯರ್ಥವಾಗಿವೆ.

# 13[1]

**13:1** "*ಪ್ರೀತಿ*"– (ಅಗಾಫೆ ಎಂಬ) ಗ್ರೀಕ್ ಪದದ ಭಾಷಾಂತರವಾಗಿದ್ದು ಹೊಸ ಒಡಂಬಡಿಕೆಯು ಬರೆಯಲ್ಪಡುವದಕ್ಕಿಂತ ಮೊದಲು ಸಹಜವಾಗಿ ಬಳಕೆಯಲ್ಲಿ ಇರಲಿಲ್ಲ. ಇದು ಯಾವುದೇ ಗ್ರೀಕ್ ಪದಕ್ಕಿಂತಲೂ ಹೆಚ್ಚಾಗಿ ಪ್ರೀತಿಯ ಉನ್ನತ ವಿಧವನ್ನು ಸೂಚಿಸುತ್ತದೆ ಮತ್ತು ಬಹುತೇಕ ಗ್ರೀಕ್ ಬೋಧಕರು (ಅಥವಾ ಲೋಕದಲ್ಲಿರುವ ಎಲ್ಲರಿಗಿಂತ ಹೆಚ್ಚಾಗಿ) ಆಲೋಚಿಸುವದಕ್ಕಿಂತ ಉನ್ನತವಾದ ವಿಧವನ್ನು ವ್ಯಕ್ತಪಡಿಸುತ್ತದೆ. ಗ್ರೀಕ್ ಹೊಸ ಒಡಂಬಡಿಕೆಯಲ್ಲಿ 116 ಸಲ "ಅಗಾಫೆ" –ಎಂಬ ನಾಮಪದ ಉಪಯೋಗಿಸಲಾಗಿದೆ. ಇದಕ್ಕೆ ಸಂಬಂಧಿಸಿರುವ ಕ್ರಿಯಾಪದವು 137 ಸಲ ಉಪಯೋಗಿಸಲಾಗಿದೆ. ದೇವರ ಪ್ರೀತಿಗಾಗಿ ಮತ್ತು ವಿಶ್ವಾಸಿಗಳಲ್ಲಿ ಒಬ್ಬರ ಮೇಲೊಬ್ಬರಿಗೆ ಹಾಗೂ ದೇವರ ಮೇಲೆ ಇರುವ ಪ್ರೀತಿಯನ್ನು ಸೂಚಿಸುವ ಪದವನ್ನು ಉಪಯೋಗಿಸಲಾಗಿದೆ. ಅದು ನಿಸ್ವಾರ್ಥವಾದ ಪ್ರೀತಿಯಾಗಿದೆ, ಯಾವಾಗಲೂ ಇತರರ ಹಿತದ ಬಗ್ಗೆಯೇ ಚಿಂತಿಸುವ ಪ್ರೀತಿಯಾಗಿದೆ. ಕಣ್ಣಿನಾಸೆ, ಸ್ವಾರ್ಥ ಬಯಕೆ ಅಥವಾ ವಿವಿಧ ಲಿಂಗಗಳ ನಡುವೆಯಿರುವ ಪ್ರೀತಿಗೆ ಸಂಬಂಧಿಸಿಲ್ಲ. ಈ ವಚನಗಳು ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ ಪದದ ಕೆಲವು ಅರ್ಥವನ್ನು ಕೊಡುತ್ತವೆ – ಮತ್ತಾಯ 5:44; 22:37; ಯೋಹಾನ 3:16; 13:1,34;

14:15; 17:24,26; ರೋಮಾ 5:5-8; ಎಫೆ 5:25; 1 ಪೇತ್ರ 1:22; 1 ಯೋಹಾನ 3:16-18; 4:8-9. ಅಗಾಪೆಯು ದೈವೀಕ ಪ್ರೀತಿಯಾಗಿದೆ. ಅತ್ಯಂತ ಪ್ರಾಮುಖ್ಯವಾದ ಈ ಅಧ್ಯಾಯದಲ್ಲಿ ಪೌಲನು ಪ್ರೀತಿಯ ಅವಶ್ಯಕತೆಯ (ವ 1-3), ಪ್ರೀತಿಯ ಸ್ವಭಾವ (ವ 4-7) ಮತ್ತು ಪ್ರೀತಿಯ ಶಾಶ್ವತ ಗುಣದ ಬಗ್ಗೆ (ವ 8-13) ಮಾತನಾಡಿದ್ದಾನೆ. ಪ್ರೀತಿಯು ಭೂಮಿಯ ಮೇಲೆ ಅಥವಾ ಪರಲೋಕದಲ್ಲಿರುವ ಯಾವುದೇ ಭಾಷೆಗಿಂತ ಪ್ರೀತಿಯು ದೊಡ್ಡದಾಗಿದೆ ಎಂಬದಾಗಿ ಹೇಳುವ ಮೂಲಕ ಅವನು ಪ್ರಾರಂಭಿಸಿದ್ದಾನೆ. ಪ್ರೀತಿಯಿಲ್ಲದೆ ಹೋದರೆ ಅನ್ಯಭಾಷೆಯನ್ನು ಅಥವಾ ಬೇರೆ ಯಾವುದೇ ಭಾಷೆಯನ್ನಾಡುವ ವ್ಯಕ್ತಿ ಸುಮ್ಮನೆ ಶಬ್ದ ಮಾಡುವದಕ್ಕಿಂತ ಬೇರೆ ಏನೂ ಇಲ್ಲ. ದೇವದೂತರ ಭಾಷೆ ಎಂದರೆ ದೇವದೂತರು ಮಾತನಾಡುವ ಭಾಷೆಯಾಗಿದೆ. ಆದ್ದರಿಂದ ಮನುಷ್ಯರ ಭಾಷೆ ಎಂದರೆ ಮನುಷ್ಯರು ಮಾತನಾಡುವ ಭಾಷೆಯಾಗಿದೆ. ಈ ವಚನದಲ್ಲಿ ಪೌಲನು ನಾನು ದೇವದೂತರ ಮಾತನಾಡುವವನು ಎಂಬದಾಗಿ ಹೇಳುತ್ತಿಲ್ಲ ಬದಲಾಗಿ ಯಾವುದೇ ಭಾಷೆಯಲ್ಲಿ ಮಾತನಾಡಿದರೂ ಪ್ರೀತಿಯಿಲ್ಲದೆ ಹೋದರೆ ಯಾವುದೇ ಪ್ರಯೋಜನವಿಲ್ಲ ಎಂದು ಹೇಳಿದ್ದಾನೆ. ಸ್ಪಷ್ಟವಾದ ಅರ್ಥವೇನೆಂದರೆ: ಒಂದುವೇಳೆ ಅವನು ದೇವದೂತರ ಭಾಷೆಯನ್ನು ಮಾತನಾಡಿದರೂ, ಒಂದುವೇಳೆ ಅವನಲ್ಲಿ ಪ್ರೀತಿಯಿಲ್ಲವೆಂದರೆ ಅದರಿಂದ ಯಾರಿಗೂ ಯಾವುದೇ ಪ್ರಯೋಜನವಾಗುವದಿಲ್ಲ. ಇಡೀ ಸತ್ಯವೇದದಲ್ಲಿ ಯಾರಾದರೂ ದೇವದೂತರ ಭಾಷೆಯಲ್ಲಿ ಮಾತನಾಡಿದ್ದಾರೆ ಎಂಬದಕ್ಕೆ ಯಾವುದೇ ಉದಾಹರಣೆಯಿಲ್ಲ. ದೇವದೂತರು ಭೂಲೋಕಕ್ಕೆ ಬಂದಾಗ ಮಾನವರ ಭಾಷೆಯಲ್ಲಿಯೇ ಮಾತನಾಡಿದ್ದಾರೆ. ಅವರ ಮಾತುಗಳನ್ನು ಜನರು ಅರ್ಥಮಾಡಿಕೊಳ್ಳುವದು ಪ್ರಾಮುಖ್ಯವಾದ ವಿಷಯವಾಗಿದೆ. **2**

**13:2** ಪೌಲನು ಈಗ ಅನ್ಯಭಾಷೆಯನ್ನಾಡುವ ವರಕ್ಕಿಂತ ಶ್ರೇಷ್ಠವಾದ ವರಗಳನ್ನು (12:31) ವಿಶ್ವಾಸಿಗಳು ಅಪೇಕ್ಷಿಸಬೇಕೆಂದು ಹೇಳುತ್ತಾ ಇದ್ದಾನೆ. ಆದರೆ ಪ್ರೀತಿಯಿಲ್ಲದೆ ಹೋದರೆ ಅವೆಲ್ಲವೂ ಒಬ್ಬ ವ್ಯಕ್ತಿಯನ್ನು ನಿಜವಾಗಿಯೂ ಯೋಗ್ಯನನ್ನಾಗಿಸುವದಿಲ್ಲ. ಪ್ರೀತಿ (ಮತ್ತು ಯಾವುದೋ ಆತ್ಮೀಕ ವರ ಅಥವಾ ಬೇರೆ ಯಾವುದೋ) ನಾವು ದೇವಜನರು ಮತ್ತು ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿರುವವರು ಎಂಬದಕ್ಕೆ ದೊಡ್ಡ ಸಾಕ್ಷಿಯಾಗಿದೆ. ಪ್ರತಿಯೊಬ್ಬ ವಿಶ್ವಾಸಿಯ ಜೀವಿತದಲ್ಲಿಯೂ ಪ್ರೀತಿಯ ಪ್ರಕಟನೆಯು ಖಂಡಿತವಾಗಿಯೂ ತೋರಬೇಕಾಗಿದೆ. **3**

**13:3** ಒಬ್ಬನು ಪ್ರೀತಿಯಿಲ್ಲದೆ ಹೋದರೆ ತನಗಿರುವ ಎಲ್ಲವನ್ನೂ ಕೊಡಲು ಅಥವಾ ತ್ಯಾಗವನ್ನು ಮಾಡಲು ಸಾಧ್ಯವಿಲ್ಲ? ಹೌದು. ಒಬ್ಬನು ದೇವರಿಂದ ಮೆಚ್ಚಿಕೆಯನ್ನು ಪಡೆಯಬೇಕೆಂಬ ಯೋಚನೆಯಿಂದ ಅಥವಾ ನರಕದ ಭಯದಿಂದ, ಅಥವಾ ತನ್ನ ಧರ್ಮ ಅಥವಾ ಆದರ್ಶಗಳ ದೆಸೆಯಿಂದ ಮಾಡಬಹುದು. ಅನೇಕರು ಈ ಎಲ್ಲಾ ವಿಷಯಗಳಲ್ಲಿ ವಂಚನೆಗೆ ಒಳಗಾಗಿದ್ದಾರೆ. ಒಳ್ಳೆಯ ಕಾರ್ಯಗಳು ಅಥವಾ ಒಳ್ಳೆಯ ಕಾರ್ಯಗಳ

ಪ್ರತಿಫಲವಾಗಿ ತಾವು ರಕ್ಷಣೆಯನ್ನು ಸಂಪಾದಿಸಿಕೊಳ್ಳಬಹುದು ಎಂಬದಾಗಿ ಅವರು ಅಂದುಕೊಳ್ಳುತ್ತಾರೆ. ಆದರೆ ಇವುಗಳೆಲ್ಲವೂ ಅಪ್ರಯೋಜನವಾಗಿವೆ. ದೇವರ ದೃಷ್ಟಿಯಲ್ಲಿ ಒಳ್ಳೆಯದೆಂಬದಾಗಿ ಕರೆಯಲ್ಪಡುವ ಕಾರ್ಯಗಳನ್ನು ದೈವೀಕ ಪ್ರೀತಿಯಿಂದ ಮಾಡಲಿಲ್ಲವೆಂದರೆ, ನಿಸ್ವಾರ್ಥವಾದ ಪ್ರೀತಿಯಿಂದ ದೇವರಿಗಾಗಿ ಮತ್ತು ಮನಷ್ಯರಿಗೆ ಏನೂ ಮಾಡಲಿಲ್ಲವೆಂದರೆ, ಅವುಗಳು ಒಳ್ಳೆಯ ಕಾರ್ಯಗಳೇ ಅಲ್ಲ ಮತ್ತು ಅವುಗಳನ್ನು ತಪ್ಪಾದ ಉದ್ದೇಶಗಳಿಂದ ಮಾಡಿರುವ ತಪ್ಪಾದ ಕಾರ್ಯಗಳು ಎಂದೇ ಕರೆಯಲಾಗುವದು. **4-7**

**13:4-7** ಪೌಲನು ಪ್ರೀತಿಯ ಸ್ವಭಾವದ ಬಗ್ಗೆ ಹೇಳಲಾಗಿರುವ ಸಂಗತಿಗಳನ್ನು ಕರ್ತನಾದ ಯೇಸು ಕ್ರಿಸ್ತನ ಜೀವಿತದಲ್ಲಿ ನಾವು ಪರಿಪೂರ್ಣವಾಗಿ ನೋಡಬಹುದಾಗಿದೆ. ದೇವರು ಪ್ರೀತಿ ಸ್ವರೂಪನಾಗಿದ್ದಾನೆ (1 ಯೋಹಾನ 4:8) ಮತ್ತು ದೇವರೇ ಮಾನವರೂಪದಲ್ಲಿ ಯೇಸು ಕ್ರಿಸ್ತನಾಗಿ ಬಂದನು ಆದ್ದರಿಂದ ಪ್ರೀತಿಯೇ ಮಾನವ ರೂಪದಲ್ಲಿ ಬಂದಿತು. ತನ್ನ ಪ್ರೀತಿಯ ಜೀವಿತದ ಮೂಲಕ ಆತನು ಎಲ್ಲಾ ವಿಶ್ವಾಸಿಗಳಿಗೆ ದೊಡ್ಡ ಮಾದರಿಯಾಗಿದ್ದಾನೆ. **4**

**13:4** "*ತಾಳ್ಮೆ*"– ಇಲ್ಲಿ ಕೊಡಲಾಗಿರುವ ಗ್ರೀಕ್ ಪದದ ಅರ್ಥ ದೀರ್ಘಶಾಂತಿ. ಇದು ಗಾಯಗಳನ್ನು, ತಪ್ಪುಗಳನ್ನು ಮತ್ತು ಇತರರ ಕಠೋರವಾದ ಮಾತುಗಳು ಹಾಗೂ ಕ್ರಿಯೆಗಳನ್ನು ಯಾವುದೇ ರೀತಿಯ ಎದುರುಬೀಳುವಿಕೆಯಿಲ್ಲದೆ ಸಹಿಸಿಕೊಳ್ಳುವ ಮನಸ್ಸು ಹಾಗೂ ಸಾಮರ್ಥ್ಯವನ್ನು ಇದು ಸೂಚಿಸುತ್ತದೆ. ಯೇಸು ಕ್ರಿಸ್ತನ ಜೀವನಪರ್ಯಂತರ ಮತ್ತು ಅತ್ಯಂತ ಸ್ಪಷ್ಟವಾಗಿ ಆತನಿಗೆದುರಾದ ಶ್ರಮೆಗಳು ಹಾಗೂ ಮರಣದ ಸಮಯದಲ್ಲಿ ಇದನ್ನು ನಾವು ನೋಡಬಹುದು – ಯೆಶಾಯ 53:7; ಮತ್ತಾಯ 27:14; ಲೂಕ 23:34; 1 ಪೇತ್ರ 2:21-23. ಆತನ ಹಿಂಬಾಲಕರಲ್ಲಿಯೂ ಇದೇ ಗುಣಲಕ್ಷಣವಿರಬೇಕು – ಮತ್ತಾಯ 18:22; ಗಲಾ 5:22; ಎಫೆ 4:2; ಕೊಲೊ 1:11; 3:12 ರೊಂದಿಗೆ ಹೋಲಿಸಿ ನೋಡಿರಿ.

"*ದಯೆ*"– ಇತರರು ಅರ್ಹರಲ್ಲದೆ ಇದ್ದರೂ, ಅವರಿಗೆ ಸಕ್ರಿಯವಾಗಿ ಸಹಾಯ ಮಾಡುವದು ಇದರ ಅರ್ಥವಾಗಿದೆ. ಈ ಗುಣವು ನಮ್ಮನ್ನು ಉಪಯುಕ್ತತೆ ಹಾಗೂ ಸೇವೆಯ ಜೀವಿತಕ್ಕೆ ನಮ್ಮನ್ನು ಪ್ರೇರೇಪಿಸುತ್ತದೆ. ಈ ಗುಣಲಕ್ಷಣವು ಯೇಸು ಕ್ರಿಸ್ತನ ಜೀವಿತದಲ್ಲಿ ಅತ್ಯಂತ ಪ್ರಾಮುಖ್ಯವಾದದ್ದಾಗಿತ್ತು – ಮತ್ತಾಯ 4:23-24; 20:28; ಅಪೊ 10:38. ಯೇಸು ಕ್ರಿಸ್ತನು ತನ್ನ ಶಿಷ್ಯರಲ್ಲಿಯೂ ಈ ಗುಣವನ್ನು ಎದುರುನೋಡುವವನಾಗಿದ್ದಾನೆ – ಮತ್ತಾಯ 25:31-40; ಲೂಕ 6:35; ಎಫೆ 4:32; ಕೊಲೊ 3:12.

"*ಹೊಟ್ಟೆಕಿಚ್ಚು*"– ಮಾರಣಾಂತಿಕವಾದ ಈ ಪಾಪದ ವಿಷಯವಾಗಿ ತಿಳಿಯಲು ಜ್ಞಾನೋ 14:30; 27:4; ಮತ್ತಾಯ 27:18; ಅಪೊ 7:9; 13:45; 17:5 ನೋಡಿರಿ. ಹೊಟ್ಟೆಕಿಚ್ಚು ಎಂದರೆ ಇತರರ ಪ್ರಖ್ಯಾತಿ ಅಥವಾ ಸ್ವಾಸ್ತ್ಯ ಅಥವಾ ಯಶಸ್ಸಿನ ನಿಮಿತ್ತ ಹೊಟ್ಟೆಕಿಚ್ಚುಪಡುವವನು ನೋವನ್ನು ಅನುಭವಿಸುವದಾಗಿದೆ. ಈ ಭಾವನೆಯು ಪ್ರೀತಿಗೆ ಸಂಪೂರ್ಣವಾಗಿ ಅಪರಿಚಿತವಾಗಿದೆ ಮತ್ತು ಯೇಸು ಕ್ರಿಸ್ತನು ಇದಕ್ಕೆ ಎಂದಿಗೂ ಒಳಗಾಗಲೇ

ಇಲ್ಲ. ಯೇಸು ಕ್ರಿಸ್ತನ ಹಿಂಬಾಲಕರು ತಮ್ಮನ್ನು ಇದರಿಂದ ದೂರವಿರಿಸಿಕೊಳ್ಳಲು ಯಾವಾಗಲೂ ಪ್ರಯತ್ನಿಸುತ್ತಲೇ ಇರಬೇಕು – ರೋಮಾ 13:13; ಯಾಕೋಬ 3:14-16.

"*ಹೊಗಳಿಕೊಳ್ಳುವದಿಲ್ಲ*"– ಅಥವಾ "ಹೆಚ್ಚಳಪಡುವದಿಲ್ಲ". ಪ್ರೀತಿಯು ಇತರರನ್ನು ಹೊಗಳುತ್ತದೆ ಅಥವಾ ಇತರರ ವಿಷಯದಲ್ಲಿ ಹೆಮ್ಮೆಪಡುತ್ತದೆ.

"*ಉಬ್ಬಿಕೊಳ್ಳುವದು*"– ಅಥವಾ "ಗರ್ವಪಡುವದು" – ಪ್ರೀತಿಯು ಇತರರಿಂದ ಹೊಗಳಿಕೆಯನ್ನು ಎಂದಿಗೂ ಎದುರುನೋಡುವದಿಲ್ಲ. ಅದು ಗರ್ವಪಡುವದಿಲ್ಲ ಬದಲಾಗಿ ಯಾವಾಗಲೂ ದೀನತೆಯಿಂದ ಕೋಮಲತನದಿಂದ ನಡೆದುಕೊಳ್ಳುತ್ತದೆ. ಯೇಸು ಕ್ರಿಸ್ತನ ಜೀವಿತದಲ್ಲಿ ದೀನತೆಯ ಈ ಪ್ರೀತಿಯನ್ನು ಪರಿಪೂರ್ಣವಾಗಿ ನೋಡಬಹುದು. ಇದರಲ್ಲಿಯೂ ಆತನ ಶಿಷ್ಯರು ಆತನನ್ನು ಅನುಸರಿಸಬೇಕು (ಮತ್ತಾಯ 11:29). ಪ್ರೀತಿಯು ಸ್ವನಿರಾಕರಣೆಯನ್ನು ಅಭ್ಯಾಸಿಸುತ್ತದೆಯೇ ಹೊರತು, ಸ್ವಹೆಚ್ಚಳಪಟ್ಟುಕೊಳ್ಳುವಿಕೆಯನ್ನಲ್ಲ (ಮತ್ತಾಯ 10:38-39; ಲೂಕ 9:23). **5**

**13:5** "*ಮರ್ಯಾದೆಗೆಟ್ಟು ನಡೆಯುವದಿಲ್ಲ*"– ಅಥವಾ "ಅಸಭ್ಯವಾಗಿ ನಡೆಯುವದಿಲ್ಲ" ಅಥವಾ "ಅವಮಾನದಿಂದ ನಡೆದುಕೊಳ್ಳುವದಿಲ್ಲ". ಯಾರಿಗೂ ಅಪಕೀರ್ತಿ ಅಥವಾ ಅಗೌರವ ತೋರುವ ರೀತಿಯಲ್ಲಿ ಪ್ರೀತಿ ಎಂದಿಗೂ ನಡೆದುಕೊಳ್ಳುವದಿಲ್ಲ; ನಾಚಿಕೆಗೆ ಒಳಗಾಗುವಂಥ ಕಾರ್ಯಗಳನ್ನು ಎಂದಿಗೂ ಮಾಡುವದಿಲ್ಲ.

"*ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ*"– ಲೋಕವು ಹೆಚ್ಚಾಗಿ ಬೆಲೆ ಕೊಡುವ ಹಣ, ಆಸ್ತಿ ಅಥವಾ ಹೆಸರು, ಅಥವಾ ಅಧಿಕಾರ, ಅಥವಾ ಹೊಗಳಿಕೆಯ ಹಿಂದೆ ಪ್ರೀತಿ ಹೋಗುವದಿಲ್ಲ. ಅದು ದುರಾಸೆಪಡುವದಿಲ್ಲ. ಅದು ಯಾವಾಗಲೂ ಇತರರ ಹಿತವನ್ನೇ ಯೋಚಿಸುತ್ತದೆ. ನಾವು ಇದನ್ನು ಯೇಸು ಕ್ರಿಸ್ತನಲ್ಲಿ ನೋಡಬಹುದು; ಆತನ ಹಿಂಬಾಲಕರಲ್ಲಿಯೂ ನೋಡಬಹುದು (10:24; ರೋಮಾ 15:1-2).

"*ಸುಲಭವಾಗಿ ಸಿಟ್ಟುಗೊಳ್ಳುವದಿಲ್ಲ*"– ಅಂದರೆ ವಿರೋಧ ವ್ಯಕ್ತಪಡಿಸಲು ಆತುರಪಡುವದಿಲ್ಲ, ಬೇಗ ಮುನಿಸಿಕೊಳ್ಳುವದಿಲ್ಲ. ಅಂದರೆ ಪ್ರೀತಿ ಪಾಪಕ್ಕೆ ವಿರುದ್ಧವಾಗಿ ಆಳವಾದ ಮತ್ತು ಘೋರವಾದ ಸ್ಥಿರತೆಯನ್ನು ತೋರುವದಿಲ್ಲ ಎಂಬದು ಇದರ ಅರ್ಥವಲ್ಲ (ಪ್ರೀತಿಸ್ವರೂಪನಾಗಿರುವ ದೇವರು, ಮಾನವನ ದುಷ್ಟತನದ ವಿಷಯದಲ್ಲಿ ಯಾವಾಗಲೂ ಕೋಪವುಳ್ಳವನಾಗಿದ್ದಾನೆ – ರೋಮಾ 1:18; ಯೋಹಾನ 3:36; ಕೀರ್ತನೆ 7:11). ಹಾಗೆಯೇ ಮಾರ್ಕ 3:5 ಸಹ ನೋಡಿರಿ. ಆದರೆ ಅದು ಬೇರೆ ವಿಷಯ ಮತ್ತು ಗ್ರೀಕ್ ಭಾಷೆಯಲ್ಲಿ ಬೇರೆ ಪದವನ್ನು ಉಪಯೋಗಿಸಲಾಗಿದೆ.

"*ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ*"– ಪ್ರೀತಿಯು ತಪ್ಪುಗಳನ್ನೆಲ್ಲಾ ಮುಚ್ಚುತ್ತದೆ, ಅವುಗಳನ್ನು ಕ್ಷಮಿಸುತ್ತದೆ ಮತ್ತು ದ್ವೇಷವನ್ನು ಸಾಧಿಸುವದಿಲ್ಲ (ಮತ್ತಾಯ 5:38-48; ಲೂಕ 23:34; ಅಪೊ 7:59-60; 1 ಪೇತ್ರ 4:8 ನೋಡಿರಿ). ಇತರರು ಕೆಟ್ಟ

ಆಲೋಚನೆಯಿಂದ ಕಾರ್ಯಮಾಡುತ್ತಾ ಇದ್ದಾರೆ ಎಂದು ಸ್ವಾಭಾವಿಕವಾಗಿ ಅದು ಚಿಂತಿಸುವದಿಲ್ಲ; ಅವರ ಮೇಲೆ ಪಾಪವನ್ನು ಹೊರಿಸಲು ಅದು ಮುಂದಾಗುವದಿಲ್ಲ. ಕ್ರೈಸ್ತರು ಕರ್ತನು ಹೇಳಿರುವ ಹಾಗೆ ಪ್ರೀತಿಸುವದಾದರೆ, ಇತರರು ತಮಗಿಂತ ಶ್ರೇಷ್ಠರು ಎಂದು ಯೋಚಿಸಲು ಮುಂದಾಗುತ್ತದೆ (ಫಿಲಿಪ್ಪಿ 2:3), ಮತ್ತು ಯಾರ ವಿಷಯವಾಗಿಯೂ ತೀರ್ಪು ಮಾಡಲು ಮತ್ತು ಯಾರನ್ನೂ ನಿಂದಿಸಲು ಇಷ್ಟಪಡುವದಿಲ್ಲ (ರೋಮಾ 14:4,10,13). **6**

**13:6** ಪ್ರೀತಿ, ದೈವೀಕ ಪ್ರೀತಿ, ದುರ್ಬಲವಲ್ಲ, ತಪ್ಪು ಕಾರ್ಯಗಳ ವಿಷಯದಲ್ಲಿ ಭಾವುಕವಾಗುವದಿಲ್ಲ ಅಥವಾ ಸಪ್ಪೆಯಾಗಿಯೂ ವರ್ತಿಸುವದಿಲ್ಲ. ಅದು ದುಷ್ಟತನದೊಂದಿಗೆ ರಾಜಿಯಾಗುವದಿಲ್ಲ. ದುಷ್ಟತನವು ಕಾಣಿಸಿಕೊಳ್ಳುವಾಗ ಅದು ಸಂತೋಷಪಡುವದಿಲ್ಲ. "ಸಂತೋಷಿಸುವದಿಲ್ಲ" ಎಂಬದು ವಿರುದ್ಧಾರ್ಥಕವನ್ನು ಸೂಚಿಸುತ್ತದೆ – ಕೆಟ್ಟಕಾರ್ಯಗಳು ನಡೆಯುವಾಗ ಪ್ರೀತಿಯು ದುಃಖಿಸುತ್ತದೆ. ಸತ್ಯವು ಗೆಲ್ಲುವಾಗ ಅದು ಬಹಳ ಸಂತೋಷಿಸುತ್ತದೆ. ಪ್ರೀತಿ ಮತ್ತು ಸತ್ಯ ದೊಡ್ಡ ಸಂಗಾತಿಗಳಾಗಿವೆ. ಇಲ್ಲಿ ಸತ್ಯವನ್ನು ಕೆಟ್ಟತನಕ್ಕೆ ವಿರುದ್ಧವಾಗಿ ತೋರಿಸಲಾಗಿದೆ. ಕೆಟ್ಟತನ ಎಂದರೆ ಕತ್ತಲೆ, ಸುಳ್ಳು, ವಂಚನೆ ಮತ್ತು ದೇವರ ಸತ್ಯವನ್ನು ಅಡಗಿಸುವದಾಗಿದೆ (ಯೋಹಾನ 3:19-20; ರೋಮಾ 1:18; 2 ಥೆಸ 2:10,12). ಪೌಲನು ಇಲ್ಲಿ ಮಾತನಾಡುತ್ತಾ ಇರುವ ಸತ್ಯವು ಬೆಳಕಿನೊಂದಿಗೆ, ವಾಸ್ತವದೊಂದಿಗೆ ಮತ್ತು ದೇವರೊಂದಿಗೆ ಸಂಬಂಧವುಳ್ಳದ್ದಾಗಿದೆ. ಇದು ಯೇಸು ಕ್ರಿಸ್ತನೇ ಸಾಕಾರವಾಗಿರುವ ಸತ್ಯವಾಗಿದೆ (ಯೋಹಾನ 14:6). ಒಂದುವೇಳೆ ನಾವು ಈ ಸತ್ಯದಲ್ಲಿ ಸಂತೋಷಿಸಲಿಲ್ಲವೆಂದರೆ ಪೌಲನು ವಿವರಿಸುತ್ತಿರುವಂಥ ಪ್ರೀತಿ ನಮ್ಮಲ್ಲಿದೆ ಎಂದು ನಾವು ಸುಮ್ಮನೆ ಊಹಿಸಿಕೊಳ್ಳಬಾರದು. ಅದಿಲ್ಲವೆಂದರೆ ನಾವೇನಾಗಿದ್ದೇವೆ? **7**

**13:7** *"ಸಹಿಸಿಕೊಳ್ಳುತ್ತದೆ"*– ಗ್ರೀಕ್ ಪದ "ಕಾಪಾಡುತ್ತದೆ" ಅಥವಾ "ರಕ್ಷಣೆ ಕೊಡುವ ಮೂಲಕ ಉಳಿಸುತ್ತದೆ" –ಎಂಬ ಅರ್ಥವನ್ನೂ ಕೊಡುತ್ತದೆ. ಪ್ರೀತಿಯು ಎದುರಾಗುವ ಎಲ್ಲವನ್ನೂ ಸಹಿಸಿಕೊಳ್ಳುತ್ತದೆ; ಅದು ರಕ್ಷಿಸುವ ಮತ್ತು ಕಾಪಾಡುವ ಗುರಾಣಿಯಾಗಿದೆ.

*"ನಂಬುತ್ತದೆ"*– ಪ್ರೀತಿಯು ಮಾನವರು ಹೇಳುವ ಪ್ರತಿಯೊಂದು ಸುಳ್ಳು ಮತ್ತು ಕಟ್ಟು ಕಥೆಗಳನ್ನು ನಂಬುವದಿಲ್ಲ. ಅದು ಸುಳ್ಳು ಬೋಧಕರ ತತ್ವಗಳನ್ನು ನಂಬುವದಿಲ್ಲ. ದುರಾತ್ಮನು ಹೇಳುವದನ್ನು ಅದು ನಂಬುವದಿಲ್ಲ. ಆದರೆ ಅದರ ನಿಜವಾದ ಅರ್ಥ ಇದಲ್ಲ. ಪ್ರೀತಿಯು ಸತ್ಯದಲ್ಲಿ ಸಂತೋಷಿಸುತ್ತದೆ (ವ 6), ಹಾಗೆಯೇ ಸತ್ಯವನ್ನು ಗುರುತಿಸುತ್ತದೆ. ಅದು ಬುದ್ಧಿಯಿಲ್ಲದ್ದು, ಕಪಟವಾದದ್ದು ಅಥವಾ ಕುರುಡಾದದ್ದು ಅಲ್ಲ. ಹಾಗೆಯೇ ಸ್ವಭಾವಸಿದ್ಧವಾಗಿ ಅದು ಅನುಮಾನಪಡುವಂಥದ್ದು ಮತ್ತು ಭರವಸೆಯಿಟ್ಟ ನಂತರ ಸಂದೇಹಪಡುವಂಥದ್ದು ಅಲ್ಲ. ಅದು ಜನರ ಸಂದೇಹಕ್ಕೆ ತಕ್ಕ ಲಾಭವನ್ನು ಕೊಡುವಂಥದ್ದಾಗಿದೆ.

*"ನಿರೀಕ್ಷಿಸುತ್ತದೆ"*– ಪ್ರೀತಿಯು ಸುಲಭವಾಗಿ ನಿರಾಸೆಗೊಳ್ಳುವದಿಲ್ಲ. ವಿಫಲತೆಯು ಅದನ್ನು

ತುಳಿದುಹಾಕಲಾರದು. ನಿರೀಕ್ಷೆಗೆ ಆಸ್ಪದ ಇಲ್ಲದೆ ಇರುವಾಗಲೂ ಅದು ನಿರೀಕ್ಷಿಸುತ್ತದೆ. ದೇವರ ಕೃಪೆ ಯಾವ ವ್ಯಕ್ತಿಯನ್ನಾದರೂ ತಲುಪುತ್ತದೆ, ಯಾವ ಪರಿಸ್ಥಿತಿಯನ್ನಾದರೂ ಬದಲಾಯಿಸುತ್ತದೆ ಎಂದು ಅದು ನಂಬುತ್ತದೆ.

"*ಸಹಿಸಿಕೊಳ್ಳುತ್ತದೆ*"– ಅಥವಾ "ಅಡಗಿಸಿಕೊಳ್ಳುತ್ತದೆ" – ಈ ಗ್ರೀಕ್ ಪದವು ಮಿಲಟರಿ ಉಪಯೋಗದಿಂದ ಬಂದಿದೆ. ಇದರ ಅರ್ಥ ವೈರಿಯ ಎಲ್ಲಾ ರೀತಿಯ ದಾಳಿಯನ್ನು ಸಹಿಸಿಕೊಳ್ಳುವದು (ಎಫೆ 6:10-17; 2 ತಿಮೊ 2:10 ರೊಂದಿಗೆ ಹೋಲಿಸಿ ನೋಡಿರಿ). "ಅಗಾಫೆ" ದೇವರು ಮತ್ತು ಮನುಷ್ಯರ ಮೇಲಿರುವ ನಿಸ್ವಾರ್ಥವಾದ ಪ್ರೀತಿ, ಎಲ್ಲಾ ರೀತಿಯ ಕಷ್ಟಗಳು, ಹಿಂಸೆಗಳು, ಶ್ರಮೆಗಳು ಮತ್ತು ಸೈತಾನನು ಹಾಗೂ ಮಾನವರ ಆಕ್ರಮಣಗಳ ನಡುವೆಯೂ ಮುಂದೆ ಸಾಗುತ್ತಾ ಹೋಗುತ್ತದೆ. ಅದು ವಿಶ್ವಾಸಿಗಳನ್ನು ಪೂರ್ಣಜಯಶಾಲಿಗಳನ್ನಾಗಿ ಮಾಡುತ್ತದೆ. **8-12**

**13:8-12** "ಅಗಾಪೆ" – ಪ್ರೀತಿಯ ಅರ್ಥವೇನೆಂದರೆ, ಅದು ಶಾಶ್ವತವಾದದ್ದಾಗಿದೆ. ದೇವರು ಪ್ರೀತಿಸ್ವರೂಪನು ಮತ್ತು ಆತನನ್ನು ಪ್ರೀತಿಸುವವರು ಮಾತ್ರವೇ ಆತನೊಂದಿಗೆ ನಿತ್ಯತ್ವದಲ್ಲಿ ಜೀವಿಸುವರು. ಒಳ್ಳೆಯವು ಮತ್ತು ಉಪಯುಕ್ತವಾದವುಗಳು ಎಂದು ಪೌಲನು ಬರೆದಿರುವ ಇತರೆ ಕಾರ್ಯಗಳು ಗತಿಸಿಹೋಗುವವು. ಅನ್ಯಭಾಷೆಗಳು, ಪ್ರವಾದನೆಗಳು ಮತ್ತು ಜ್ಞಾನ ಎಂಬದಾಗಿ ಹೇಳುವ ಮೂಲಕ ಅವನು 12:8-10 ರಲ್ಲಿ ನೋಡಬಹುದಾದ ಆತ್ಮೀಕ ವರಗಳನ್ನು ಸೂಚಿಸುತ್ತಾ ಇದ್ದಾನೆ ಎಂಬದಾಗಿ ಅನ್ನಿಸುತ್ತದೆ, ಆದರೆ ಅವನ ಮಾತುಗಳು ವಿಸ್ತಾರವಾದ ಅರ್ಥಗಳನ್ನು ಹೊಂದಿರಬಹುದು ಅನ್ನಿಸುತ್ತವೆ. ಕೆಲವು ಪಂಡಿತರ ಆಲೋಚನೆ ಏನೆಂದರೆ ಹೊಸ ಒಡಂಬಡಿಕೆಯ ("ಸಂಪೂರ್ಣವಾದದ್ದು") ಮುಗಿದ ನಂತರ ಆ ವರಗಳು ಗತಿಸಿಹೋಗುವವು – ಅಲ್ಲಿಯ ತನಕ (ಅಪೂರ್ಣವಾಗಿರುವ) ವರಗಳು ಅವಶ್ಯವಾಗಿವೆ ಯಾಕಂದರೆ ಸಭೆಗೆ ದೇವರ ಸತ್ಯದ ಪೂರ್ಣ ಪ್ರಕಟನೆಯಿರಲಿಲ್ಲ ಎಂಬದು ಪೌಲನ ಮಾತಿನ ಅರ್ಥವಾಗಿರಬಹುದು. ಸಭೆಯ ಪ್ರಾರಂಭದ ದಿನಗಳಲ್ಲಿ ಮಾತ್ರವೇ ವರಗಳು ಪ್ರಯೋಜನವಾಗಿದ್ದವು (ವ 11) ಆದರೆ ಈಗ ಅದು ಪರಿಪಕ್ವವಾಗಿರುವ ಸಮಯದಲ್ಲಿ ಪ್ರಯೋಜನವಾಗುವದಿಲ್ಲ ಎಂಬದು ಅವರ ಆಲೋಚನೆಯಾಗಿದೆ. ಈ ವ್ಯಾಖ್ಯಾನವು ಸಾಧ್ಯವಿಲ್ಲ ಎಂಬದಾಗಿ ಈ ನೋಟ್ಸ್ ಗಳ ಬರಹಗಾರರಿಗೆ ಅನ್ನಿಸುತ್ತದೆ. 12 ನೇ ವಚನವು "ಪರಿಪೂರ್ಣವಾದದ್ದು" ಈ ಯುಗದ ಕೊನೆಯಲ್ಲಿ ಸಮಾಪ್ತವಾಗುತ್ತದೆ, ಅಥವಾ ವಿಶ್ವಾಸಿಗಳು ಪರಲೋಕದಲ್ಲಿ ಕ್ರಿಸ್ತನಿಗೆ ಮುಖಾಮುಖಿಯಾಗುವಾಗ ಮತ್ತು ಹೊಸ ಒಡಂಬಡಿಕೆಯ ಪೂರ್ಣತೆಯಲ್ಲಿ ಆಗುವದಿಲ್ಲ ಎಂಬದಾಗಿ ಅನ್ನಿಸುತ್ತದೆ. "ಪರಿಪೂರ್ಣತೆಯ" ಸಮಯ ಎಂದರೆ ಈಗ ಕ್ರಿಸ್ತನು ಅವರನ್ನು ತಿಳಿದುಕೊಂಡಿರುವ ಹಾಗೆ ಅವರೂ ಆತನನ್ನು "ತಿಳಿದುಕೊಳ್ಳುವ" ಸಮಯವಾಗಿದೆ. ಇದು ಹೊಸ ಒಡಂಬಡಿಕೆಯು ಪೂರ್ಣಗೊಳ್ಳುವ ಸಮಯದಲ್ಲಿ ಆಗಲಿಲ್ಲ. **8**

**13:8** *"ವಿದ್ಯೆಯೋ ಇಲ್ಲದಂತಾಗುವದು"*– ಪರಿಸ್ಥಿತಿಗನುಸಾರವಾಗಿ ನೋಡುವದಾದರೆ, ಪೌಲನ ಮಾತುಗಳ ಅರ್ಥವೇನೆಂದರೆ ವಿದ್ಯಾವಾಕ್ಯವು (12:8) ಇಲ್ಲದೆ ಹೋಗುವದು. ಅಥವಾ ತಿಳುವಳಿಕೆ ಎಂದರೆ ಅಪೂರ್ಣವಾದ ತಿಳುವಳಿಕೆ ಅಥವಾ ಹುದುವಾಗಿ ತಿಳುವಳಿಕೆಯನ್ನು ಕಾರಣ ಹಾಗೂ ವಿಚಾರಣೆಯ ಮೂಲಕ ಹೊಂದಿಕೊಳ್ಳ ಬಹುದಾಗಿದೆ. ಇವೆಲ್ಲವೂ ಅನಾವಶ್ಯಕವಾಗಿವೆ, ಯಾಕಂದರೆ ಪರಿಪೂರ್ಣವಾದ ತಿಳುವಳಿಕೆಯು ಬರುತ್ತದೆ (ವ 12). **11**

**13:11** ಬಹುಶಃ ಅವನ ಮಾತಿನ ಅರ್ಥವೇನೆಂದರೆ ಭೂಲೋಕದ ಮೇಲೆ ವಿಶ್ವಾಸಿಗಳ ಇಡೀ ಜೀವಿತ ಬಾಲ್ಯದ ದಿನಗಳಂತೆ ಇರುತ್ತದೆ. ಯೇಸು ಕ್ರಿಸ್ತನ ಎರಡನೇ ಬರೋಣದ ನಂತರ ಮಾತ್ರವೇ ಅವರು ಪರಿಪಕ್ವರಾಗುತ್ತಾರೆ. ಆದರೆ ನಾವು ಪ್ರೀತಿ ಮತ್ತು ಆತ್ಮೀಕ ವರಗಳ ವಿಷಯದಲ್ಲಿ ಚಿಕ್ಕ ಮಕ್ಕಳಂತೆ ನಡೆದುಕೊಳ್ಳಬಾರದು ಎಂಬದಾಗಿ ಚಿಕ್ಕ ಸುಳಿವು ಕೊಡಲಾಗಿದೆ ಎಂದು ಅನ್ನಿಸುತ್ತದೆ – 14:20 ನೋಡಿರಿ. **12**

**13:12** *"ಮೊಬ್ಬಾಗಿ"*– ಆಗಿನ ಕಾಲದಲ್ಲಿ ಬಹುತೇಕ ಕನ್ನಡಿಗಳು ಕಳಪೆ ಗುಣಮಟ್ಟದವುಗಳಾಗಿದ್ದವು ಮತ್ತು ಅವುಗಳು ಕಾಣುವ ಪ್ರತಿಬಿಂಬವು ಮೊಬ್ಬಾಗಿಯೇ ಇರುತ್ತಿದ್ದವು. ತಿಳುವಳಿಕೆಯ ವಿಷಯದಲ್ಲಿಯೂ ಈಗ ಕಾರ್ಯಗಳು ಹಾಗೆಯೇ ಇವೆ. **13**

**13:13** ಈ ಮೂರು ಕಾರ್ಯಗಳು ಸಭೆ ಮತ್ತು ವ್ಯಕ್ತಿಗತ ವಿಶ್ವಾಸಿಯ ಜೀವಿತದಲ್ಲಿ ಮೊದಲಿನಿಂದಲೂ ಅವೆ – ಯಾವುದೇ ಆತ್ಮೀಕ ವರಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದವುಗಳಾಗಿವೆ. ಪ್ರೀತಿ ನಂಬಿಕೆ ಅಥವಾ ನಿರೀಕ್ಷೆಗಿಂತ ದೊಡ್ಡದಾಗಿದೆ ಎಂದು ಪೌಲನು ಹೇಳಿರುವದು ಆಶ್ಚರ್ಯವಾಗುತ್ತದೆಯೇ? ನಮ್ಮ ರಕ್ಷಣೆಗೆ ನಂಬಿಕೆಯು ಬಹಳ ಅವಶ್ಯವಾಗಿದೆ (ಯೋಹಾನ 3:36). ದೇವರು ತನ್ನ ವಾಗ್ದಾನಗಳನ್ನು ನೆರವೇರಿಸುತ್ತಾನೆ ಎಂಬ ಆಶಯವೇ ನಿರೀಕ್ಷೆಯಾಗಿದೆ ಮತ್ತು ಇದು ಕ್ರೈಸ್ತೀಯ ಜೀವಿತದ ಅತ್ಯಂತ ಪ್ರಾಮುಖ್ಯವಾದ ಭಾಗವಾಗಿದೆ (ರೋಮಾ 8:24-25). ಪ್ರೀತಿ ಇವೆಲ್ಲವುಗಳಿಗಿಂತ ಹೇಗೆ ದೊಡ್ಡದಾಗಿದೆ? ನಂಬಿಕೆ ತೆಗೆದುಕೊಳ್ಳುತ್ತದೆ, ಪ್ರೀತಿ ಕೊಡುತ್ತದೆ ಮತ್ತು ತೆಗೆದುಕೊಳ್ಳುವದಕ್ಕಿಂತ ಕೊಡುವದೇ ಹೆಚ್ಚು ಭಾಗ್ಯದಾಯಕವಾಗಿದೆ (ಅಪೊ 20:35). ನಂಬಿಕೆಯು ತೆಗೆದುಕೊಳ್ಳುವಂಥ ಕೈಯಾಗಿದೆ, ಪ್ರೀತಿ ಅದು ತೆಗೆದುಕೊಳ್ಳುವ ದೊಡ್ಡ ಕಾರ್ಯವಾಗಿದೆ. ನಿರೀಕ್ಷೆಯು ನಂಬಿಕೆಗೆ ಸಮಾನವಾಗಿದೆ ಮತ್ತು ತನ್ನ ಹಿತವನ್ನೇ ಬಯಸುತ್ತದೆ, ಪ್ರೀತಿ ಇತರರ ಹಿತವನ್ನು ಬಯಸುತ್ತದೆ. ನಂಬಿಕೆ ಮತ್ತು ನಿರೀಕ್ಷೆ ಕೊನೆಗೆ ನಡೆಸುವ ಸಾಧನಗಳಾಗಿವೆ, ಆದರೆ ಪ್ರೀತಿಯೇ ಕೊನೆಯಾಗಿದೆ. ಎಲ್ಲರ ಹಿತಕ್ಕಾಗಿ ಕಾರ್ಯಮಾಡುವಂಥದ್ದು ದೊಡ್ಡದು ಮತ್ತು ಅತ್ಯುತ್ತಮವಾದದ್ದಾಗಿದೆ, ಪ್ರೀತಿ ಇದನ್ನು ಮಾಡುತ್ತದೆ (8:1). 10:24 ಮತ್ತು 10:31 ವಿಶ್ವಾಸಿಗಳು ಮಾಡಬೇಕೆಂದು ಪೌಲನು ಹೇಳಿರುವ ಕಾರ್ಯಗಳನ್ನು ಪ್ರೀತಿಯಿಂದ ಮಾತ್ರವೇ ಮಾಡಲು ಸಾಧ್ಯ. ಈ ಅಧ್ಯಾಯವನ್ನು ಓದಿದ ನಂತರ ಒಂದು ಪ್ರಾಮುಖ್ಯವಾದ ಪ್ರಶ್ನೆ ಉಳಿಯುತ್ತದೆ – ನಾವು ದೇವರನ್ನು ಮತ್ತು ಮನುಷ್ಯರನ್ನು ನಿಸ್ವಾರ್ಥವಾಗಿ ಪ್ರೀತಿಸುವ

“ಅಗಾಫೆಯನ್ನು” ಪಡೆಯುವದು ಹೇಗೆ? ಗಲಾ 5:22; 1 ಯೋಹಾನ 4:7,19; ರೋಮಾ 5:5 ರಲ್ಲಿ ಉತ್ತರವನ್ನು ತಿಳಿದುಕೊಳ್ಳಿರಿ. ಈ ಪ್ರೀತಿಯು ದೇವರಿಂದ ಬರುತ್ತದೆಯಾದರೂ, ವಿಶ್ವಾಸಿಗಳು ಇದಕ್ಕೆ ಅಧೀನರಾಗಬೇಕು, ವಿಧೇಯರಾಗಬೇಕು ಮತ್ತು ಅಭ್ಯಾಸ ಮಾಡಬೇಕು (14:1).

# 14 1

**14:1** *“ಪ್ರೀತಿಯನ್ನು ಅಭ್ಯಾಸ ಮಾಡಿಕೊಳ್ಳಿರಿ”*– ಪೌಲನು 13 ನೇ ಅಧ್ಯಾಯದ ಶ್ರೇಷ್ಠವಾದ ಮಾತುಗಳನ್ನು ಬರೆದಿರುವದು ನಾವು ಅವುಗಳನ್ನು ಅಭ್ಯಾಸ ಮಾಡಬೇಕು ಎಂಬ ಕಾರಣಕ್ಕಾಗಿಯೇ ಹೊರತು ನಾವು ಪ್ರೀತಿಯ ಸ್ವಭಾವದ ವಿಷಯದಲ್ಲಿ ಆಶ್ಚರ್ಯಪಡಬೇಕು ಅಥವಾ ಅವನ ಬರವಣಿಗೆಯ ಸಾಮರ್ಥ್ಯವನ್ನು ಶ್ಲಾಘಿಸಬೇಕು ಎಂಬ ಕಾರಣಕ್ಕಾಗಿಯಲ್ಲ.

*“ಅಪೇಕ್ಷಿಸಿರಿ”*– 12:31.

*“ಪ್ರವಾದನೆ”*– 12:10. ಆತ್ಮೀಕ ವರಗಳಲ್ಲಿ ಇದು ಶ್ರೇಷ್ಠವಾದ ವರವಾದ್ದರಿಂದ ಕೊರಿಂಥದ ವಿಶ್ವಾಸಿಗಳು ಇದನ್ನು ಹೊಂದಲು ಅಪೇಕ್ಷಿಸಬೇಕೆಂದು ಪೌಲನು ಬಯಸಿದನು. ಪ್ರವಾದನೆಯು ವಾಣಿಯನ್ನಾಡುವ ವರಕ್ಕಿಂತ ಹೇಗೆ ಶ್ರೇಷ್ಠವಾಗಿದೆ ಎಂಬದನ್ನು ಈ ಅಧ್ಯಾಯದ ಬಹುತೇಕ ಭಾಗಗಳಲ್ಲಿ ನಾವು ನೋಡಬಹುದು (ಉಪಸ್ಥಿತರಾಗಿರುವವರಿಗೆ ಗೊತ್ತಿಲ್ಲದ ಭಾಷೆಯಲ್ಲಿ ಯಾರಾದರೂ ಸಂದೇಶವನ್ನು ತರುವಾಗ ಮತ್ತು ಅದಕ್ಕೆ ವಿವರಿಸಿ ಹೇಳುವವರು ಇರುವಾಗ; ಅವನು ನಿಜವಾಗಿಯೂ ಪ್ರವಾದನೆಯ ವರವನ್ನು ವಿವಿಧ ರೀತಿಯಲ್ಲಿ ಉಪಯೋಗಿಸುವಾಗ – ವ 5 ಮಾತ್ರ ಆಗುವದಿಲ್ಲ). **2**

**14:2** ಕೊರಿಂಥದಲ್ಲಿ ಅಭ್ಯಾಸ ಮಾಡಲಾಗುತ್ತ ಇದ್ದ ಅನ್ಯಭಾಷೆಗಳು ಅಪೊ 2:4-11 ರಲ್ಲಿ ತಿಳಿಸಲಗಿರುವ ಆತ್ಮೀಕ ಸಾಮರ್ಥ್ಯವು ಬೇರೆಬೇರೆಯಾಗಿದೆ ಎಂಬದು ಕೆಲವು ಜನರಿಗೆ ಪೂರ್ಣ ಮನವರಿಕೆಯ ಪುರಾವೆಯಿಂದ ದೃಡಪಟ್ಟಿದೆ. ಪಂಚಾಶತ್ತಮ ದಿನದಂದು ಅಪೊಸ್ತಲರು ತಾವು ಕಲಿಯದೆ ಇದ್ದ ಮತ್ತು ತಮಗೆ ತಿಳಿಯದೆ ಇದ್ದ ಭಾಷೆಯಲ್ಲಿ ಮಾತನಾಡಿದರು ಆದರೆ ಅಲ್ಲಿದ್ದ ಜನರು ಯಾವುದೇ ತರ್ಜುಮೆಯಿಲ್ಲದೆ ಅವರ ಮಾತುಗಳನ್ನು ಅರ್ಥ ಮಾಡಿಕೊಂಡರು. ಆದರೆ ಕೊರಿಂಥದಲ್ಲಿ ವಿವರಿಸಿ ಹೇಳುವವರು ಇಲ್ಲದೆ ಹೋದರೆ ಯಾರೇ ಅನ್ಯಭಾಷೆಯಲ್ಲಿ ಮಾತನಾಡಿದರು ಜನರಿಗೆ ಅವುಗಳು ಅರ್ಥವಾಗುತ್ತಾ ಇರಲಿಲ್ಲ (ವ 5,13). “ಅನ್ಯಭಾಷೆ” ಭೂಮಿಯ ಮೇಲೆ ಮಾತನಾಡುವ ಭಾಷೆಯಲ್ಲ ಎಂಬದಾಗಿ ಆಲೋಚಿಸುವದಕ್ಕೆ ಯಾವ ಕಾರಣವಿದೆ?

*“ಯಾರೂ ತಿಳಿದುಕೊಳ್ಳುವದಿಲ್ಲ”*– “ಯಾರೂ ತಿಳಿದುಕೊಳ್ಳುವದಿಲ್ಲ” ಎಂಬ ಪದ ಇಲ್ಲಿ ಗ್ರೀಕ್ ನಿಂದ ಬಂದಿರುವದಲ್ಲ. “ಯಾರಿಗೂ ಅದು ತಿಳಿಯುವದಿಲ್ಲ” ಎಂಬದಾಗಿ ಹೇಳುವದರಿಂದ ಅದು ಸಮರ್ಥನೀಯವೆಂದು ಅನ್ನಿಸುತ್ತದೆ ಯಾಕಂದರೆ ಸಭೆಯು

ವೃದ್ಧಿಯಾಗಬೇಕಾದರೆ ತರ್ಜುಮೆ ಮಾಡುವವರು ಅವಶ್ಯವಾಗಿ ಬೇಕಾಗಿದ್ದಾರೆ (ವ 5, ಇತ್ಯಾದಿ). ಆದರೆ "ತಿಳಿಯದ ಭಾಷೆ" ಎಂದರೆ ಭೂಲೋಕದಲ್ಲಿ ಯಾರೂ ಅದನ್ನು ಉಪಯೋಗಿಸುವದಿಲ್ಲ ಎಂಬದಾಗಿಯಲ್ಲ, ಬದಲಾಗಿ ಆ ಭಾಷೆ ಯಾರಿಗೂ ಗೊತ್ತಿಲ್ಲದಿರುವ ಸ್ಥಳದಲ್ಲಿ ಉಪಯೋಗಿಸಲಾಗುತ್ತದೆ ಅಷ್ಟೇ.

*"ದೇವರ ಸಂಗಡ"*– ಇದರ ಅರ್ಥ ಅಲ್ಲಿ ಬರುವವರೊಳಗೆ ಯಾರಿಗೂ ಅದು ಅರ್ಥವಾಗುವದಿಲ್ಲ ಬದಲಾಗಿ ದೇವರಿಗೆ ಮತ್ತು (ಬಹುಶಃ) ಅದನ್ನು ಹೇಳುವವನಿಗೆ ಮಾತ್ರವೇ ಅರ್ಥವಾಗುತ್ತಾ ಇರಬಹುದು (ವ 4,28).

*"ರಹಸ್ಯಾರ್ಥಗಳು"*– 4:1; ಮತ್ತಾಯ 13:11; ರೋಮಾ 16:25. **3-4**

**14:3-4** ಈ ಕಾರಣದಿಂದಲೇ "ಪ್ರವಾದನೆಯು" "ವಾಣಿಯನ್ನಾಡುವದಕ್ಕಿಂತ" ಹೆಚ್ಚಿನದ್ದಾಗಿದೆ – ಪ್ರವಾದನೆಯು ಇತರರಿಗೆ ಲಾಭದಾಯಕವಾಗಿದೆ. 10:24,33 ನೋಡಿರಿ. **4**

**14:4** *"ತನ್ನ ಭಕ್ತಿಯನ್ನು ವೃದ್ಧಿಮಾಡಿಕೊಳ್ಳುತ್ತಾನೆ"*– ವೃದ್ಧಿ ಮಾಡಿಕೊಳ್ಳುವದು ಎಂದರೆ ಕಟ್ಟುವದಾಗಿದೆ. ಇಲ್ಲಿ ಇದರ ಅರ್ಥ ಆತ್ಮೀಕವಾಗಿ ಬಲಗೊಳ್ಳುವದಾಗಿದೆ. ಹಾಗೆಯೇ 8:1; 10:23; 1 ಥೆಸ 5:11 ಸಹ ನೋಡಿರಿ. ತನಗೇ ಅರ್ಥವಾಗದ ಭಾಷೆಯಲ್ಲಿ ಒಬ್ಬನು ಮಾತನಾಡುವದಾದರೆ ಅದರಿಂದ ಅವನು ವೃದ್ಧಿಯಾಗಲು ಸಾಧ್ಯವೇ? ಆಗುವದಿಲ್ಲ ಎಂಬದಾಗಿ ಅನ್ನಿಸುತ್ತದೆ. ಇತರರಿಗೆ ಅರ್ಥವಾಗದಿದ್ದರೂ ಹೇಳುವವನಿಗೆ ಅರ್ಥವಾಗುವದರಿಂದ ಅವನು ವೃದ್ಧಿಯಾಗುತ್ತಾನೆ ಎಂಬದು ಪೌಲನ ಮಾತುಗಳ ಅರ್ಥವಾಗಿದೆಯೇ? ಬಹುಶಃ ಹಾಗೆಯೇ ಇರಬಹುದು. ಸತ್ಯವನ್ನು ಕೇಳಿಸಿಕೊಳ್ಳುವದು ಮತ್ತು ಅರ್ಥಮಾಡಿಕೊಳ್ಳುವದರ ಫಲಿತಾಂಶವಾಗಿ ವೃದ್ಧಿಯಾಗಬಹುದು ಎಂದು ನಾವು ಯೋಚಿಸುತ್ತೇವೆ – ಮುಂದಿನ ವಚನವನ್ನು ನೋಡಿರಿ. **5**

**14:5** ಪೌಲನು ವಾಣಿಯನ್ನಾಡುವ ವರವನ್ನು ಕಡೆಗಣಿಸುತ್ತಾ ಇಲ್ಲ. ಸಭೆಯ ಹಿತಕ್ಕಾಗಿ ಅದು ದೇವರಾತ್ಮನು ಕೊಟ್ಟಿರುವ ಪ್ರಕಟನೆಯಾಗಿದೆ ಎಂದು ಪೌಲನು ತಾನೇ ಕಲಿಸಿದ್ದಾನೆ (12:7,10). ಆದರೆ ಪೌಲನು ಈ ವರವನ್ನು ದುರುಪಯೋಗಪಡಿಸಿಕೊಳ್ಳುವದರ ವಿರುದ್ಧವಾಗಿ ಮಾತನಾಡುತ್ತಾ ಇದ್ದಾನೆ. ವಿವರಿಸುವವರು ಇಲ್ಲದೆ ಹೋದರೆ ಅವರು ಆ ವರವನ್ನು ಉಪಯೋಗಿಸಬಾರದು ಎಂಬದಾಗಿ ಅವನು ಹೇಳುತ್ತಾ ಇದ್ದಾನೆ (ವ 13,27,28).

*"ಅರ್ಥವನ್ನು ಹೇಳುವವನು ಇರದೆ ಹೋದರೆ"*– ಇದು ಸೂಚಿಸುವದೇನೆಂದರೆ "ವಾಣಿಗಳು" ಅರ್ಥಪೂರ್ಣವಾದ ಭಾಷೆಗಳಾಗಿದ್ದು ಹೇಳುವವರು ಅದನ್ನು ಬೇರೆ ಭಾಷೆಗಳಲ್ಲಿ ಭಾಷಾಂತರ ಮಾಡಲು ಶಕ್ತರಾಗಿರುತ್ತಾರೆ ಮತ್ತು ತಿಳಿಯದ ಭಾಷೆಯಲ್ಲಿ ಹೇಳಿರುವಾಗ, ಅದನ್ನು ವಿವರಿಸಿದರೆ, ಅದರಿಂದ ಸಭೆ ವೃದ್ಧಿಯಾಗುತ್ತದೆ. ಪೌಲನು ಒತ್ತಿ ಹೇಳುವದೇನೆಂದರೆ ಹೇಳಿರುವದನ್ನು ತಿಳಿದುಕೊಳ್ಳುವಾಗ ವೃದ್ಧಿಯಾಗಲು ಸಾಧ್ಯವಾಗುತ್ತದೆ. **6**

**14:6** 12:8-10 ನೋಡಿರಿ.

“*ಪ್ರಯೋಜನ*”– ಪೌಲನು ಯಾವಾಗಲೂ ಇತರರಿಗೆ ಒಳ್ಳೆಯದಾಗುವದರ ಬಗ್ಗೆಯೇ ಯೋಚಿಸುತ್ತಾ ಇದ್ದನು ಮತ್ತು ವಿಶ್ವಾಸಿಗಳೆಲ್ಲರೂ ಅದೇ ಉದ್ದೇಶವುಳ್ಳವರಾಗಿರಬೇಕು ಎಂಬದಾಗಿ ಬಯಸಿದನು ಎಂದು ನಾವು ಮತ್ತೊಮ್ಮೆ ನೋಡಬಹುದು (ವ 12,19,26).

“*ಪ್ರಕಟನೆ*”– ವ 26. ಸಭೆಯಲ್ಲಿ ಇತರರಿಗೆ ತಿಳಿಸುವ ಸಲುವಾಗಿ ದೇವರು ಯಾರಿಗಾದರೂ ಸಂದೇಶವನ್ನು ಕೊಡುತ್ತಾನೆ ಎಂಬದು ಇದರ ಅರ್ಥವಾಗಿದೆ. ಇದು ಪ್ರವಾದನೆಯ ವರಕ್ಕೆ ಸಮಾನವಾಗಿದೆ ಮತ್ತು ಪ್ರಕಟನೆಯು ಕೂಟದಲ್ಲಿ ಕೂತಿರುವವನಿಗೆ ಕೂಡಲೇ ಬರುವದಾಗಿದೆ (ವ 29-31). **7-11**

**14:7-11** ಇಲ್ಲಿ ಮುಖ್ಯ ವಿಷಯವೇನೆಂದರೆ ತಿಳಿಯದ ಭಾಷೆಯನ್ನು ಮಾತನಾಡುವಾಗ ಅದನ್ನು ವಿವರಿಸುವವರು ಯಾರೂ ಇಲ್ಲವೆಂದರೆ ಅದನ್ನು ಕೇಳುವವರಿಗೆ ಯಾವುದೇ ಪ್ರಯೋಜನವಾಗುವದಿಲ್ಲ. 10, 11 ವಚನಗಳಲ್ಲಿ ಹೇಳಲಾಗಿರುವ ವಾಣಿಗಳು ಸೂಚಿಸುವದೇನೆಂದರೆ ಸಾಧಾರಣವಾದ ಅನ್ಯಭಾಷೆಗಳಲ್ಲದೆ ಬೇರೆಯ ಭಾಷೆಗಳಾಗಿವೆ. **12**

**14:12** ವಚನಗಳು 3,4,6,19,26,31; 10:24. **13**

**14:13** ವಿವರಿಸುವವರು ಇದ್ದರೆ ಮಾತ್ರವೇ ಇತರರು ಅಭಿವೃದ್ಧಿಯಾಗುತ್ತಾರೆ. **14-15**

**14:14-15** ಪೌಲನು ಇಲ್ಲಿ ಮನಸ್ಸು ಮತ್ತು ಬುದ್ಧಿಗೆ ಪ್ರಾಮುಖ್ಯತೆ ಕೊಟ್ಟಿರುವದನ್ನು ಗಮನಿಸಿರಿ. “ನನ್ನ ಬುದ್ಧಿ ನಿಷ್ಫಲವಾಗಿರುವದು” ಎಂಬ ಪೌಲನ ಕಠಿಣ ಪದದ ಅರ್ಥವೇನು? ಬಹುಶಃ ಇದರ ಅರ್ಥ ಯಾವನಾದರೂ ತನಗೇ ಅರ್ಥವಾಗದ ಭಾಷೆಯಲ್ಲಿ ಪ್ರಾರ್ಥನೆ ಮಾಡುವದಾದರೆ, ಅವನ ಅಂತರಾತ್ಮವು ಪ್ರಾರ್ಥಿಸುತ್ತಾ ಇರುವದು ಆದರೆ ಅವನ ಬುದ್ಧಿ ಅದರಲ್ಲಿ ಭಾಗಿಯಾಗಿರುವದಿಲ್ಲ. ಅವನು ಏನು ಹೇಳುತ್ತಾ ಇದ್ದಾನೆ ಎಂಬದು ಅವನಿಗೇ ಅರ್ಥವಾಗಲಿಲ್ಲವೆಂದರೆ, ಒಂದುವೇಳೆ ಅವನಿಗೆ ಅರ್ಥವಾದರೂ ಆಗುತ್ತಿದ್ದ ಪೂರ್ಣ ವೃದ್ಧಿಯೂ ಆಗದೆ ಇರುವದಾಗಿದೆ. ಅಥವಾ ಒಂದುವೇಳೆ ಅವನಿಗೆ ತಾನು ಹೇಳುತ್ತಾ ಇರುವದು ಅರ್ಥವಾದರೂ, ಅವನ ತಿಳುವಳಿಕೆ, ಮಾನಸಿಕ ಚಟುವಟಿಕೆ ಇತರರಲ್ಲಿ ನಿಷ್ಫಲವಾಗಿರುತ್ತದೆ ಯಾಕಂದರೆ ಅವನು ಅವರಿಗೆ ಅವುಗಳನ್ನು ಹೇಳುತ್ತಾ ಇಲ್ಲ. ಯಾವುದೇ ಪಕ್ಷದಲ್ಲಾದರೂ, ಅವನ ಆರಾಧನೆಯು ಅರ್ಥವಾಗುವದಾಗಿರಬೇಕು ಎಂಬದಾಗಿ ಪೌಲನು ಬಯಸಿದನು ಎಂಬದು 15 ನೇ ವಚನದಲ್ಲಿ ಸ್ಪಷ್ಟವಾಗುತ್ತದೆ. ಅವನು ತನ್ನ ಮನಸ್ಸು ಹಾಗೂ ಆತ್ಮ ಎರಡೂ ಅದರಲ್ಲಿ ಭಾಗಯಾಗಬೇಕು ಎಂಬದಾಗಿ ಬಯಸಿದನು. **17**

**14:17** “*ಭಕ್ತಿವೃದ್ಧಿ*”– ಪೌಲನ ಸತತವಾದ ಈ ಧ್ಯೇಯವನ್ನು ಮತ್ತೊಮ್ಮೆ ಗಮನಿಸಿರಿ (ವ 3,4,19,26). **18**

**14:18** “*ವಾಣಿಗಳು*”– ಅಥವಾ “ಭಾಷೆಗಳು” ಪೌಲನು ತನಗೆ ಈ ವರವಿಲ್ಲ ಎಂಬ ರೀತಿಯಲ್ಲಿ ಇದನ್ನು ಬರೆದಿಲ್ಲ. ಅವನಿಗೆ ಈ ವರವಿತ್ತು ಮತ್ತು ಇದಕ್ಕಾಗಿ ಅವನು ದೇವರಿಗೆ ಸ್ತೋತ್ರವನ್ನು ಸಲ್ಲಿಸಿದನು. **19**

**14:19** *"ಇತರರಿಗೆ ಉಪದೇಶ ಮಾಡುವದು"*– ಪೌಲನು (ನಮ್ಮ ಮಾದರಿ) ಯಾವಾಗಲೂ ಇತರರ ಬಗ್ಗೆ ಯೋಚಿಸುತ್ತಾ ಇದ್ದನು ಮತ್ತು ಅವರನ್ನು ಹೇಗೆ ಅಭಿವೃದ್ಧಿಪಡಿಸಬೇಕು, ಸೂಚನೆ ಕೊಡಬೇಕು, ಪ್ರೋತ್ಸಾಹಪಡಿಸಬೇಕು, ಬಲಪಡಿಸಬೇಕು ಮತ್ತು ಸಂತೈಸಬೇಕು ಎಂಬದಾಗಿ ಚಿಂತಿಸುತ್ತಾ ಇದ್ದನು. **20**

**14:20** 13:11 ನೋಡಿರಿ. **21-22**

**14:21-22** ಯೆಶಾಯ 28:11-12. ಇಸ್ರಾಯೇಲ್ ಜನರು ಅಪನಂಬಿಕೆಗೆ ಒಳಗಾಗಿದ್ದರು ಮತ್ತು ಅವರಿಗೆ ಅರ್ಥವಾಗುವ ಭಾಷೆಯಲ್ಲಿಯೇ ಮಾತನಾಡುತ್ತಾ ಇದ್ದ ಅವರ ಪ್ರವಾದಿಗಳ ಮಾತುಗಳನ್ನೂ ಕೇಳದವರಾಗಿದ್ದರು. ಆದ್ದರಿಂದ ನ್ಯಾಯವಿಚಾರಣೆಯಲ್ಲಿ, ಜನರಿಗೆ ಅರ್ಥವಾಗದ ಭಾಷೆಯಲ್ಲಿ ಮಾತನಾಡುವವರನ್ನು ದೇವರು ಕಳುಹಿಸುತ್ತಾನೆ. ಪೌಲನು ಇದರಿಂದ ಕ್ರೈಸ್ತರಿಗೆ ಪ್ರಾಮುಖ್ಯವಾದ ಪಾಠವನ್ನು ತಿಳಿಸಿದ್ದಾನೆ. ಅವನು ಹೇಳುವದೇನೆಂದರೆ ವಾಣಿಗಳು "ಗುರುತುಗಳಾಗಿವೆ" – ಅವು ದೇವರಾತ್ಮನ ಪ್ರಸನ್ನತೆಯನ್ನು ಸೂಚಿಸುತ್ತವೆ (12:7). ಅವನು ಹೇಳುವದೇನೆಂದರೆ ಈ "ಗುರುತು" ವಿಶ್ವಾಸಿಗಳಿಗೆ ಮನವರಿಕೆ ಮಾಡಲು ಅಥವಾ ಅನ್ಯಭಾಷೆಯನ್ನು ಮಾತನಾಡುವ ವ್ಯಕ್ತಿಯಲ್ಲಿ ದೇವರಾತ್ಮನು ಇದ್ದಾನೆ ಎಂಬದನ್ನು ದೃಢಪಡಿಸುವಂಥದ್ದಲ್ಲ (ಯಾಕಂದರೆ ಇದಕ್ಕಿಂತಲೂ ದೊಡ್ಡದಾದ ಹಾಗೂ ಅವಶ್ಯಕವಾದ ಬೇರೆ ಪುರಾವೆಗಳಿವೆ). ವಾಣಿಗಳನ್ನಾಡುವ ವರ ಅವಿಶ್ವಾಸಿಗಳಿಗೆ ಗುರುತಾಗಿದೆ (ಅಪೊ 2:4-13 ರೊಂದಿಗೆ ಹೋಲಿಸಿ ನೋಡಿರಿ). ಪ್ರವಾದನೆಯ ವರವಾದರೋ ವಿಶ್ವಾಸಿಗಳ ಅಭಿವೃದ್ಧಿಗಾಗಿ ಕೊಡಲಾಗಿದೆ (ವ 3,4). 21 ನೇ ವಚನದಲ್ಲಿ "ವಾಣಿಗಳು" ಅನೇಕ ದೇಶಗಳಲ್ಲಿ ಮಾತನಾಡುವ ಭಾಷೆಗಳನ್ನು ಸೂಚಿಸುತ್ತವೆ ಎಂಬದನ್ನು ನಾವು ಗುರುತಿಸಬೇಕು. ಆದರೆ 22 ನೇ ವಚನದಲ್ಲಿ ಬೇರೆ ರೀತಿಯಾಗಿದೆಯೇ? **23**

**14:23** 22ನೇ ವಚನದಲ್ಲಿ ವಾಣಿಗಳನ್ನಾಡುವ ವರವನ್ನು ಸರಿಯಾಗಿ ಉಪಯೋಗಿಸುವದರ ಬಗ್ಗೆ ಪೌಲನು ಮಾತನಾಡಿದ್ದಾನೆ. ಆದರೆ ಇಲ್ಲಿ ಅದನ್ನು ಸರಿಯಾಗಿ ಉಪಯೋಗ ಮಾಡದೆ ಇರುವದರ ಬಗ್ಗೆ ಮಾತನಾಡಿದ್ದನೆ – ಎಲ್ಲರೂ ವಾಣಿಗಳನ್ನಾಡುತ್ತಾ ಇದ್ದರು ಆದರೆ ಅವುಗಳನ್ನು ವಿವರಿಸುವವನು ಒಬ್ಬನೂ ಇರಲಿಲ್ಲ. **24**

**14:24** *"ಕ್ರಿಸ್ತನಂಬಿಕೆಯಿಲ್ಲದವನು"*– (ವ 24) – ಅಂದರೆ ಸುವಾರ್ತೆಯ ಸಂದೇಶ ಹಾಗೂ ಯೇಸು ಕ್ರಿಸ್ತನ ಬೋಧನೆಗಳನ್ನು ಇನ್ನು ಅರ್ಥಮಾಡಿಕೊಂಡಿರದವನು. ಹೇಳಲಾಗುವ ಪ್ರವಾದನಾ ವಾಕ್ಯಗಳನ್ನು ಅರ್ಥಮಾಡಿಕೊಳ್ಳಲು ಅವನು ಶಕ್ತನಾಗಿರುವನು. ಅವುಗಳು ಅವನಲ್ಲಿ ಪಾಪದ ಅರುಹನ್ನು ಹುಟ್ಟಿಸುವವು ಮತ್ತು ಅವನನ್ನು ಕ್ರಿಸ್ತನ ವಿಶ್ವಾಸಿಯನ್ನಾಗಿ ಮಾಡುವವು.

*"ಅರುಹು"*– ಯೋಹಾನ 16:8-11 ರೊಂದಿಗೆ ಹೋಲಿಸಿ ನೋಡಿರಿ. **26-40**

**14:26-40** ವಿಶ್ವಾಸಿಗಳು ಸೇರಿ ಬರುವ ಕೂಟಗಳಲ್ಲಿ ಆತ್ಮೀಕ ವರಗಳನ್ನು ಸರಿಯಾಗಿ

ಉಪಯೋಗಿಸುವದರ ಬಗ್ಗೆ ಪೌಲನು ಇಲ್ಲಿ ಮಾತನಾಡಿದ್ದಾನೆ. ಅವನು ಕ್ರಮಬದ್ಧತೆಗೆ ಆದ್ಯತೆಯನ್ನು ಕೊಟ್ಟಿದ್ದಾನೆ (ವ 26,31,33,40). **26**

**14:26** *"ಪ್ರಕಟನೆ"*– ವ 6.

*"ಭಕ್ತಿವೃದ್ಧಿ"*– ವ 3,4,12,31. "ಭಕ್ತಿವೃದ್ಧಿ" ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದ ನಿಜವಾದ ಅರ್ಥ "ಮನೆಯನ್ನು ಕಟ್ಟುವದು." ಸಾಂಕೇತಿಕವಾಗಿ, ಕಟ್ಟುವದು, ಆತ್ಮೀಕ ಬೆಳವಣಿಗೆಯನ್ನು ಪ್ರಚುರಪಡಿಸುವದು ಎಂಬದಾಗಿದೆ. **27**

**14:27** *"ಒಬ್ಬೊಬ್ಬರಾಗಿ"*– ಅನೇಕರು ಒಂದೇ ಸಮಯದಲ್ಲಿ ಮಾತನಾಡಲು ಪ್ರಯತ್ನಿಸುತ್ತಾ ಇದ್ದರು ಆದ್ದರಿಂದ ಗೊಂದಲಗಳಾಗುತ್ತಾ ಇದ್ದವು ಎಂದು ಅನ್ನಿಸುತ್ತದೆ.

*"ವಿವರಿಸುವವನು"*– ವ 5,13. **28**

**14:28** *"ತನ್ನೊಂದಿಗೆ"*– ವ 2. ಇದರ ಅರ್ಥ ವಾಣಿಯನ್ನಾಡುವ ವರ ಇದ್ದರಿಗೆ ತಾವು ಮಾತನಾಡುವ ಭಾಷೆ ಅರ್ಥವಾಗುತ್ತಾ ಇತ್ತು ಮತ್ತು ಅವರು ಗಟ್ಟಿಯಾಗಿ ಮಾತನಾಡದೆ ಅದನ್ನು ಅಭ್ಯಾಸ ಮಾಡಬಹುದು ಎಂಬದು ಇದರ ಅರ್ಥವಾಗಿದೆ. **29**

**14:29** *"ವಿವೇಚನೆ ಮಾಡಲಿ"*– 1 ಥೆಸ 5:20-21. ಏನು ಹೇಳಲಾಯಿತು ಎಂಬದನ್ನು ಅವರು ವಿವೇಚಿಸಬೇಕು ಯಾಕಂದರೆ ಕೆಲವೊಮ್ಮೆ ಸುಳ್ಳು ಪ್ರವಾದಿಗಳು ಮತ್ತು ಸುಳ್ಳು ಪ್ರವಾದನೆಗಳು ಬರುತ್ತಾ ಇದ್ದವು. ಹೇಳಲಾಗಿರುವ "ಪ್ರವಾದನೆಗಳಿಗೆ" –ವಿರುದ್ಧವಾಗಿ ಏನನ್ನು ವಿವೇಚಿಸಬೇಕು. ಹಳೆಯ ಒಡಂಬಡಿಕೆಯ ವಚನಗಳಲ್ಲಿ ಮತ್ತು ಯೇಸು ಕ್ರಿಸ್ತನು ಹಾಗೂ ಆತನ ಅಪೊಸ್ತಲರ ಮೂಲಕ ಪ್ರಕಟಪಡಿಸಲಾಗಿರುವ ದೇವರ ಸತ್ಯವನ್ನು ವಿವೇಚಿಸಬೇಕು. ಒಂದುವೇಳೆ ಯಾವುದೇ ವಿಷಯವಾದರೂ ಆ ಸತ್ಯಕ್ಕೆ ಅನುಗುಣವಾಗಿಲ್ಲವೆಂದರೆ ಅದು ಸುಳ್ಳು ಮತ್ತು ಅಪಾಯಕಾರಿಯಾಗಿದೆ. **30**

**14:30** ವಚನ 6,26. **31**

**14:31** ಪೌಲನು ಈ ಅಧ್ಯಾಯದಲ್ಲಿ ಎಲ್ಲವನ್ನು ಎಲ್ಲರ ಹಿತಕ್ಕಾಗಿ ಮಾಡಬೇಕು ಎಂಬದಾಗಿ ಎಷ್ಟು ಸಲ ಹೇಳಿದ್ದಾನೆ ಎಂಬದನ್ನು ಗಮನಿಸಿರಿ. **32-33**

**14:32-33** ಆತ್ಮೀಕ ವರಗಳನ್ನು ಉಪಯೋಗಿಸುವದೆಂದರೆ ಒಬ್ಬನು ತನ್ನ ಮೇಲೆ ನಿಯಂತ್ರಣ ಕಳೆದುಕೊಳ್ಳುವದು ಎಂಬದಾಗಿಯಲ್ಲ. ಅವರು ಯಾರಲ್ಲಿ ಕೆಲಸ ಮಾಡುತ್ತಾ ಇದ್ದರೋ ಆ ವ್ಯಕ್ತಿಯ ಚಿತ್ತ ಮತ್ತು ಮನಸ್ಸನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವದಿಲ್ಲ. ಪ್ರವಾದನೆ ಮತ್ತು ವಾಣಿಯನ್ನಾಡುವ ವರ ಇರುವವರು (ಹಾಗೂ ಬೇರೆ ಯಾವುದೇ ವರ ಇರುವವರು) ಒಂದುವೇಳೆ ಆಯ್ಕೆ ಮಾಡಿಕೊಂಡರೆ ಮೌನವಾಗಿರಬಹುದು (ವ 28,30). ಇಲ್ಲವಾದರೆ ಯಾವುದೂ ಕ್ರಮವಾಗಿ ಇರುವದಿಲ್ಲ, ಗೊಂದಲ ಮತ್ತು ಕ್ರಮವಿಲ್ಲದಿರುವಿಕೆಯು ದೇವರ ಸ್ವಭಾವಗಳಿಗೆ ವಿರುದ್ಧವಾದವುಗಳಾಗಿವೆ. **34**

**14:34** ಈ ಅಧ್ಯಾಯದ ವಿಷಯ ಸಭೆಯ ಸಾರ್ವಜನಿಕ ಕೂಟಗಳಲ್ಲಿ ಕೆಲವು ವರಗಳನ್ನು

ಉಪಯೋಗಿಸುವದಾಗಿದೆ – ಆ ವರಗಳಲ್ಲಿ ಮಾತನಾಡುವದು ಸಹ ಸೇರಿದೆ. ಸ್ತ್ರೀಯರು ಇದನ್ನು ಮಾಡಬಾರದು ಎಂದು ಪೌಲನು ಹೇಳಿದ್ದಾನೆ. ಅವರಿಗೆ ಈ ವರಗಳು ಇರಬಹುದು ಆದರೆ ಅವುಗಳನ್ನು ಅವರು ಬೇರೆ ಸಮಯಗಳಲ್ಲಿ ಉಪಯೋಗಿಸಬೇಕು. 11:5-6; 1 ತಿಮೊ 2:11-14 ರಲ್ಲಿ ನೋಟ್ಸ್ ನೋಡಿರಿ. ಸ್ತ್ರೀಯರು ಸಾರ್ವಜನಿಕ ಕೂಟಗಳಲ್ಲಿ ಪ್ರಾರ್ಥನೆಯನ್ನೂ ಮಾಡಬಾರದು ಎಂಬದಾಗಿ ಪೌಲನು ಹೇಳುತ್ತಾನೆ ಎಂದು ಕೆಲವರು ಹೇಳುತ್ತಾರೆ, ಆದರೆ ಅದು ಸಂಶಯದ ವಿಷಯವಾಗಿದೆ. ಇಲ್ಲಿ ವಿಷಯವೇನೆಂದರೆ ಪ್ರವಾದಿಸುವದು ಮತ್ತು ವಾಣಿಯನ್ನಾಡುವದು ಹಾಗೂ ವಾಣಿಗಳನ್ನು ವಿವರಿಸುವದು (ವ 26-31). ಈ ವಚನಗಳಲ್ಲಿ "ಮಾತಾಡುವದು" ಎಂಬದಾಗಿ ಭಾಷಾಂತರ ಮಾಡಿರುವ ಗ್ರೀಕ್ ಪದವು 5,6,9,19 ಇತ್ಯಾದಿ ವಚನಗಳಲ್ಲಿ ಹೇಳಲಾಗಿರುವದಕ್ಕೆ ಸಮಾನವಾಗಿದೆ.

*"ಅಧೀನದಲ್ಲಿರಬೇಕು"*– 11:3,8,9; ಎಫೆ 5:24; 1 ತಿಮೊ 2:11-12; 1 ಪೇತ್ರ 3:1,5,6. **35**

**14:35** *"ತಮ್ಮ ಗಂಡಂದಿರನ್ನು ಕೇಳಲಿ"*– ಇದರ ಅರ್ಥ, ಒಂದುವೇಳೆ ಅವರ ಗಂಡಂದಿರು ಯೇಸು ಕ್ರಿಸ್ತನ ವಿಶ್ವಾಸಿಗಳಾಗಿದ್ದರೂ ಅವರನ್ನು ಕೇಳಬಹುದು. ಒಂದುವೇಳೆ ಇಲ್ಲವೆಂದರೆ (ಇದನ್ನು ಹೇಳುವದು ಅವಶ್ಯವಲ್ಲ ಎಂದು ಪೌಲನು ನೆನೆಸಿದರೂ) ಅವರು ಸಭೆಯಲ್ಲಿರುವ ಸಭಾಪಾಲಕರನ್ನು ಮತ್ತು ಬೋಧಕರನ್ನು ಅಥವಾ ಅವರಿಗಿಂತ ಹೆಚ್ಚು ತಿಳುವಳಿಕೆಯಿರುವ ಇತರೆ ಸ್ತ್ರೀಯರನ್ನು ಕೇಳಬಹುದು.

*"ನಾಚಿಕೆ"*– 11:6. ಗ್ರೀಕ್ ಪದದ ಅರ್ಥವೇನೆಂದರೆ "ಮೂಲ", "ಲಜ್ಜೆಗೆಟ್ಟ," "ಶುದ್ಧತೆ ಅಥವಾ ನಮ್ರತೆಗೆ ವಿರುದ್ಧವಾದದ್ದು", "ಯೋಗ್ಯವಾಗಿರುವದನ್ನು ವಿರೋಧಿಸುವಂಥದ್ದು". ಇತರೆ ಸಭೆಗಳು ಏನೇ ಮಾಡುತ್ತಾ ಇದ್ದರು ಅಥವಾ ಅಪೊಸ್ತಲರು ಕಲಿಸಿದ ವಿಷಯಗಳು ಏನೇ ಇದ್ದರೂ ತಮ್ಮ ಮನಸ್ಸಿಗೆ ಬಂದದ್ದನ್ನು ತಾವು ಮಾಡಬಹುದೆಂದು ಕೊರಿಂಥದವರು ಯೋಚಿಸುತ್ತಾ ಇದ್ದರು. **37**

**14:37** ಅಲ್ಲಿದ್ದ ಕೆಲವು ಕ್ರೈಸ್ತರು ತಾವು ಆತ್ಮೀಕವಾಗಿ ಬಹಳ ಸಾಮರ್ಥ್ಯವುಳ್ಳವರು ಎಂದು ಯೋಚಿಸುತ್ತಾ ಇದ್ದರು. ಒಂದುವೇಳೆ ಅದು ನಿಜವೇ ಆಗಿದ್ದರೆ ಅವರು ಕರ್ತನಾದ ಯೇಸು ಕ್ರಿಸ್ತನೇ ಪೌಲನ ಮೂಲಕ ಕೊಟ್ಟಿರುವ ಆಜ್ಞೆಯನ್ನು ವಿವೇಚಿಸಲು ಶಕ್ತರಾಗಿರಬೇಕಾಗಿತ್ತು **38**

**14:38** ಇದರ ಅರ್ಥವೇನೆಂದರೆ ಒಂದುವೇಳೆ ಯಾವ ವ್ಯಕ್ತಿಯಾದರೂ ಕರ್ತನ ಆಜ್ಞೆಯನ್ನು ನಿರ್ಲಕ್ಷಿಸಿದರೆ ಅವನ ಮಾತುಗಳನ್ನು ಇತರರು ಕೇಳುವ ಅರ್ಹತೆ ಅವನಿಗೆ ಇರುವದಿಲ್ಲ. **39**

**14:39** *"ವಾಣಿಯನ್ನಾಡುವದು"*– ಅಥವಾ ತಿಳಿಯದ ಭಾಷೆಗಳು. **40**

**14:40** ವಚನ 33. 12-14 ಅಧ್ಯಾಯಗಳಲ್ಲಿ ಸಭೆಯ ಪ್ರಾರಂಭದ ದಿನಗಳಲ್ಲಿ ವಿಶ್ವಾಸಿಗಳಲ್ಲಿದ್ದ ಅನೇಕ ಆತ್ಮೀಕ ವರಗಳ ಬಗ್ಗೆ ಪೌಲನು ಬರೆದಿದ್ದಾನೆ. ಆ ವರಗಳೆಲ್ಲವೂ

ಗತಿಸಿ ಹೋಗಿವೆಯೇ? ಕರ್ತನಾದ ಯೇಸು ಕ್ರಿಸ್ತನನ್ನು ನೋಡಿದ ಮತ್ತು ಆತನ ಮಾತುಗಳನ್ನು ಕೇಳಿಸಿಕೊಂಡ, ಯಾವುದೇ ರೀತಿಯ ದೋಷಗಳಿಲ್ಲದ ಬೋಧನೆಗಳನ್ನು ಮಾಡಿದಂಥ, ಆಗ ಮೂಲ ಅಪೊಸ್ತಲರಂಥವರು ಈಗ ಇಲ್ಲ ಎಂದು ನಾವು ಯೋಚಿಸಬಾರದು. ಯೇಸು ಕ್ರಿಸ್ತನ ಅಪೊಸ್ತಲರಿಗಿದ್ದ ಅಧಿಕಾರ ಮತ್ತು ದೋಷವಿಲ್ಲದೆ ಇರುವಂಥ ಗುಣ ಈಗ ಯಾವ ವ್ಯಕ್ತಿಯಲ್ಲಿಯೂ ಇಲ್ಲ ಎಂಬದಾಗಿ ಹೇಳುವದಂಥದ್ದು ದೊಡ್ಡ ಪ್ರಮಾದವಾಗಿದೆ. ಸತ್ಯವೇದವನ್ನು ಮೊದಲನೆಯ ಶತಮಾನದಲ್ಲಿ ಬರೆದು ಮುಗಿಸಲಾಯಿತು ಮತ್ತು ಮಾನವರು ತಿಳಿಯಬೇಕೆಂದು ದೇವರು ಬಯಸಿದ ಪ್ರೇರಣೆಯುಳ್ಳ, ದೋಷವಿಲ್ಲದ ಬರವಣಿಗೆಗಳು ಹಾಗೂ ಬೋಧನೆಗಳು ಅದರಲ್ಲಿ ಇವೆ. ಸತ್ಯವೇದ ಮಾತ್ರವೇ ನಮ್ಮೆಲ್ಲರ ಮೇಲೆ ಅಂತಿಮವಾದ ಅಧಿಕಾರವಾಗಿರಬೇಕು ಮತ್ತು ನಮ್ಮೆಲ್ಲರಿಗೂ ಇರುವ ಅಥವಾ ಬೇಕಾಗಿರುವ ಅಥವಾ ಹೊಂದ ಬೇಕಿರುವ ದೋಷವಿಲ್ಲದ ಬೋಧನೆ ಅದು ಮಾತ್ರವೇ ಆಗಿದೆ. ಆದರೆ ಈ ಅಧ್ಯಾಯಗಳಲ್ಲಿ ತಿಳಿಸಲಾಗಿರುವ (ಉದಾಹರಣೆಗೆ ಸಹಾಯ ಮಾಡುವದು ಮತ್ತು ಉಪದೇಶಿಸುವದು) ಇತರೆ ವರಗಳು ಖಂಡಿತವಾಗಿಯೂ ಗತಿಸಿ ಹೋಗಿಲ್ಲ. ಉಳಿದವುಗಳು ಗತಿಸಿ ಹೋಗಿವೆಯೇ? ಸಭೆಯ ಈ ಕಾಲದಲ್ಲಿ ಅವುಗಳು ಗತಿಸಿಹೋಗಿವೆ ಅಥವಾ ಗತಿಸಿಹೋಗಿಲ್ಲ ಎಂದು ಸತ್ಯವೇದದಲ್ಲಿ ಯಾವುದಾದರೊಂದು ಕಡೆ ಬರೆಯಲಾಗಿದೆ ಎಂಬದನ್ನು ಈ ನೋಟ್ಸ್ ಗಳ ಗ್ರಂಥಕರ್ತರು ಒಪ್ಪಿಕೊಳ್ಳುವದಿಲ್ಲ. ದೇವರು ತನಗೆ ಬೇಕಾದ ಕಾರ್ಯಗಳನ್ನು ಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದಾನೆ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು. ಮತ್ತು ಇಂದು ಆ ವರಗಳಲ್ಲಿ ಯಾವ ವರವನ್ನಾದರೂ ತನಗೆ ಇಷ್ಟ ಬಂದವರಿಗೆ ಕೊಡುವದು ಅಥವಾ ಕೊಡದೆ ಇರುವದು ಆತನಿಗೆ ಸಂತೋಷವಾಗಿದ್ದರೆ, ಆತನು ಹಾಗೆಯೇ ಮಾಡುತ್ತಾನೆ (12:11). ಅನೇಕ ವಿಶ್ವಾಸಿಗಳಿಗೆ ಬರುವ ಇನ್ನೊಂದು ಆಲೋಚನೆ ಏನೆಂದರೆ: ಒಂದುವೇಳೆ ಈ ವರಗಳು ಮೊದಲನೆಯ ಶತಮಾನದಲ್ಲಿಯೇ ಗತಿಸಿಹೋಗಿದ್ದರೆ, ಎಲ್ಲಾ ಕಾಲಗಳಲ್ಲಿಯೂ ಸಭೆಗೆ ಅನ್ವಯವಾಗುವ ದೇವರ ವಾಕ್ಯಗಳ ಈ ಭಾಗದಲ್ಲಿ ಪವಿತ್ರಾತ್ಮನು ಖಂಡಿತವಾಗಿಯೂ ಅವುಗಳ ಬಗ್ಗೆ ಪೌಲನ ಮೂಲಕ ಸೂಚನೆಗಳನ್ನು ಕೊಡುತ್ತಾ ಇರಲಿಲ್ಲ.

# 15
1

**15:1** *"ಸುವಾರ್ತೆ"*– 1:17; 4:15; 9:16-17; ರೋಮಾ 1:1,9,15,16; 16:25; 2 ಕೊರಿಂಥ 4:3-4; ಗಲಾ 1:6-9; ಎಫೆ 6:19; ಫಿಲಿಪ್ಪಿ 1:17,27; 1 ತಿಮೊ 1:11; 2 ತಿಮೊ 1:10.
2

**15:2** *"ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ"*– ಈ ಕಾರಣದಿಂದಲೇ ದೇವರು ಯೇಸು ಕ್ರಿಸ್ತನ ಸುವಾರ್ತೆಯನ್ನು ಕೊಟ್ಟಿದ್ದಾನೆ (ಮಾರ್ಕ 1:10,16; ರೋಮಾ 1:16).

ಅದನ್ನು ನಂಬಿಕೆಯಿಂದ ಸ್ವೀಕರಿಸಿಕೊಂಡರೆ ರಕ್ಷಣೆ, ಅದಕ್ಕೆ ಅವಿಧೇಯರಾದರೆ ನಿತ್ಯವಾದ ಶಿಕ್ಷೆ (2 ಥೆಸ 1:8-9). ಅದರ ವ್ಯಾಪಕವಾದ ಪ್ರಾಮುಖ್ಯತೆಯನ್ನು ಅರಿತವನಾಗಿ ಪೌಲನು ಕೊರಿಂಥದಲ್ಲಿರುವವರು (ಮತ್ತು ಬೇರೆ ಕಡೆಗಳಲ್ಲಿರುವವರೆಲ್ಲರೂ) ಅದನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ನಂಬಬೇಕು ಎಂದು ಬಯಸಿದನು.

"*ಒಂದುವೇಳೆ*"– ಕೊಲೊ 1:23; ಇಬ್ರಿ 3:6; 6:6; 10:38. ಸುವಾರ್ತೆಯ ನಂಬಿಕೆಯಲ್ಲಿ ತಾಳ್ಮೆಯುಳ್ಳವರಾಗಿರುವದು ನಂಬಿಕೆಯು ಯಥಾರ್ಥವಾದದ್ದು ಎಂಬದಕ್ಕೆ ಪುರಾವೆಯಾಗಿದೆ. ಕೊಲೊ 1:23; ಇಬ್ರಿ 3:5-6; 10:39 ನೋಡಿರಿ. ದೇವರು ಸತ್ತವರನ್ನು ಎಬ್ಬಿಸಿದನು ಎಂಬದನ್ನು ಕೊರಿಂಥದಲ್ಲಿದ್ದ ಕೆಲವರು ನಿರಾಕರಿಸುತ್ತಾ ಇದ್ದರು (ವ 12). ಆದರೆ ಯೇಸು ಕ್ರಿಸ್ತನ ಪುನರುತ್ಥಾನವು ಸುವಾರ್ತೆಯ ಅತ್ಯಂತ ಪ್ರಾಮುಖ್ಯವಾದ ಭಾಗವಾಗಿದೆ. ಅದನ್ನು ನಿರಾಕರಿಸುವವರು ಅತ್ಯಂತ ದೋಷಗಳಿರುವ ನಂಬಿಕೆಯನ್ನು ಪ್ರಕಟಿಸುತ್ತಾ ಇದ್ದರು (ವ 14, 17).

"*ನಂಬಿಕೆಯು ನಿರಾಧಾರವಾಯಿತು*"– ತಾವು ಏನನ್ನು ನಂಬುತ್ತಾ ಇದ್ದೇವೆ ಎಂಬದನ್ನು ತಿಳಿಯದೆಯೇ ನಂಬಿದರು ಅಥವಾ ನಂಬಿಕೆಯ ಮೂಲಾಧಾರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ ಎಂಬ ಅರ್ಥವನ್ನು ಕೊಡುತ್ತದೆ. ಅಥವಾ ನಂಬಿಕೆ ಎಂಬದಾಗಿ ತೋರುವ ಯಾವುದೇ ಸಂಗತಿಯಾದರೂ ಕಡೆಯ ತನಕ ಉಳಿಯದೆ ಹೋದರೆ ಅದು ನಿರಾಧಾರವಾಗಿದ್ದು ರಕ್ಷಿಸಲು ಆಗದೆ ಇರುವದಾಗಿದೆ. **3-8**

**15:3-8** ಸುವಾರ್ತೆಯೊಂದಿಗೆ ನಾಲ್ಕು ಪ್ರಾಮುಖ್ಯವಾದ ಕಾರ್ಯಗಳು ಸೇರಿವೆ – ಯೇಸು ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಆತನು ಪುನರುತ್ಥಾಗೊಂಡದ್ದು ಮತ್ತು ತನ್ನ ಶಿಷ್ಯರಿಗೆ ಕಾಣಿಸಿಕೊಂಡದ್ದು. ಯೇಸು ಕ್ರಿಸ್ತನು "ನಮ್ಮ ಪಾಪಗಳಿಗಾಗಿ" ಪ್ರಾಣ ಕೊಟ್ಟನು – ಮತ್ತಾಯ 26:28; ಯೋಹಾನ 1:29; ರೋಮಾ 3:24-25; 4:25; 2 ಕೊರಿಂಥ 5:21; ಗಲಾ 1:4; ಇಬ್ರಿ 1:3; 9:28; 10:12; 1 ಪೇತ್ರ 2:24; 3:18; ಪ್ರಕ 1:5. ಯೇಸು ಕ್ರಿಸ್ತನು ನಿಜವಾಗಿಯೂ ಸತ್ತನು ಎಂಬದನ್ನು ನಿರಾಕರಿಸುವವನು ಮಾನವರಿಗಾಗಿ ದೇವರು ಏರ್ಪಡಿಸಿದ ಯಜ್ಞವನ್ನೇ ನಿರಾಕರಿಸುವವನಾಗಿದ್ದಾನೆ ಮತ್ತು ಮಾನವರು ತಮ್ಮ ಪಾಪಗಳಿಂದ ರಕ್ಷಣೆ ಹೊಂದಲು ದೇವರು ಸಿದ್ಧಮಾಡಿರುವ ಒಂದೇ ಮಾರ್ಗವನ್ನೂ ನಿರಾಕರಿಸುವವನಾಗಿದ್ದಾನೆ. ಯೇಸು ಕ್ರಿಸ್ತನ ಹೂಣಲ್ಪಡುವಿಕೆಯು ಅತ್ಯಂತ ಪ್ರಾಮುಖ್ಯತೆಯನ್ನು ಹೊಂದಿದೆ. ಆತನು ಸತ್ತಿದ್ದಾನೆ ಎಂಬದಕ್ಕೆ ಅದುವೇ ಅಂತಿಮ ಹಾಗೂ ಅವಶ್ಯವಾದ ಪುರಾವೆಯಾಗಿದೆ (ಮತ್ತಾಯ 27:57-66; ಮಾರ್ಕ 15:42-46; ಯೋಹಾನ 19:38-40). ಯೇಸು ಕ್ರಿಸ್ತನ ಪುನರುತ್ಥಾನ (ಆತನ ಆತ್ಮವು ಮೃತಪಟ್ಟಿದ್ದ ಆತನ ದೇಹದೊಳಗೆ ಪುನಃ ಪ್ರವೇಶಿಸಿತು ಮತ್ತು ಅದನ್ನು ಮತ್ತೊಮ್ಮೆ ಜೀವಿಸುವಂತೆ ಮಾಡಿತು ಹಾಗೂ ಸಮಾಧಿಯಿಂದ ಹೊರಬರುವಂತೆ ಬಲಪಡಿಸಿತು) ಅತ್ಯಂತ ಪ್ರಾಮುಖ್ಯತೆಯುಳ್ಳದ್ದಾಗಿದೆ (ವ 13,14,17,18; ರೋಮಾ 4:25;

ಮತ್ತಾಯ 28:6). ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನ ಎರಡು "ಶಾಸ್ತ್ರದ ಪ್ರಕಾರವೇ" (ಹಳೆಯ ಒಡಂಬಡಿಕೆ ಪ್ರಕಾರವೇ) ನಡೆದವು. ಮತ್ತಾಯ 5:17; ಲೂಕ 24:25-27,45,46. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡದ್ದು ಸಹ "ಪ್ರಮುಖ ಆದ್ಯತೆಯಾಗಿದೆ." ಆತನು ಎದ್ದಿದ್ದಾನೆ ಎಂಬದಕ್ಕೆ ಅವರೇ ಸಾಕ್ಷಿಗಳಾಗಿದ್ದಾರೆ. ಯೇಸು ಕ್ರಿಸ್ತನು ಪುನರುತ್ಥಾನಗೊಂಡ ನಂತರ ಕಾಣಿಸಿಕೊಂಡದ್ದಕ್ಕೆ ಮತ್ತಾಯ 28:6 ರ ನೋಟ್ಸ್ ನೋಡಿರಿ. **3**

**15:3** *"ಕಲಿತುಕೊಂಡದ್ದೇ"*– ಗಲಾ 1:11-12. **6**

**15:6** *"ಐನೂರು"*– ಎರಡು ಅಥವಾ ಮೂವರು ಸಾಕ್ಷಿಗಳ ಮೂಲಕ ಸತ್ಯವನ್ನು ಸಾಬೀತುಪಡಿಸಬಹುದು ಎಂದು ಧರ್ಮಶಾಸ್ತ್ರವು ಹೇಳುತ್ತದೆ (ಧರ್ಮೋ 17:6; ಮತ್ತಾಯ 18:16). ಯೇಸು ಕ್ರಿಸ್ತನು ಪುನರುತ್ಥಾನಗೊಂಡ ನಂತರ ಆತನನ್ನು ನೋಡಿದರು ಸುಮಾರು ಐನೂರಕ್ಕೂ ಹೆಚ್ಚು ಜನ ಮತ್ತು ಅವರಲ್ಲಿ ಕೆಲವರು ಲೋಕವು ಕಂಡ ಅತ್ಯುತ್ತಮರಾಗಿದ್ದಾರೆ. ಹಳೆಯ ಕಾಲದ ಲೋಕದ ಚರಿತ್ರೆಯಲ್ಲಿ ನಡೆದಿರುವ ಘಟನೆಗಳಲ್ಲಿ ಯೇಸು ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು ಪುನರುತ್ಥಾನಕ್ಕೆ ಇರುವಷ್ಟು ಸಾಕ್ಷಿಗಳು ಬೇರೆ ಯಾವುದಕ್ಕೂ ಇಲ್ಲ.

*"ನಿದ್ರೆ ಹೋಗಿದ್ದಾರೆ"*– ಈ ಲೋಕವನ್ನು ತ್ಯಜಿಸಿದ್ದಾರೆ (ಯೋಹಾನ 11:11-14). **7**

**15:7** *"ಯಾಕೋಬ"*– ಇವನು ಬಹುಶಃ ಕರ್ತನ ಸಹೋದರನಾಗಿರಬೇಕು (ಅಪೊ 1:13-14), ಅಥವಾ ಆಗಿನ ಸಮಯದ ಅಪೊಸ್ತಲರಲ್ಲಿ ಒಬ್ಬನ ಹೆಸರಾಗಿರಬೇಕು. **8**

**15:8** *"ನನಗೂ ಕಾಣಿಸಿಕೊಂಡನು"*– ಅಪೊ 9:3-7.

*"ದಿನ ತುಂಬದೆ ಹುಟ್ಟಿದವನು"*– ಪೌಲನ ಮಾತಿನ ಅರ್ಥವೇನೆಂದರೆ ಅವನು ಪ್ರಥಮ ಅಪೊಸ್ತಲರಲ್ಲಿ ಅಥವಾ ಶಿಷ್ಯರಲ್ಲಿ ಒಬ್ಬನಲ್ಲ, ಯೇಸು ಕ್ರಿಸ್ತನು ಪುನರುತ್ಥಾನಗೊಂಡಾಗ ಅವನಿನ್ನೂ ಪಾಪದಲ್ಲಿಯೇ ಇದ್ದನು ಮತ್ತು ನಂತರ ಅಸಾಧಾರಣವಾದ ರೀತಿಯಲ್ಲಿ ಅವನು ಅಪೊಸ್ತಲನಾದನು. **9**

**15:9** ಅಪೊ 8:3; 9:1-2; ಎಫೆ 3:9; 1 ತಿಮೊ 1:12-15. ಪೌಲನು ಫಿಲಿಪ್ಪಿ 2:3 ರಲ್ಲಿ ಇತರರಿಗೆ ಏನು ಮಾಡಲು ಹೇಳಿದ್ದಾನೋ ಅದನ್ನು ತಾನೇ ಮಾಡಲು ಅತ್ಯಂತ ಸಂತೋಷವುಳ್ಳವನಾಗಿದ್ದನು. **10**

**15:10** ತಾನು ದೇವರ ಸೇವಕನಾಗಿರುವದು, ಅಪೊಸ್ತಲನಾಗಿರುವದು ಅಪಾರವಾದ ಕರುಣೆ, ವಿವರಿಸಲಾಗದ ಕೃಪೆ ಎಂದು ಪೌಲನು ತನ್ನ ವಿಷಯದಲ್ಲಿ ತಿಳಿದುಕೊಂಡಿದ್ದನು (ಎಫೆ 3:7-8; 2 ತಿಮೊ 1:9; ತೀತ 3:3-4). ನಾನು ಎಲ್ಲರಿಗಿಂತ ಹೆಚ್ಚು ಕಷ್ಟಪಟ್ಟಿದ್ದೇನೆ ಎಂದು ಅವನು ಹೇಳುವಾಗ, ತನ್ನಲ್ಲಿ ಕಾರ್ಯಮಾಡುತ್ತಿರುವ ದೇವರ ಕೃಪೆಯನ್ನು ಅವನು ಘನಪಡಿಸುತ್ತಾ ಇದ್ದಾನೆಯೇ ಹೊರತು ತನ್ನನ್ನು ಘನಪಡಿಸಿಕೊಳ್ಳುತ್ತಾ ಇಲ್ಲ. **11**

**15:11** ಪೌಲನು ಬೋಧಿಸುತ್ತಿದ್ದ ಸುವಾರ್ತೆಯನ್ನೇ ಇತರೆ ಅಪೊಸ್ತಲರು ಬೋಧಿಸುತ್ತಾ ಇದ್ದರು. ರಕ್ಷಣೆಗೆ ನಡೆಸಲು ಇರುವದು ಒಂದೇ ಒಂದು ಮಾರ್ಗ. ಅವರೆಲ್ಲರಿಗೂ ಆ ಮಾರ್ಗ ಯಾವುದೆಂದು ಗೊತ್ತಿತ್ತು ಮತ್ತು ಅವರೆಲ್ಲರೂ ಅದನ್ನೇ ಬೋಧಿಸಿದರು. **12-19**

**15:12-19** ಕೊರಿಂಥದ ಸಭೆಯಲ್ಲಿದ್ದ ಕೆಲವರು (ಅಪೊ 23:8 ರ ಸದ್ದುಕಾಯರ ಹಾಗೆ) ಮೃತಪಟ್ಟಿರುವ ದೇಹಗಳು ಮತ್ತೆ ಜೀವವನ್ನು ಪಡೆಯುವಂಥದ್ದೆಲ್ಲಾ ಇಲ್ಲ ಎಂದು ಹೇಳುತ್ತಾ ಇದ್ದರು. ಒಂದುವೇಳೆ ಅಂಥ ಕಾರ್ಯಗಳೇನೂ ಇಲ್ಲವೆಂದರೆ ಕೆಲವು ದುಃಖದ ಫಲಿತಾಂಶಗಳು ಎದುರಾಗುತ್ತಾ ಇದ್ದವು ಎಂದು ಪೌಲನು ಹೇಳಿದ್ದಾನೆ, ಅವು ಯಾವುವೆಂದರೆ – ಯೇಸು ಕ್ರಿಸ್ತನು ಪುನರುತ್ಥಾನಗೊಳ್ಳುತ್ತಾ ಇರಲಿಲ್ಲ (ವ 13,16); ಅಪೊಸ್ತಲರ ಬೋಧನೆಯು "ಪ್ರಯೋಜನವಿಲ್ಲದ್ದು" ಮತ್ತು ಸುಳ್ಳಾಗುತ್ತಾ ಇತ್ತು (ವ 15); ಕ್ರೈಸ್ತರ ನಂಬಿಕೆಯೂ ನಿಷ್ಪ್ರಯೋಜನವಾಗುತ್ತಾ ಇತ್ತು (ವ 14,17); ಮತ್ತು ಅವರು ಇನ್ನೂ ತಮ್ಮ ಪಾಪದಲ್ಲಿಯೇ ಇರುತ್ತಾ ಇದ್ದರು ಹಾಗೂ ಶಾಶ್ವತವಾಗಿ ನಾಶವಾಗುತ್ತಾ ಇದ್ದರು (ವ 17,18); ಮತ್ತು ಎಲ್ಲರೂ ನಿರ್ಭಾಗ್ಯ ಸ್ಥಿತಿಯಲ್ಲಿಯೇ ಇರಬೇಕಾಗಿತ್ತು (ವ 19). ಮಾನವರ ರಕ್ಷಣೆಗಾಗಿ ಯೇಸು ಕ್ರಿಸ್ತನ ಶಾರೀರಿಕ ಪುನರುತ್ಥಾನವು ಅವಶ್ಯವಾಗಿತ್ತು ಎಂಬದನ್ನು ಪೌಲನು ಈ ರೀತಿಯಾಗಿ ತೋರಿಸಿದ್ದಾನೆ. ಇದುವೇ ಸುವಾರ್ತೆಯ ಪ್ರಮುಖ ವಿಷಯವಾಗಿದೆ. ಇದನ್ನು ನಿರಕಾರಿಸುವದು ಸುವಾರ್ತೆಯನ್ನು ಕೆಡಿಸುವದಾಗಿದೆ. ಇದು ಸುವಾರ್ತೆಯನ್ನು ಅದರ ಸತ್ಯಸಂಧತೆ ಹಾಗೂ ಶಕ್ತಿಯಿಂದ ಕದ್ದುಕೊಳ್ಳುವ ಪ್ರಯತ್ನವಾಗಿದೆ. **14**

**15:14** *"ಪ್ರಸಂಗ"*– ಅಂದರೆ ಪ್ರಸಂಗ ಮಾಡುವ ಕಾರ್ಯವಲ್ಲ ಬದಲಾಗಿ ಅವರು ಪ್ರಸಂಗ ಮಾಡಿದ ಸಂದೇಶವಾಗಿದೆ. ಯೇಸು ಕ್ರಿಸ್ತನ ಪುನರುತ್ಥಾನವಿಲ್ಲದೆ ಹೋಗಿದ್ದರೆ ಕ್ರೈಸ್ತರಿಗೆ ಯಾವುದೇ ಸಂದೇಶ ಇರುತ್ತಾ ಇರಲಿಲ್ಲ ಮತ್ತು ಅವರ ನಂಬಿಕೆಯು ಬೆಲೆಯಿಲ್ಲದ್ದು ಹಾಗೂ ಸ್ಥಿರವಾದ ಅಡಿಪಾಯವಿಲ್ಲದ್ದಾಗಿರುತ್ತಾ ಇತ್ತು. **17-18**

**15:17-18** ಒಂದುವೇಳೆ ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದು ಬರದೆ ಹೋಗಿದ್ದರೆ ಅದರ ಅರ್ಥ ಆತನು ನಮ್ಮ ಪಾಪಗಳ ಅಡಿಯಲ್ಲಿ ಮುಳುಗಿ ಹೋಗಿರುತ್ತಿದ್ದನು, ಆತನ ಯಜ್ಞವು ದೇವರಿಗೆ ಮೆಚ್ಚಿಕೆಯಾಗುತ್ತಾ ಇರಲಿಲ್ಲ ಮತ್ತು ಯಾರೊಬ್ಬರೂ ನೀತಿವಂತರಾಗುತ್ತಾ ಇರಲಿಲ್ಲ ಅಥವಾ ಕ್ಷಮಾಪಣೆಯನ್ನು ಹೊಂದುತ್ತಾ ಇರಲಿಲ್ಲ (ರೋಮಾ 4:24-25). ಒಂದುವೇಳೆ ಯಾರೊಬ್ಬರೂ ನೀತಿವಂತರಾಗಿ ಎಣಿಸಲ್ಪಡೆ ಇದ್ದರೆ ಅಥವಾ ಕ್ಷಮಾಪಣೆಯನ್ನು ಹೊಂದದೆ ಇದ್ದರೆ, ಎಲ್ಲರೂ ಶಾಶ್ವತವಾಗಿ ನಾಶವಾಗುತ್ತಾ ಇದ್ದರು. **19**

**15:19** ಕ್ರೈಸ್ತನ ನಿರೀಕ್ಷೆಯು ಸದ್ಯದ ಈ ಜೀವಿತವನ್ನು ದಾಟಿ ಹೋಗುವದಾಗಿರಬೇಕು. ರೋಮಾ 5:2-5; 8:23-25 ನೋಡಿರಿ. ಒಂದುವೇಳೆ ಪುನರುತ್ಥಾನವೇ ಇಲ್ಲವೆಂದರೆ ಅಂಥ ನಿರೀಕ್ಷೆಯೇ ನಿರರ್ಥಕವಾಗಿದೆ. ಅಂತಹ ಪರಿಸ್ಥಿತಿಯಲ್ಲಿ ಕ್ರೈಸ್ತರು ಮರಳಾಗುತ್ತಾ ಇದ್ದರು

ಮತ್ತು ಅನುಕಂಪವನ್ನು ಎದುರುನೋಡುವವರಾಗುತ್ತಾ ಇದ್ದರು. ಮತ್ತು ಅವರ ಎಲ್ಲಾ ಕಷ್ಟಗಳು, ಪರೀಕ್ಷೆಗಳು ಮತ್ತು ಹಿಂಸೆಗಳು (ಯೋಹಾನ 15:18-20; ಅಪೊ 14:22; 2 ತಿಮೊ 3:12) ಪ್ರಯೋಜನವಿಲ್ಲದವುಗಳಾಗುತ್ತಿದ್ದವು. **20**

**15:20** ಆದರೆ ಯೇಸು ಕ್ರಿಸ್ತನ ವಿಶ್ವಾಸಿಗಳು ಅನುಕಂಪವನ್ನು ಎದುರುನೋಡುವವರಾಗಿರಬಾರದು. ಯಾಕೆ? ಯಾಕಂದರೆ ಯೇಸು ಕ್ರಿಸ್ತನ ಪುನರುತ್ಥಾನವು ಸತ್ಯವಾಗಿದೆ. ಅದರ ವಿಷಯದಲ್ಲಿ ಸ್ವಲ್ಪ ಸಂದೇಹವೂ ಇಲ್ಲ.

*"ಪ್ರಥಮಫಲ"*– ಭವಿಷಯದಲ್ಲಿ ಎದ್ದು ಬರುವ ಅನೇಕ ಪ್ರಸಿದ್ಧರಲ್ಲಿ ಆತನು ಪ್ರಥಮನಾಗಿದ್ದಾನೆ. **21-22**

**15:21-22** ರೋಮಾ 5:12-21 ರೊಂದಿಗೆ ಹೋಲಿಸಿ ನೋಡಿರಿ. ಸತ್ತವರ ಪುನರುತ್ಥಾನದ ವಿಷಯವಾಗಿ ಯೋಹಾನ 5:28-29 ನೋಡಿರಿ. **23**

**15:23** *"ಆತನವರು"*– ಯೋಹಾನ 6:37-40; 17:6,10 ನೋಡಿರಿ. ಯೇಸು ಕ್ರಿಸ್ತನ ಎರಡನೇ ಬರೋಣದ ಸಮಯದಲ್ಲಿ ಅವಿಶ್ವಾಸಿಗಳ ಪುನರುತ್ಥಾನದ ಬಗ್ಗೆ ಪೌಲನು ಇಲ್ಲಿ ಏನೂ ಹೇಳಿಲ್ಲ. ಒಂದೇ ಸಮಯದಲ್ಲಿ ಎಲ್ಲಾ ಮಾನವರು ಹುದುವಾಗಿ ಪುನರುತ್ಥಾನ ಹೊಂದುವರು ಎಂಬದಾಗಿ ಅವನು ಎಲ್ಲಿಯೂ ಕಲಿಸಿಲ್ಲ. ಪ್ರಕ 20:5 ನೋಡಿರಿ. **24**

**15:24** *"ಸಮಾಪ್ತಿ"*– 25 ನೇ ವಚನದನುಸಾರ ನೋಡುವದಾದರೆ, ಇದು ಯೇಸು ಕ್ರಿಸ್ತನ ಆಳ್ವಿಕೆಯ ಅಂತ್ಯವಾಗಿದೆ. ಇದರ ಅರ್ಥ ಯೇಸು ಕ್ರಿಸ್ತನು ಈಗ ಪರಲೋಕದಲ್ಲಿ ಮಾಡುತ್ತಿರುವ ಆಳ್ವಿಕೆ ಎಂದು ಕೆಲವರು ಹೇಳುತ್ತಾರೆ. ಈ ನೋಟ್ಸ್ ಗಳ ಗ್ರಂಥಕರ್ತನು ಇದರ ಅರ್ಥ ಭೂಲೋಕದಲ್ಲಿ ಯೇಸು ಕ್ರಿಸ್ತನು ಮಾಡುವ ಸಾವಿರ ವರ್ಷ ಆಳ್ವಿಕೆ ಎಂದು ಹೇಳುತ್ತಾರೆ (ಪ್ರಕ 20:1-6 ನೋಡಿರಿ). ಖಂಡಿತವಾಗಿಯೂ, ಯೇಸು ಕ್ರಿಸ್ತನು ಇನ್ನೂ "ಎಲ್ಲಾ ರಾಜ್ಯತ್ವಗಳನ್ನೂ, ಅಧಿಕಾರಗಳನ್ನೂ ನಾಶಮಾಡಿಲ್ಲ." –ನಿಜವಾಗಿ ಹೇಳುವಾದದರೆ, ಆತನು ಎರಡನೇ ಸಾರಿ ಹಿಂದಿರುಗಿ ಬರುವ ತನಕ ಇದನ್ನು ಮಾಡುವದಿಲ್ಲ. ಪ್ರಕ 19:11-16 ನೋಡಿರಿ. ಈಗ ಮತ್ತು ಈ ಯುಗದ ಅಂತ್ಯದ ತನಕ, ಮಾನವ ರಾಜ್ಯಗಳು, ಅಧಿಕಾರಗಳು ಮತ್ತು ಶಕ್ತಿಗಳು ಮುಂದುವರೆಯುತ್ತವೆ. ಯೇಸು ಕ್ರಿಸ್ತನು ತನ್ನ ಬರೋಣದ ಸಮಯದಲ್ಲಿ ಹಾಗೂ ಸಾವಿರ ವರ್ಷದ ಆಳ್ವಿಕೆಯ ಸಂದರ್ಭದಲ್ಲಿ ಅವುಗಳನ್ನು ನಾಶಮಾಡುತ್ತಾನೆ ಮತ್ತು ತಾನು ಆಳ್ವಿಕೆ ಮಾಡಿದ ರಾಜ್ಯವನ್ನು ತಂದೆಯಾದ ದೇವರಿಗೆ ಒಪ್ಪಿಸುತ್ತಾನೆ.

*"ಆ ಮೇಲೆ"*– ಇಲ್ಲಿ ಭಾಷಾಂತರ ಮಾಡಲಾಗಿರುವ ಗ್ರೀಕ್ ಪದದ ಅರ್ಥ "ಕೂಡಲೇ" ಎಂಬದಾಗಿಯಲ್ಲ. ಇದರ ಅರ್ಥ ಮತ್ತು ಇಲ್ಲಿ (ಈ ನೋಟ್ಸ್ ಗಳ ಗ್ರಂಥಕರ್ತನ ಪ್ರಕಾರ) "ಕೆಲವು ಸಮಯದ ನಂತರ" ಎಂಬ ಅರ್ಥವನ್ನು ಕೊಡುತ್ತದೆ, ಆದರೆ ಎಷ್ಟು ಸಮಯದ ನಂತರ ಎಂಬದನ್ನು ಸ್ಪಷ್ಟವಾಗಿ ಹೇಳಲಾಗಿಲ್ಲ. **25**

**15:25** *"ಎಲ್ಲಾ ವಿರೋಧಿಗಳು"*– ಅಂದರೆ ಎಲ್ಲಾ ಮಾನವ ವಿರೋಧಿಗಳು, ಸೈತಾನನು ಮತ್ತು ದುಷ್ಟ ಆತ್ಮಗಳು ಮತ್ತು ಮರಣ. ಅಂದರೆ ತನ್ನ ಜನರನ್ನು ನೋಯಿಸುವಂಥವುಗಳನ್ನು, ದೇವರ ಆಳ್ವಿಕೆಯನ್ನು ಎದುರಿಸುವವುಗಳು ಅಥವಾ ಆತನ ರಾಜ್ಯವನ್ನು ವಿರೋಧಿಸುವವುಗಳು. **26**

**15:26** *"ಮರಣವು ಕಡೇ ಶತ್ರು . . ."*– 2 ತಿಮೊ 1:10; ಪ್ರಕ 20:14; ಲೂಕ 20:36. **27**

**- 15:27** ಕೀರ್ತನೆ 8:6; ಇಬ್ರಿ 2:8-9. **28**

**15:28** *"ಮಗನು"*–ನೋಟ್ಸ್ ಗಾಗಿ ಮತ್ತಾಯ 3:17; ಯೋಹಾನ 3:16; 5:18-23 ನೋಡಿರಿ.

*"ಸಮಸ್ತರಲ್ಲಿಯೂ ಸಮಸ್ತವೂ"*– ರೋಮಾ 11:36. **29**

**15:29** *"ಸತ್ತವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು"*– ಆಗ ಇದರ ಅರ್ಥವೇನು ಎಂದು ಈಗ ಯಾರಿಗೂ ಗೊತ್ತಿಲ್ಲ ಅಥವಾ ಜನರು ಯಾಕೆ ಹೀಗೆ ಮಾಡಿತ್ತಿದ್ದರು ಎಂಬದೂ ಗೊತ್ತಿಲ್ಲ. ಸತ್ಯವೇದದ ಬೇರೆ ಯಾವ ಭಾಗದಲ್ಲಿಯೂ ಇದರ ಬಗ್ಗೆ ಎಲ್ಲಿಯೂ ಬರೆಯಲಾಗಿಲ್ಲ. ನಾನು ಇದನ್ನು ಮಾಡಿದೆನು ಅಥವಾ ಕೊರಿಂಥದವರು ಇದನ್ನು ಮಾಡುತ್ತಾ ಇದ್ದರು ಎಂದು ಪೌಲನು ಹೇಳಿಲ್ಲ ಮತ್ತು ಇದನ್ನು ಸಮ್ಮತಿಸಿಯೂ ಇಲ್ಲ. **30-32**

**15:30-32** ವಚನ 19. ಮರಣದ ನಂತರ ಉತ್ತಮ ಭವಿಷ್ಯದ ಯಾವುದೇ ನಿರೀಕ್ಷೆ ಇಲ್ಲವೆಂದರೆ, ಒಬ್ಬನು ತನ್ನಿಂದ ಸಾಧ್ಯವಾದಷ್ಟು ಈ ಜೀವಿತದಲ್ಲಿ ಸಂತೋಷದಿಂದ ಜೀವಿಸಿದರೆ ಅದಕ್ಕೆ ಏನಾದರೂ ಅರ್ಥ ಇರುತ್ತದೆ. ಪೌಲನಿಗೆ ಪುನರುತ್ಥಾನವಾಗುವ ಖಂಡಿತ ಎಂಬದು ಗೊತ್ತಿತ್ತು ಆದ್ದರಿಂದಲೇ ಅವನು ಸುವಾರ್ತೆಯ ನಿಮಿತ್ತ ಅಪಾಯಗಳನ್ನು ಮತ್ತು ಮರಣವನ್ನು ಪ್ರತಿದಿನ ಎದುರಿಸಲು ಸಿದ್ಧನಾಗಿದ್ದನು. 2 ಕೊರಿಂಥ 11:23-27 ನಮಗೆ ಆ ಅಪಾಯಗಳು ಯಾವುವು ಎಂದು ತಿಳಿಸುತ್ತವೆ. "ನಾನು ಪ್ರತಿದಿನ ಸಾಯುತ್ತೇನೆ" ಎಂದರೆ ಬಹುಶಃ ಅವನಿಗೆ ಪ್ರತಿದಿನ ಎದುರಾಗುತ್ತಾ ಇದ್ದ ಹಿಂಸೆಗಳು ಅಥವಾ ಅಪಾಯಗಳು ಅವನಿಗೆ ಮರಣವನ್ನು ಬರಮಾಡುವಂಥವುಗಳಾಗಿದ್ದವು ಅನ್ನಿಸುತ್ತದೆ. **32**

**15:32** *"ಮೃಗಗಳೊಂದಿಗೆ"*– ಪೌಲನು ಇದನ್ನು ನಿಜವಾಗಿ ಅಥವಾ ಸಾಂಕೇತಿಕವಾಗಿ ಹೇಳಿರಬಹುದು. ಇದು ಅವನ ಜೀವಿತದಲ್ಲಿ ನಿಜವಾಗಿ ಸಂಭವಿಸಿರುವದಕ್ಕೆ ಯಾವುದೇ ದಾಖಲೆಗಳಿಲ್ಲ ಆದರೆ ಎಫೆಸದಲ್ಲಿ ಅವನು ಬೇರೆ ರೀತಿಯ ಅಪಾಯಗಳನ್ನು ಎದುರಿಸಿದನು. 2 ಕೊರಿಂಥ 1:8 ನೋಡಿರಿ. ಬಹುಶಃ ದುಷ್ಟರಾಗಿದ್ದ ಹಿಂಸಕರು ಅವನಿಗೆ ಮೃಗಗಳ ಹಾಗೆ ಕಂಡುಬಂದಿರಬಹುದು (ಕೀರ್ತನೆ 22:12-13; ಲೂಕ 13:32; ಅಪೊ 20:29 ರೊಂದಿಗೆ ಹೋಲಿಸಿ ನೋಡಿರಿ). **33**

**15:33** ವಿಶ್ವಾಸಿಗಳು ಒಂದುವೇಳೆ ತಪ್ಪಾದವರನ್ನು ಸ್ನೇಹಿತರನ್ನಾಗಿ ಮಾಡಿಕೊಂಡರೆ ಮುಂದೊಂದು ದಿನ ದೊಡ್ಡ ಅಪಾಯದಲ್ಲಿ ಸಿಕ್ಕಿಕೊಳ್ಳುತ್ತಾರೆ. ಇಲ್ಲಿ "ದುಸ್ಸಹವಾಸ"

ಎಂದರೆ ಪುನರುತ್ಥಾನವನ್ನು ನಿರಾಕರಿಸುವವರ ಸಹವಾಸ. ಬೇರೆ ರೀತಿಯ ಸ್ನೇಹಿತರೊಂದಿಗೆ ಸೇರುವದೂ ದುಸ್ಸಹವಾಸ ಎಂದು ಇಲ್ಲಿ ಹೇಳುವದು ಅವಶ್ಯವಾಗಿದೆಯೇ? **34**

**15:34** ತಪ್ಪಾದ ಬೋಧನೆಯು ತಪ್ಪಾದ ಜೀವನಶೈಲಿ ಮತ್ತು ಪಾಪಕ್ಕೆ ನಡೆಸುತ್ತದೆ. ಪುನರುತ್ಥಾನದ ನಿರಾಕರಣೆಯು ಕೊರಿಂಥದಲ್ಲಿದ್ದ ಕ್ರೈಸ್ತರ ನಡುವೆ ಈ ಫಲಿತಾಂಶವನ್ನು ಉಂಟು ಮಾಡಿತ್ತು. **35-49**

**15:35-49** ಪೌಲನು ಇಲ್ಲಿ ಕೆಲವು ಕ್ರೈಸ್ತರು ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾನೆ. ಅವರು ಅಪನಂಬಿಕೆಯಲ್ಲಿ ಕೇಳುತ್ತಾ ಇದ್ದರು ಮತ್ತು ಪುನರುತ್ಥಾನದ ವಿಷಯವನ್ನು ತಮಾಷೆ ಮಾಡುತ್ತಾ ಇದ್ದರು ಅನ್ನಿಸುತ್ತದೆ, ಯಾಕಂದರೆ ಅಂಥ ಪ್ರಶ್ನೆಗಳನ್ನು ಕೇಳುವವರಿಗೆ ಅವನು "ಮೂಢರು" (ವ 36) ಎಂದು ಹೇಳಿದ್ದಾನೆ. ಅವನು ಹೇಳುವದೇನೆಂದರೆ ಮಾನವನ ಶರೀರ (ಅವನು ಇಲ್ಲಿ ಕೇವಲ ವಿಶ್ವಾಸಿಗಳ ಶರೀರದ ಬಗ್ಗೆ ಮಾತ್ರ ಮಾತನಾಡುತ್ತಾ ಇದ್ದಾನೆ) ಬೀಜದಂತಿದೆ. ಅದು ಒಣಗಿದ ನಂತರ, ಈಗ ಕಾಣಿಸುವ ಹಾಗೆ ಇರದೆ ಬೇರೆ ರೂಪವನ್ನು ಪಡೆದುಕೊಳ್ಳುತ್ತದೆ. ವಿವಿಧ ರೀತಿಯ ದೇಹಗಳು ಮತ್ತು ವಿವಿಧ ರೀತಿಯ ಪ್ರಭಾವಗಳು ಇವೆ, ದೇವರು ಶಾರೀರಿಕ ವಿಷಯಗಳನ್ನು ತೆಗೆದುಕೊಳ್ಳುವನು ಮತ್ತು ತನಗೆ ಇಷ್ಟ ಬರುವ ಹಾಗೆ ಅವುಗಳನ್ನು ಮಾಡುವನು. ವಿಶ್ವಾಸಿಗಳ ಶರೀರಗಳನ್ನೂ ಆತನು ಹೀಗೆಯೇ ಮಾಡಲು ಶಕ್ತನು. ಆದ್ದರಿಂದ ಆತನು ತನಗೆ ಬೇಕಾದ ಹಾಗೆ ಮಾಡುವನು. **42-44**

**15:42-44** ಪುನರುತ್ಥಾನದ ನಂತರ ವಿಶ್ವಾಸಿಗಳು ಮಹಿಮೆ ಮತ್ತು ಬಲವುಳ್ಳ ದೇಹಗಳನ್ನು ಹೊಂದುವರು, ಅವುಗಳು ಎಂದಿಗೂ ಸಾಯುವದಿಲ್ಲ. ಅವರು ಆತ್ಮೀಕವಾದ ಅಸ್ತಿತ್ವಕ್ಕೆ ಸಂಪೂರ್ಣವಾಗಿ ತಕ್ಕವರಾಗಿರುವರು. ಕ್ಲುಪ್ತವಾಗಿ ಹೇಳುವದಾದರೆ, ಅವರು ಯೇಸು ಕ್ರಿಸ್ತನ ಪುನರುತ್ಥಾನ ಹೊಂದಿದ ದೇಹದಂತಿರುವರು (ವ 49; ಫಿಲಿಪ್ಪಿ 3:21; ರೋಮಾ 8:29; 1 ಯೋಹಾನ 3:2. ಲೂಕ 24:31,36,51; ಯೋಹಾನ 20:19,26 ನೋಡಿರಿ). **45**

**15:45** ಆದಿ 2:7. "ಕಡೆಯ ಆದಾಮನು" ಎಂದರೆ ಯೇಸು ಕ್ರಿಸ್ತನು ಶಿರಸ್ಸು, ಪ್ರತಿನಿಧಿ ಮತ್ತು ಹೊಸ ರೀತಿಯ ಜನರ ಮೂಲಜನಕನಾಗಿರುವನು. ಆದಾಮನಿಗೆ ಜೀವವಿತ್ತು. ಯೇಸು ಕ್ರಿಸ್ತನು ಜೀವವನ್ನು ಕೊಡುತ್ತಾನೆ (ಯೋಹಾನ 5:21-29; 11:25-26; 14:6). "ಬದುಕಿಸುವ ಆತ್ಮನು" ಎಂದರೆ ಯೇಸು ಕ್ರಿಸ್ತನಿಗೆ ನಿಜವಾದ ದೇಹವಿರಲಿಲ್ಲ ಎಂದಲ್ಲ (ಇಬ್ರಿ 2:14 ನೋಡಿರಿ). ಆದರೆ ಆತನು ಮಾನವನಾಗುವ ಮೊದಲು ಆತ್ಮಸ್ವರೂಪನಾಗಿದ್ದನು (ಯೋಹಾನ 4:24). **46**

**15:46** ಅವನ ಮಾತಿನ ಅರ್ಥವೇನೆಂದರೆ ಮೊದಲನೆಯ ಆದಾಮನು ಸಮಯದಲ್ಲಿ ಮೊದಲು ಬಂದಿದ್ದಾನೆ ಅಷ್ಟೇ. **47**

- **15:47** ಆದಿ 2:7; 3:19; ಲೂಕ 2:11; ಯೋಹಾನ 1:14; 3:13; 6:38,51; ಫಿಲಿಪ್ಪಿ 2:6-7. **48**

**15:48** ಮಾನವರು ಆದಾಮನಿಂದ ಪಡೆದಿರುವ ದೇಹಗಳು ಸತ್ತುಹೋಗುತ್ತವೆ ಮತ್ತು ಪುನಃ ಮಣ್ಣಿಗೆ ಸೇರುತ್ತವೆ. "ಪರಲೋಕದವರು" ಯೇಸು ಕ್ರಿಸ್ತನಿಂದ ಹೊಂದುವರು ಅದು ಉನ್ನತವಾದದ್ದಾಗಿದೆ. ಕ್ರಿಸ್ತನಲ್ಲಿರುವ ವಿಶ್ವಾಸಿಗಳು "ಪರಲೋಕ ಸಂಬಂಧಪಟ್ಟವರಾದ್ದರಿಂದ" ಅಥವಾ "ಪರಲೋಕದವರಾದ್ದರಿಂದ" – ಅವರ ಜೀವಿತವು ಅಲ್ಲಿರುತ್ತದೆ (ಎಫೆ 2:6; ಕೊಲೊ 3:1-3), ಅವರ ನಿರೀಕ್ಷೆಯು ಅಲ್ಲಿರುತ್ತದೆ (ಇಬ್ರಿ 6:19-20), ಅವರ ತಲೆ ಆ ಕಡೆಯೇ ಇರುತ್ತದೆ (ಎಫೆ 1:22), ಅವರ ಸ್ವಾಸ್ಥ್ಯವು ಅಲ್ಲಿರುತ್ತದೆ (1 ಪೇತ್ರ 1:4), ಅವರ ಮನೆ ಅಲ್ಲಿರುತ್ತದೆ (ಯೋಹಾನ 14:2), ಅವರ ಪೌರತ್ವವು ಅಲ್ಲಿರುತ್ತದೆ (ಫಿಲಿಪ್ಪಿ 3:20). **49**

**15:49** 47-49 ವಚನಗಳಲ್ಲಿ ಯೇಸು ಕ್ರಿಸ್ತನನ್ನು ಮೂರು ಸಲ ಪರಲೋಕದಿಂದ ಬಂದ ಮನುಷ್ಯನು ಎಂದು ಕರೆಯಲಾಗಿದೆ. ಆತನು ಭೂಲೋಕಕ್ಕೆ ಬರುವ ಮೊದಲು ಪರಲೋಕದಲ್ಲಿ ಮನುಷ್ಯನಾಗಿದ್ದನು ಎಂಬದು ಇದರ ಅರ್ಥವಲ್ಲ ಬದಲಾಗಿ ಆತನು ಭೂಲೋಕಕ್ಕೆ ಮನುಷ್ಯನಾಗಿ ಬರುವ ಮೊದಲು ಪರಲೋಕದಲ್ಲಿದ್ದನು ಎಂಬದಾಗಿದೆ.

*"ಸಾರೂಪ್ಯ"*– ವ 42-44. **50**

**15:50** ವಿಶ್ವಾಸಿಗಳು ಈಗ ದೇವರ ರಾಜ್ಯದಲ್ಲಿ ಇದ್ದಾರೆ (ಕೊಲೊ 1:13). ಆದರೆ ಪೌಲನು ಇಲ್ಲಿ "ಬಾಧ್ಯವಾಗಿ" ಹೊಂದುವದರ ಬಗ್ಗೆ ಇಲ್ಲಿ ಮಾತನಾಡುತ್ತಾ ಇದ್ದಾನೆ. ರೋಮಾ 8:17-23; ಎಫೆ 1:14; 1 ಪೇತ್ರ 1:4. ಮರಣಕ್ಕೆ ಒಳಗಾಗುವ ಈ ದೇಹಗಳಿಂದ ನಾವು ಅವುಗಳನ್ನು ಪಡೆಯಲು ಆಗುವದಿಲ್ಲ. **51-52**

**15:51-52** 1 ಥೆಸ 4:13-18; ಯೋಹಾನ 14:3. ವಿಶ್ವಾಸಿಗಳೆಲ್ಲರೂ ನಿದ್ರೆಹೋಗುವದಿಲ್ಲ (ಸಾಯುವದಿಲ್ಲ). ಯೇಸು ಕ್ರಿಸ್ತನು ಹಿಂದಿರುಗಿ ಬರುವಾಗ ಕೆಲವರು ಜೀವಂತವಾಗಿರುತ್ತಾರೆ ಮತ್ತು ಕೂಡಲೇ ಬದಲಾಗುತ್ತಾರೆ. **51**

**15:51** *"ಗುಪ್ತವಾಗಿದ್ದ ಸಂಗತಿ"*– ಅಂದರೆ ದೇವರಿಂದ ಬರುವ ಪ್ರಕಟನೆ, ಮನುಷ್ಯರು ಇದನ್ನು ಯಾವ ರೀತಿಯಲ್ಲಿಯೂ ತಿಳಿದುಕೊಳ್ಳಲಾರರು. **52**

**15:52** – "ಕಡೇ ತುತೂರಿ" ಮತ್ತಾಯ 24:30-31 ನೋಡಿರಿ (ಯೇಸು ಕ್ರಿಸ್ತನು ಹೇಳಿರುವ ಒಂದೇ ತುತ್ತೂರಿ) ಮತ್ತು ಪ್ರಕ 11:15 (ಪ್ರಕಟನೆಯ ಪುಸ್ತಕದಲ್ಲಿರುವ ಕಡೇ ತುತ್ತೂರಿ) – ಮತ್ತಾಯ ಮತ್ತು ಪ್ರಕಟನೆಯ ಪುಸ್ತಕದ ಈ ವಚನಗಳಲ್ಲಿ ಬರೆಯಲ್ಪಟ್ಟಿರುವ ಘಟನೆಗಳು ಸಂಭವಿಸುವ ಮೊದಲು ವಿಶ್ವಾಸಿಗಳು ಪುನರುತ್ಥಾನಗೊಳ್ಳುವದು ಮತ್ತು "ಕಡೇ" ತುತೂರಿಯ ಸಮಯದಲ್ಲಿ ಇರುವದು ಹೇಗೆ ಎಂಬದನ್ನು ತಿಳಿದುಕೊಳ್ಳುವದು ಕಷ್ಟ. ಈ ಸಮಯದಲ್ಲಿ ಭಕ್ತರು (1 ಥೆಸ 4:16-17) ಎತ್ತಲ್ಪಡುವದನ್ನು ಪೌಲನು ತಿಳಿಸಿರುವ ಕ್ರಮವನ್ನು ನಾವು ಗಂಭೀರವಾಗಿ ಪರಿಗಣಿಸಬೇಕು – ಅದು ಯಾವಾಗ ಆಗುವದು ಎಂಬದನ್ನು ಅವನು ನೇರವಾಗಿ ಇಲ್ಲಿ ಮಾತ್ರವೇ ಹೇಳಿದ್ದಾನೆ. (ಗ್ರೀಕ್ ಪದಗಳು ತುತೂರಿಯ – ನಾಮಪದ

ಮತ್ತು ಕ್ರಿಯಾಪದವನ್ನು ಸೂಚಿಸುತ್ತವೆ – ಹೊಸ ಒಡಂಬಡಿಕೆಯಲ್ಲಿ 23 ಸಲ ಇವುಗಳು ಬರೆಯಲ್ಪಟ್ಟಿವೆ – 1 ಕೊರಿಂಥ 14:8; ಇಲ್ಲಿ ಎರಡು ಸಲ 15:52; ಮತ್ತಾಯ 6:2; 24:31; 1 ಥೆಸ 4:16; ಇಬ್ರಿ 12:19; ಪ್ರಕ 1:10; 4:1; 8:2; ರಲ್ಲಿ ಎರಡು ಸಲ; 8:6; 8:7-8,10,12 ರಲ್ಲಿ ಎರಡು ಸಲ; 8:13; 9:1,13,14; 10:7; 11:15). **53**

**15:53** ವಚನಗಳು 42-44,49. **54**

- **15:54** ಯೆಶಾಯ 25:8. **55**

- **15:55** ಹೋಶೇಯ 13:14. **56**

**15:56** ಮರಣಕ್ಕೆ ಕೊಂಡಿಯೇ ಇಲ್ಲ. ಪಾಪವು ಅದರ ಕೊಂಡಿಯಾಗಿದೆ (ರೋಮಾ 5:12; 6:23), ಮತ್ತು ಪಾಪದಲ್ಲಿ ಸಾಯುವದೆಂದರೆ ಶಾಶ್ವತವಾಗಿ ನಾಶವಾಗುವದಾಗಿದೆ. ಯೇಸು ಕ್ರಿಸ್ತನು ವಿಶ್ವಾಸಿಗಳ ಪಾಪಗಳನ್ನು ಪರಿಹಾರ ಮಾಡುವ ಮೂಲಕ ಈ ಕೊಂಡಿಯನ್ನು ತೆಗೆದುಹಾಕಿದ್ದಾನೆ ಆದ್ದರಿಂದ ಅವರಿಗೆ ಮರಣವೆಂದರೆ ಅದು ಕ್ರಿಸ್ತನೊಂದಿಗೆ ಜೀವಕ್ಕೆ ನಡೆಸುವ ಬಾಗಿಲಾಗಿದೆ (ಫಿಲಿಪ್ಪಿ 1:21-23).

"*ಧರ್ಮಶಾಸ್ತ್ರ*"– ಇದರ ಅರ್ಥ ಮೋಶೆಯ ಮೂಲಕ ಪ್ರಕಟವಾಗಿರುವ ದೇವರ ಧರ್ಮಶಾಸ್ತ್ರ. ಧರ್ಮಶಾಸ್ತ್ರವು ನಮ್ಮೆಲ್ಲರನ್ನು ಅಪರಾಧಿಗಳೆಂದು ಹೇಳುತ್ತದೆ (ರೋಮಾ 3:19-20), ಅಪರಾಧಗಳನ್ನು ಸಾಧ್ಯವಾಗಿಸುತ್ತದೆ (ರೋಮಾ 4:15) ಮತ್ತು ನಮ್ಮ ಪಾಪದ ಸ್ವಭಾವವು ಅದಕ್ಕೆ ವಿರುದ್ಧವಾಗಿ ತಿರುಗಿಬೀಳುವಂತೆ ಹಾಗೂ ಇನ್ನೂ ಹೆಚ್ಚಾಗಿ ಪಾಪ ಮಾಡುವಂತೆ ಮಾಡುತ್ತದೆ (ರೋಮಾ 7:5-11). **57**

**15:57** "*ಜಯ*"– ಆತನು ನಮಗೆ ಪಾಪ ಮತ್ತು ಮರಣ ಹಾಗೂ ನಮಗೆ ನಿತ್ಯವಾದ ಹಾನಿಯನ್ನುಂಟು ಮಾಡುವ ಕಾರ್ಯಗಳ ಮೇಲೆ ಜಯವನ್ನು ಕೊಡುತ್ತಾನೆ (ರೋಮಾ 8:37; 2 ಕೊರಿಂಥ 2:14; 1 ಯೋಹಾನ 5:4). ಪಾಪ ಮತ್ತು ಮರಣ ವಿಶ್ವಾಸಿಗಳ ಮೇಲೆ ಜಯವನ್ನು ಹೊಂದಲಾರವು. ಇದಕ್ಕೆ ಕಾರಣ ಯೇಸು ಕ್ರಿಸ್ತನು ಮರಣ ಮತ್ತು ಪಾಪದ ಮೇಲೆ ಜಯಹೊಂದಿದ್ದಾನೆ ಮತ್ತು ಆತನು ನಮ್ಮೊಂದಿಗೆ ತನ್ನ ಜಯವನ್ನು ಹಂಚಿಕೊಳ್ಳುತ್ತಾನೆ. ಯೇಸು ಕ್ರಿಸ್ತನ ಪುನರುತ್ಥಾನವು ಇವೆಲ್ಲವುಗಳಿಗೆ ಪುರಾವೆಯಾಗಿದೆ. **58**

**15:58** "*ಆದದರಿಂದ*"– ಪೌಲನು ಮಹದಾದ ಸಿದ್ಧಾಂತಗಳು ಮತ್ತು ದೇವರಿಂದ ಹೊಂದಿದ ಸತ್ಯದ ಪ್ರಕಟನೆಗಳನ್ನು ಕಲಿಸಿದ್ದಾನೆ. ಜನರು ಯಾವಾಗಲೂ ಆ ಸತ್ಯಗಳನ್ನು ತಮ್ಮ ಜೀವಿತಗಳಿಗೆ ಅಳವಡಿಸಿಕೊಳ್ಳಬೇಕು ಮತ್ತು ಅವುಗಳ ನಿಮಿತ್ತ ಉತ್ತಮರಾಗಬೇಕೆಂದು ಆತನು ಯಾವಾಗಲೂ ಬಯಸಿದನು. ರೋಮಾ 12:1; 2 ಕೊರಿಂಥ 7:1; ಗಲಾ 5:1; ಎಫೆ 4:1; ಕೊಲೊ 3:5 ರೊಂದಿಗೆ ಹೋಲಿಸಿ ನೋಡಿರಿ.

"*ಸ್ಥಿರಚಿತ್ತರಾಗಿಯೂ, ನಿಶ್ಚಲರಾಗಿಯೂ ಇರಿ*"– ವ 1; 16:13; ರೋಮಾ 5:2; 2 ಕೊರಿಂಥ 1:24; ಗಲಾ 5:1; ಎಫೆ 6:11,13,14; ಕೀರ್ತನೆ 15:5; 16:8.

*“ಪ್ರಯಾಸ”*– ವ 10; ಮತ್ತಾಯ 21:28; 24:45-46; ಲೂಕ 19:11,24; ಯೋಹಾನ 4:34-36; 2 ಕೊರಿಂಥ 9:8; ಕೊಲೊ 1:10; ಇಬ್ರಿ 6:10; 13:21; ಪ್ರಕ 22:12; ಪ್ರಸಂಗಿ 9:10. ಸತ್ತವರು ಪುನರುತ್ಥಾನಗೊಳ್ಳುವದರಿಂದ, ನಮ್ಮ ಪ್ರಯಾಸವು ನಿಷ್ಫಲವಾಗುವದಿಲ್ಲ. ಆಗ ಪ್ರತಿಯೊಬ್ಬನು ತನ್ನ ಪ್ರಯಾಸಗಳಿಗೆ ತಕ್ಕ ಪ್ರತಿಫಲವನ್ನು ಪಡೆಯುವನು. ಆದರೆ ರೀತಿಯ ಪ್ರಯಾಸವು ನಿಷ್ಫಲವಾಗುವದಿಲ್ಲ ಎಂಬದನ್ನು ಗಮನಿಸಿರಿ – “ಕರ್ತನ ಕೆಲಸ” ನಿಷ್ಫಲವಾಗುವದಿಲ್ಲ. ನಾವು ಕರ್ತನ ಬಲದಿಂದ, ಕರ್ತನ ಮಾರ್ಗದರ್ಶನದನುಸಾರವಾಗಿಯೇ, ಕರ್ತನ ಕೆಲಸವನ್ನು ಮಾಡಬೇಕು.

# 16 1-4

**16:1-4** ಅಪೊ 24:17; ರೋಮಾ 15:26; 2 ಕೊರಿಂಥ 8—9 ಅಧ್ಯಾಯಗಳು. ಯೆರೂಸಲೇಮಿನಲ್ಲಿ ಜೀವಿಸುತ್ತಿದ್ದ ವಿಶ್ವಾಸಿಗಳು ಬಡವರಾಗಿದ್ದರು ಮತ್ತು ಅವಶ್ಯಕತೆಗಳಲ್ಲಿದ್ದರು. ಆದ್ದರಿಂದ ಅವರಿಗೆ ಆರ್ಥಿಕವಾಗಿ ಸಹಾಯ ಮಾಡುವ ಸಲುವಾಗಿ ಬೇರೆ ಸಭೆಗಳಲ್ಲಿ ಕೇಳಿಕೊಂಡನು. **2**

**16:2** *“ವಾರದ ಮೊದಲನೆಯ ದಿನ”*– ಭಾನುವಾರ. ಹಾಗೆಯೇ ಅಪೊ 20:7; ಪ್ರಕ 1:10 ನೋಡಿರಿ. ಇದು ಸೂಚಿಸುವದೇನೆಂದರೆ ಯೇಸು ಕ್ರಿಸ್ತನ ಪುನರುತ್ಥಾನದ ಕೂಡಲೇ ವಿಶ್ವಾಸಿಗಳು ಯೆಹೂದ್ಯರ ಸಬ್ಬತ್ ದಿನವಾದ ಶನಿವಾರಗಳಂದು ಆರಾಧನೆಗೆ ಸೇರಿ ಬರುವ ಬದಲು ಭಾನುವಾರಗಳಂದು ಆರಾಧನೆಗೆ ಸೇರಿ ಬರಲು ಪ್ರಾರಂಭಿಸಿದರು. **3**

**16:3** ಈ ಹಣದ ವಿಷಯದಲ್ಲಿ ಪೌಲನು ತೋರಿದ ಜವಾಬ್ದಾರಿಕೆಯನ್ನು ಗಮನಿಸಿರಿ. ಅದನ್ನು ಯಾವುದೇ ರೀತಿಯಲ್ಲಿಯೂ ತಪ್ಪಾಗಿ ಉಪಯೋಗಿಸಬಾರದು ಅಥವಾ ತಪ್ಪಾದ ಉಪಯೋಗದ ಬಗ್ಗೆ ಯಾವುದೇ ಸಂದೇಹವೂ ಕಾಣಿಸಿಕೊಳ್ಳಬಾರದು ಎಂದು ಅವನು ಬಯಸಿದನು – 2 ಕೊರಿಂಥ 8:20-21. **5**

**16:5** *“ಮಕೆದೊನ್ಯ”*– ಅಪೊ 19:21; 20:1-2. **6**

**16:6** *“ನೀವು ನನ್ನನ್ನು ಸಾಗಕಳುಹಿಸಬೇಕು”*– ರೋಮಾ 15:24 ರೊಂದಿಗೆ ಹೋಲಿಸಿ ನೋಡಿರಿ. **9**

**16:9** *“ಬಾಗಿಲು”*– ಅಪೊ 14:27; 2 ಕೊರಿಂಥ 2:12; ಕೊಲೊ 4:3; ಪ್ರಕ 3:7-8. ಕರ್ತನು ನಮಗಾಗಿ ಸೇವೆಯ ಬಾಗಿಲನ್ನು ತೆರೆಯುವಾಗ, ನಾವು ಅದರೊಳಗೆ ಹೋಗಬೇಕು ಎಂಬದು ಅದರ ಅರ್ಥವಾಗಿದೆ. ಆದರೆ ಸುವಾರ್ತೆಯ ವೈರಿಗಳು ನಾವು ಅದರೊಳಗೆ ಹೋಗದಂತೆ ತಡೆಯಲು ಪ್ರಯತ್ನಿಸುತ್ತಾರೆ. **10**

**16:10** *“ತಿಮೊಥೆ”*– ಅಪೊ 16:1; 1 ತಿಮೊ 1:2; 2 ತಿಮೊ 2:2.

*“ಭಯವಿಲ್ಲದೆ”*– 1 ತಿಮೊ 4:12. ತಿಮೊಥೆಯನು ಯೌವನಸ್ಥನಾಗಿದ್ದನು ಮತ್ತು

ಬಹುಶಃ ಹೆದರಿಕೊಳ್ಳುವವನಾಗಿದ್ದನು ಹಾಗೂ ಕೊರಿಂಥದವರು ಯಾವಾಗಲೂ ಒಂದೇ ರೀತಿಯಲ್ಲಿ ಸಹಾಯ ಮಾಡುವವರಾಗಿರಲಿಲ್ಲ (4:1,8-13). **12**

**16:12** *"ಅಪೊಲ್ಲೋಸನು"*– 1:12; 3:4-9; ಅಪೊ 18:24-28. **13**

**16:13** *"ಎಚ್ಚರವಾಗಿರಿ"*– ಅಪೊ 20:28; ರೋಮಾ 16:17; ಕೊಲೊ 4:2; 1 ಥೆಸ 5:6; 2 ತಿಮೊ 4:5.

*"ದೃಢವಾಗಿ ನಿಲ್ಲಿರಿ"*– 15:58.

*"ಬಲಗೊಳ್ಳಿರಿ"*– ಎಫೆ 6:10; 2 ತಿಮೊ 2:3; ಯೆಶಾಯ 40:31. **14**

**16:14** *"ಪ್ರೀತಿ"*– 10:24; 13:1-13; ಯೋಹಾನ 13:34. **15**

**16:15** ಅಖಾಯ ಪ್ರದೇಶದಲ್ಲಿ ಕೊರಿಂಥ ಪಟ್ಟಣವು ಇತ್ತು.

*"ದೇವಜನರಿಗೆ ಸೇವೆಮಾಡುವದಕ್ಕಾಗಿ ಕೈ ಹಾಕಿದ್ದರು"*– ಜೊತೆಯಲ್ಲಿರುವ ವಿಶ್ವಾಸಿಗಳಿಗೆ ಸತತವಾಗಿ ಮತ್ತು ಪೂರ್ಣಹೃದಯದಿಂದ ಸಹಾಯ ಮಾಡುವ ಆತ್ಮೀಕ ವರವನ್ನು ಅವರು ಉಪಯೋಗಿಸುತ್ತಾ ಇದ್ದರು (12:28). ಸಾರ್ವಜನಿಕ ಅಥವಾ ಚಿರಪರಿಚಿತವಾದ ವರಗಳು ಇಲ್ಲದೆ ಇರುವವರು ಉಳಿದವರೆಲ್ಲರಿಗೆ ಈ ವಿಷಯದಲ್ಲಿ ದೊಡ್ಡ ಮಾದರಿಯಾಗಿದ್ದಾರೆ. **16**

**16:16** ಇದರ ಅರ್ಥ ವಿಶ್ವಾಸಿಗಳ ಸೇವೆ ಮಾಡುವ ಮತ್ತು ಅವರಿಗೆ ಸಹಾಯ ಮಾಡುವ ಕಾರ್ಯದಲ್ಲಿ ಅವರ ನಾಯಕತ್ವವನ್ನು ಅಂಗೀಕರಿಸಿಕೊಳ್ಳುವದಾಗಿದೆ. **17**

**16:17** *"ನೀವು ಇಲ್ಲದ್ದರಿಂದ ನನಗುಂಟಾದ ಕೊರತೆ"*– ನೀವು ನನಗೆ ಆರ್ಥಿಕವಾಗಿ ಸಹಾಯ ಮಾಡಿಲ್ಲ ಎಂದು ಅವನು ಅವರಿಗೆ ಜ್ಞಾಪಕಪಡಿಸುತ್ತಾ ಇಲ್ಲ (9:12-18 ನೋಡಿರಿ). ಅವನ ಮಾತಿನ ಅರ್ಥ ಅವರ ಅನ್ಯೋನ್ಯತೆಯನ್ನು ಅವನು ಕಳೆದುಕೊಂಡಿದ್ದನು ಮತ್ತು ಅವರ ಬಗ್ಗೆ ಯಾವ ಸುದ್ದಿಯೂ ತಿಳಿಯದೆ ಚಿಂತಿಸಿದನು ಎಂಬದಾಗಿದೆ. **18**

**16:18** ಇತರರಿಗೆ ಉಪಶಮನವಾಗುವಂತೆ ನಡೆದುಕೊಳ್ಳುವ ಜನರಾಗಿರುವದು ಉತ್ತಮವಾಗಿದೆ. **19**

**16:19** ಆಸ್ಯ ಸೀಮೆಯ ಪ್ರಮುಖ ಪಟ್ಟಣವಾದ ಎಫೆಸದಿಂದ ಪೌಲನು ಈ ಪತ್ರಿಕೆಯನ್ನು ಬರೆದಿದ್ದಾನೆ.

*"ಅಕ್ವಿಲ ಮತ್ತು ಪ್ರಿಸ್ಕಿಲ್ಲ"*– ಅಪೊ 18:1-3,26; ರೋಮಾ 16:3-4.

*"ಅವರ ಮನೆಯಲ್ಲಿ"*– ರೋಮಾ 16:5. **20**

**16:20** *"ಮುದ್ದು"*–ರೋಮಾ 16:16. **21**

**16:21** ಪೌಲನು ಕೆಲವೊಮ್ಮೆ ತನ್ನ ಪತ್ರಿಕೆಗಳನ್ನು ಬಾಯಿಂದ ಹೇಳುತ್ತಾ ಇದ್ದನು ಮತ್ತು ಅವುಗಳನ್ನು ಬೇರೆಯವರು ಬರೆಯುತ್ತಾ ಇದ್ದರು (ರೋಮಾ 16:22). ಆದರೆ ಅವರು ಯಾವಾಗಲೂ ವಂದನೆಗಳನ್ನು ತನ್ನ ಸ್ವಂತ ಕೈಯಿಂದ ಬರೆಯುತ್ತಾ ಇದ್ದನು (2 ಥೆಸ 3:17).

**22**

**16:22** ಕರ್ತನಾದ ಯೇಸು ಕ್ರಿಸ್ತನ ಮೇಲಿರುವ ಪ್ರೀತಿಯೇ ಆತ್ಮೀಕ ಜೀವಿತಕ್ಕೆ ಸಾಕ್ಷಿಯಾಗಿದೆ (1 ಯೋಹಾನ 3:14; 4:7-8,16). ಆತನ ಮೇಲೆ ಪ್ರೀತಿ ಇಲ್ಲವೆಂದರೆ ಅದು ಆತ್ಮೀಕ ಮರಣದ ಪುರಾವೆಯಾಗಿದೆ. ಒಂದುವೇಳೆ ಯೇಸು ಕ್ರಿಸ್ತನನ್ನು ಪ್ರೀತಿಸಲು ನಮ್ಮಿಂದ ಆಗದೆ ಹೋದರೆ ಅಥವಾ ನಾವು ಪ್ರೀತಿಸದೆ ಇದ್ದರೆ, ನಾವು ಭ್ರಷ್ಟರಾಗುತ್ತೇವೆ, ಇನ್ನೂ ಪಾಪದಲ್ಲಿಯೇ ಮುಂದುವರೆಯುತ್ತೇವೆ ಮತ್ತು ದೇವರ ಶಾಪಕ್ಕೆ ಗುರಿಯಾಗುತ್ತೇವೆ. ಕರ್ತನಾದ ಯೇಸು ಕ್ರಿಸ್ತನ ವಿಷಯಕ್ಕೆ ಬಂದರೆ ನಮ್ಮ ಹೃದಯದ ಸ್ಥಿತಿಗಿಂತ ದೊಡ್ಡದು ಯಾವುದೂ ಇಲ್ಲ.

"*ಕರ್ತನು ಬರುತ್ತಾನೆ*"– ಪ್ರಕ 22:20. ಅರಮಾಯ ಭಾಷೆಯಲ್ಲಿ ಇದನ್ನು "ಮಾರನಾಥ" ಎಂದು ಹೇಳಲಾಗುತ್ತದೆ. **23**

- **16:23** 1:3; ರೋಮಾ 1:7; 16:20 ನೋಡಿರಿ. **24**

**16:24** ಪೌಲನಿಗೆ ಕೊರಿಂಥದಲ್ಲಿ ವಿರೋಧಿಗಳು ಇದ್ದರು, ಮತ್ತು ಅಲ್ಲಿದ್ದವರಲ್ಲಿ ಕೆಲವರು ಲೌಕಿಕರು, ಅಹಂಕಾರಿಗಳು, ವಿಭಜನೆಗಳನ್ನು ಮಾಡುವವರು, ಆತ್ಮೀಕ ವರಗಳನ್ನು ಕಡೆಗಣಿಸುವವರು ಮತ್ತು ಅವನ ಮೇಲೆ ದೂರು ಹೇಳುವವರು ಇದ್ದರು. ಅವರನ್ನು ತಿದ್ದುವ ಸಲುವಾಗಿ ಅವನು ಕೆಲವು ಗಂಭೀರವಾದ ಮಾತುಗಳನ್ನು ಹೇಳಿದ್ದಾನೆ. ಆದರೆ ಅವನು ಅವರೆಲ್ಲರಿಗೆ ಪ್ರೀತಿಯನ್ನು ತೋರಿಸಿದನು. ಆತನು 13:4-7 ರಲ್ಲಿ ಏನು ಬರೆದಿದ್ದಾನೆ ಎಂಬದನ್ನು ಹೋಲಿಸಿ ನೋಡಿರಿ – ಪೌಲನು ತಾನು ಇತರರಿಗೆ ಕಲಿಸಿದ ವಿಷಯಗಳನ್ನು ಸಂತೋಷದಿಂದ ಅಭ್ಯಾಸ ಮಾಡುತ್ತಾ ಇದ್ದನು.